## ನೀನಾಸಮ್ ಸಂಸ್ಕೃತಿ ಶಿಬಿರ

ಅಕ್ಟೋಬರ್ ೨೦೦೯

ಕಳೆದ ೨ ದಶಕಗಳಿಂದ ನೀನಾಸಮ್ ಪ್ರತಿ ಅಕ್ಟೋಬರ್‌ನಲ್ಲಿ ಚಲನಚಿತ್ರ-ಸಂಸ್ಕೃತಿ ಶಿಬಿರಗಳನ್ನು ನಡೆಸುತ್ತ ಬಂದಿದೆ. ಈ ವರ್ಷದ ಸಂಸ್ಕೃತಿ ಶಿಬಿರವೂ ಅದೇ ಮಾದರಿಯಲ್ಲಿ ಯೋಜಿತವಾಗಿದ್ದು, **ಅಕ್ಟೋಬರ್ ೪ರಿಂದ ೧೧ರವರೆಗೆ** – ಏಳುದಿನ – ನಡೆಯುತ್ತದೆ.

ಈ ಶಿಬಿರದಲ್ಲಿ ರಂಗಭೂಮಿ, ಸಾಹಿತ್ಯ, ಸಂಗೀತ, ನೃತ್ಯ, ಚಲನಚಿತ್ರ ಮುಂತಾದ ಸಾಂಸ್ಕೃತಿಕ ಮಾಧ್ಯಮಗಳ ಸ್ವರೂಪ, ವೈವಿಧ್ಯ, ಮೀಮಾಂಸೆ, ವಿಮರ್ಶೆ, ಈ ಮಾಧ್ಯಮಗಳ ಪರಸ್ಪರ ಸಂಬಂಧ ಹಾಗೂ ಒಟ್ಟೂ ಸಮಾಜದೊಂದಿಗೆ ಸಂಸ್ಕೃತಿಯ ಸಂಪರ್ಕ – ಈ ವಿಷಯಗಳ ಬಗ್ಗೆ ಅಭ್ಯಾಸ, ಚರ್ಚೆ, ವಿಚಾರವಿನಿಮಯ ನಡೆಯುತ್ತದೆ. ಜತೆಗೆ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳ ಉತ್ಸವ ನಡೆಯುತ್ತದೆ. ಶಿಬಿರ ಪ್ರಾರಂಭವಾಗುವುದು ಒಟ್ಟೂ ಕಾರ್ಯಕ್ರಮದ ಸ್ಥೂಲ ಸ್ವರೂಪವನ್ನು ಪರಿಚಯಿಸುವ ಕಿರು ಅಧಿವೇಶನದಿಂದ. ಆಮೇಲಿನ ದಿನಗಳಲ್ಲಿ ರಂಗಭೂಮಿಯ ಬಗ್ಗೆ, ಸಂಗೀತ-ನೃತ್ಯ ಮಾಧ್ಯಮಗಳ ಬಗ್ಗೆ, ಸಾಹಿತ್ಯದ ವಿವಿಧ ಪ್ರಕಾರಗಳ ಬಗ್ಗೆ, ಚಲನಚಿತ್ರ ಸಹೃದಯತೆಯ ಬಗ್ಗೆ ಮತ್ತು ಒಟ್ಟೂ ಸಂಸ್ಕೃತಿ-ಸಂವಹನದ ಪ್ರಕ್ರಿಯೆಯ ಬಗ್ಗೆ ಉಪನ್ಯಾಸ ಪ್ರಾತ್ಯಕ್ಷಿಕೆ-ಚರ್ಚೆಗಳು ನಡೆಯುತ್ತವೆ. ಪ್ರತಿಯೊಂದು ವಿಷಯದ ಬಗ್ಗೆ ಶಿಬಿರ ನಡೆಯುವಾಗಲೂ ಆಯಾ ಮಾಧ್ಯಮದ ಆಯ್ದ ಕೃತಿಗಳನ್ನು ಪ್ರಾಯೋಗಿಕವಾಗಿ ಬಳಸಿಕೊಳ್ಳಲಾಗುತ್ತದೆ. ಶಿಬಿರ ಪ್ರತಿನಿತ್ಯ ಬೆಳಿಗ್ಗೆ ೯ ಗಂಟೆಯಿಂದ ೧ ಗಂಟೆ ಹಾಗೂ ಮಧ್ಯಾಹ್ನ ೨-೩೦ರಿಂದ ೬ರತನಕ ನಡೆಯುತ್ತದೆ. ಇದಲ್ಲದೆ ಪ್ರತಿದಿನ ಸಂಜೆ ರಂಗ ಪ್ರದರ್ಶನಗಳು (ತಿರುಗಾಟ ೨೦೦೯ರ ಪ್ರಥಮ ಪ್ರದರ್ಶನಗಳು), ಸಂಗೀತ, ನೃತ್ಯ ಇತ್ಯಾದಿ ಕಾರ್ಯಕ್ರಮಗಳು – ಶಿಬಿರಾರ್ಥಿಗಳು ಮತ್ತು ಸಾರ್ವಜನಿಕರಿಗಾಗಿ ನಡೆಯುತ್ತವೆ.

ಶಿಬಿರಾರ್ಥಿಗಳ ಊಟೋಪಚಾರಗಳಿಗಾಗಿ ನಿಗದಿಪಡಿಸಿದ ಶುಲ್ಕ ರೂ. ೧೨೦೦.

---

ಆಸಕ್ತ ಅಭ್ಯರ್ಥಿಗಳು ಕೆಳಗಿನ ವಿಳಾಸಕ್ಕೆ

**೨೦೦೯ ಸೆಪ್ಟೆಂಬರ್ ೨೫ರೊಳಗೆ ಅಭ್ಯರ್ಥಿಪತ್ರ ಕಳಿಸಬೇಕು.**

ನೀನಾಸಮ್ ಸಂಸ್ಕೃತಿ ಶಿಬಿರ, ಹೆಗ್ಗೋಡು, ಸಾಗರ ಕರ್ನಾಟಕ ೫೭೭೪೧೭

# ಪಳಗಿಸಲಾಗದ ವಿಶ್ವಪ್ರಜ್ಞೆಯ ಗೆಲುವು

ಅಶೀಶ್ ನಂದಿ

ಕನ್ನಡಕ್ಕೆ: ಅಕ್ಷರ ಕೆ.ವಿ.

೨೦೦೯ರ ಈ ಚುನಾವಣೆಯು, ಹಲವು ಅರ್ಥಗಳಲ್ಲಿ ಸರಿಸುಮಾರು ಎರಡು ದಶಕಗಳ ಅನಂತರ ನಡೆದ ಮೊದಲ ಮಾಮೂಲಿ ಚುನಾವಣೆ ಎನ್ನಬಹುದು. ಈ ಚುನಾವಣೆಯಲ್ಲಿ ದೇಶದಾದ್ಯಂತ ಎಲ್ಲರನ್ನೂ ಪ್ರಚೋದಿಸಿದ ಯಾವುದೇ ಒಂದು ಮಹತ್ತ್ವದ ವಿಚಾರ ಇರಲಿಲ್ಲ. ಬೇರೆಬೇರೆ ಸ್ಥಳಗಳಲ್ಲಿ ಬೇರೆಬೇರೆ ಬಗೆಯ ಆಲೋಚನಾಪ್ರಸ್ಥಾನಗಳು ಅಲ್ಲಿಲ್ಲಿಯ ಬೇರೆಬೇರೆ ಪಕ್ಷಗಳ ಅಭ್ಯರ್ಥಿಗಳ ಭವಿಷ್ಯವನ್ನು ನಿರ್ಧರಿಸಿದವು. ಒಂದೇ ರಾಜ್ಯದ ಬೇರೆಬೇರೆ ಪ್ರದೇಶಗಳೊಳಗೆ ಕೂಡ ಬೇರೆಬೇರೆ ತರ್ಕಗಳು ಚುನಾವಣೆಯನ್ನು ಪ್ರೇರಿಸಿದವು. ಹಾಗಿದ್ದರೂ ಈ ಎಲ್ಲ ಭಿನ್ನತೆಗಳ ನಡುವೆಯೂ ಕೆಲವು ಸಮಾನ ಸಂಗತಿಗಳಿದ್ದವು.

ಮೊದಲನೆಯದಾಗಿ, ಈ ಬಾರಿಯ ಚುನಾವಣೆಯಲ್ಲಿ ಜನರು ರಾಜಕೀಯದ ಬಿಸಿಯನ್ನು ತಣಿಸುವ ಮಾರ್ಗಗಳನ್ನು ಹುಡುಕುತ್ತಿದ್ದರೆಂದು ನನ್ನ ಅನ್ನಿಸಿಕೆ. ಕಳೆದ ಹದಿನೈದು ವರ್ಷಗಳೀಚೆಗೆ ನಮ್ಮ ದೇಶದಲ್ಲಿ ತಾರಕ ಸ್ವರದ ರಾಜಕೀಯದ್ದೇ ಕಾರುಬಾರು ನಡೆದಿತ್ತು. ಇದು ಜನರಲ್ಲಿ ದಣಿವು ಹುಟ್ಟಿಸಿತ್ತೆಂದು ನಾನು ಊಹಿಸುತ್ತೇನೆ. ಉದಾಹರಣೆಗೆ, ಉತ್ತರ ಪ್ರದೇಶದ ಹಿಂದಿನ ಎರಡು ಚುನಾವಣೆಗಳಲ್ಲೂ, ಸಮೀಕ್ಷೆಗಳ ಪ್ರಕಾರ, ಶೇಕಡಾ ಒಂದು ಪ್ರಮಾಣದ ಮತದಾರರು ಮಾತ್ರ ರಾಮಜನ್ಮಭೂಮಿ ವಿವಾದದ ಬಗ್ಗೆ ಆಸಕ್ತಿ ತೋರಿಸಿದ್ದರು. ಈ ಸತ್ಯವು ಬಿಜೆಪಿಯ ಆಂತರಿಕ ಮೌಲ್ಯಮಾಪನಕಾರರಿಗೂ ಗೊತ್ತಾಗಿದ್ದರಿಂದಲೇ ಇರಬೇಕು, ಈ ಬಾರಿ ಅವರು ಆ ವಿವಾದವನ್ನು ಅಷ್ಟಾಗಿ ಎತ್ತದೆ ಬಿಟ್ಟರು. ಇನ್ನು, ಪಶ್ಚಿಮ ಬಂಗಾಲ ಒಂದು ರಾಜ್ಯವನ್ನು ಬಿಟ್ಟು, ಉಳಿದ ಕಡೆಗಳಲ್ಲೂ ಕೂಡ ಯಾವುದೇ ಭಾವೋದ್ರೇಕದ ವಿಚಾರ ಉಬ್ಬರಿಸಿ ಬರಲಿಲ್ಲ; ಸಾಧಾರಣವಾಗಿ ಚುನಾವಣೆಗಳೆಂದರೆ ನಾವು ಕಾಣುವ ಉದ್ರೇಕಗಳು ಈ ಬಾರಿ ಕಾಣೆಯಾಗಿದ್ದವು.

ಅದಕ್ಕೆ ಕಾರಣಗಳಿವೆ. ನಮ್ಮ ದೇಶದಲ್ಲಿ ನಾವು ಸಾಮಾಜಿಕವಾಗಿ ಮೂಲಭೂತ ಭಿನ್ನಮತ-ಅನ್ಯಮತ-ಅನೇಕತೆಗಳೊಂದಿಗೆ ಸದಾ ಬದುಕುತ್ತ ಬಂದವರು. ಜೊತೆಗೆ, ನಮ್ಮ ದೇಶದ ಭಿನ್ನತೆ-ಅನೇಕತೆಗಳು ಪಳಗಿಸಿಟ್ಟ ಅನ್ಯತೆಗಳ ನೆಲೆಗಟ್ಟಿನ ಮೇಲೆ ನಿಂತದ್ದಲ್ಲ. ಹಾಗೆ ಭಿನ್ನಮತವನ್ನು ಪಳಗಿಸಿ ಬಳಸುವ ಮಾದರಿಗೆ ಆದರ್ಶ ಉದಾಹರಣೆ ಅಮೇರಿಕಾ. ಅಮೇರಿಕಾದಲ್ಲಿ ಬದುಕುತ್ತಿದ್ದರೆ ಅಲ್ಲಿ ನಿಮಗೆ ಎಲ್ಲ ರೀತಿಯ ಊಟತಿಂಡಿಯ ಭಿನ್ನತೆಗಳೂ ಉಡುಗೆತೊಡುಗೆಯ ವೈವಿಧ್ಯಗಳೂ ಮತ್ತು ಸಾಂಸ್ಕೃತಿಕ ಅನೇಕತೆಗಳೂ ಒಟ್ಟಿಗೇ ದೊರಕುತ್ತವೆ. ಅಂಥಲ್ಲಿ ನೀವು ವಿಶ್ವಪ್ರಜ್ಞೆಯ ವಾರಸುದಾರರೆಂದು ಕರೆಸಿಕೊಳ್ಳಬೇಕಿದ್ದರೆ, ನೀವು ಹುಯಿಯಾಂಗ್ ಅಡುಗೆಗೂ ಮತ್ತು ಸ್ಕೆಜುವನ್ ಊಟಕ್ಕೂ ನಡುವಿನ ವ್ಯತ್ಯಾಸ ಗ್ರಹಿಸಲು ಸಮರ್ಥರಿರಬೇಕು; ದಕ್ಷಿಣ ಕೋರಿಯಾದ ಬ್ಯಾಲೆಗೂ ಪೀಕಿಂಗ್ ಒಪೆರಾಕ್ಕೂ ಭಿನ್ನತೆಯೇನೆಂಬುದು ನಿಮಗೆ ತಿಳಿದಿರಬೇಕು ಮತ್ತು ಮ್ಯೂಸಿಯಮ್ಮಿಗೆ ಹೋದರೆ ಅಲ್ಲಿನ ಚೀನೀ ಸಂಗ್ರಹದಲ್ಲಿ ಮಿಂಗ್ ಮತ್ತು ಹಾನ್ ರಾಜವಂಶದ ವಸ್ತುಗಳನ್ನು ಪ್ರತ್ಯೇಕಿಸಿ ಗುರುತಿಸಲು ನಿಮಗೆ ಸಾಧ್ಯವಾಗಬೇಕು. ಅರ್ಥಾತ್, ಅಲ್ಲಿ ವೈವಿಧ್ಯ ಮತ್ತು ಅನೇಕತೆಗಳನ್ನು ನಿಮಗೆ ಅಪಾಯಕಾರಿಯಾಗದಂತೆ ಪಳಗಿಸಿ ಇಟ್ಟಿರಲಾಗುತ್ತದೆ; ಹಾಗಿರುವುದರಿಂದಲೇ ಅವು ನಮ್ಮೊಂದಿಗೆ ಇರಲು ಸಮ್ಮತಿ ಪಡೆದಿರುತ್ತವೆ.

ಮೂಲಭೂತ ಭಿನ್ನತೆಗಳೊಂದಿಗೆ ಬದುಕುವುದು, ಮೇಲೆ ಹೇಳಿದ ಪಳಗಿಸಿದ ಭಿನ್ನತೆಗಳ ಜೊತೆ ಇರುವುದಕ್ಕಿಂತ ಬೇರೆಯದೇ ಆದ ಕ್ರಮ. ಇಲ್ಲಿ ನೀವು ನಿಮ್ಮ ರಾಜಕಾರಣದ ಮೂಲತತ್ತ್ವಗಳನ್ನೇ ಪ್ರಶ್ನಿಸುವ ಜನವರ್ಗದೊಂದಿಗೂ ಸಹನೆಯೊಂದಿಗೆ ಸಹಬಾಳ್ವೆ ನಡೆಸಲು ಸಿದ್ಧರಿರಬೇಕಾಗುತ್ತದೆ. ದಕ್ಷಿಣ ಏಶಿಯಾದ ಬಹುಪಾಲು ದೇಶಿಗರಂತೆ ಭಾರತೀಯರೂ ಕೂಡ, ಈ ಬಗೆಯ ಮೂಲಭೂತ ಭಿನ್ನತೆಗಳ ಜೊತೆಗಿನ ಸಹಬಾಳ್ವೆಯ ಕ್ರಮವನ್ನು ಬಹುಕಾಲದಿಂದ ಉಳಿಸಿಕೊಂಡು ಬಂದಿದ್ದಾರೆ. ಇದಕ್ಕೆ ಕೊಡಬಹುದಾದ ಒಂದು ಒಳ್ಳೆಯ ಉದಾಹರಣೆಯೆಂದರೆ – ಈ ಬಾರಿಯ ಚುನಾವಣೆಯಲ್ಲಿ ಸಜ್ಜದ್ ಲೋನ್ ಸ್ಪರ್ಧಿಸಿದ್ದು. ಈತ ಪ್ರತ್ಯೇಕತಾವಾದಿ; ದೇಶವಿಚ್ಛೇದದಲ್ಲಿ ನಂಬಿಕೆಯಿಟ್ಟವ. ಹಾಗಿದ್ದರೂ ಆತ ಭಾರತದ ಸಂವಿಧಾನದ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸಿದ್ದಕ್ಕೆ ಯಾರೂ ತಕರಾರು ಮಾಡಲಿಲ್ಲ; ಮಾತ್ರವಲ್ಲ ಅದರ ಬಗ್ಗೆ ಎಲ್ಲರೂ ಉತ್ಸಾಹದಿಂದಲೇ ಮಾತಾಡಿದರು. ಮೂಲಭೂತ ಭಿನ್ನತೆಗಳ ಸಹಬಾಳ್ವೆಗೆ ಇದೊಂದು ಉತ್ತಮ ನಿದರ್ಶನವೆಂದು ನನ್ನ ಭಾವನೆ. ಇಂಥ ಸಮಾಜದಲ್ಲಿ ಸಹಜವಾಗಿಯೇ ಎಲ್ಲ ಬಗೆಯ ಅತಿರೇಕಗಳಿಗೂ ಅಂತಿಮವಾಗಿ ಅದರೊಳಗಿನಿಂದಲೇ ಒಂದು ತಡೆ ಒದಗಿಬರುತ್ತದೆ.



ಭಾರತದ ಇನ್ನೊಂದು ವೈಶಿಷ್ಟ್ಯವೆಂದರೆ – ಇಲ್ಲಿಯ ದೇವರುಗಳೆಲ್ಲ ಪರಿಪೂರ್ಣರೂ ಅಲ್ಲ; ಮತ್ತು ದಾನವರು ಸಂಪೂರ್ಣವಾಗಿ ದಾನವತ್ವವನ್ನೇ ತುಂಬಿಕೊಂಡವರೂ ಅಲ್ಲ. ಇದನ್ನು ನಾನು 'ಪುರಾಣಸದೃಶಸಂಸ್ಕೃತಿ' ಎಂದು ಕರೆಯುತ್ತೇನೆ – ಕಾರಣ, ಇಲ್ಲಿಯ ಯಾವ ಪುರಾಣದಲ್ಲಿಯೂ ಕೇವಲ ದೇವರು ಯಾ ಕೇವಲ ದಾನವರು ಇರುವುದಿಲ್ಲ; ಇಬ್ಬರೂ ಸೇರಿಯೇ ಕಥೆಯನ್ನು ಕಟ್ಟುತ್ತಾರೆ. ಇಂಥ ಪ್ರಜ್ಞೆಯು ನಮ್ಮ ಸಂಸ್ಕೃತಿಯಲ್ಲೇ ಅಡಕಗೊಂಡಿರುವುದರಿಂದ, ನನ್ನ ಪ್ರಕಾರ, ಇದು ನಮ್ಮ ಸಾರ್ವಜನಿಕ ಬದುಕಿನ ಧೋರಣೆಗಳ ಮೇಲೂ ಪ್ರಭಾವ ಬೀರುತ್ತದೆ. ಇಂಥ ಸಮಾಜಗಳ ಜನ ತಮ್ಮ ಕಷ್ಟಕೋಟಲೆಗಳನ್ನು ಮುಂದಿಟ್ಟು ಒಂದು ಹಂತದವರೆಗೆ ಹೋರಾಟ ನಡೆಸುತ್ತಾರೆ; ಅಲ್ಲಿಂದ ಮುಂದೆ ತಮ್ಮ ಹೋರಾಟದಿಂದಲೇ ದಣಿದು ಹಿನ್ನಡೆಯುತ್ತಾರೆ. ಯಾಕೆಂದರೆ, ಒಂದು ಮಿತಿಯ ಆಚೆಗೂ ಈ ಹೋರಾಟವನ್ನು ಮುಂದುವರೆಸಿದರೆ ಅದು ತಮಗೇ ಅಪಾಯಕಾರಿ ಎಂದವರಿಗೆ ಕಾಣುತ್ತದೆ; ಹಾಗೆ ಮುಂದುವರೆಸಿದರೆ ಅದು ತಮ್ಮ ನಿತ್ಯಬದುಕಿನ ಕ್ರಮಕ್ಕೇ ಕುತ್ತು ತರುತ್ತದೆಯೆಂದೂ ಅವರು ಭಾವಿಸುತ್ತಾರೆ. ಆದ್ದರಿಂದ ಒಂದು ಹಂತದ ಬಳಿಕ ಈ ಜನವರ್ಗವು – ಆದದ್ದು ಆಯಿತು, ಇನ್ನು ಮಾಮೂಲಿ ಬದುಕಿಗೆ ಹಿಂದಿರುಗೋಣ – ಎಂದು ತನಗೆ ತಾನೇ ಹೇಳಿಕೊಳ್ಳುತ್ತದೆ. ಪ್ರಸ್ತುತ ಚುನಾವಣೆಯು ಇಂಥ ಒಂದು ಪರಿಮಿತಿಯ ಪ್ರಜ್ಞೆಯ ಮರಳುವಿಕೆಗೆ ಸೂಚಕವೆಂದು ನಾನು ತಿಳಿಯುತ್ತೇನೆ. ಸದ್ಯ ನಮ್ಮ ರಾಜಕಾರಣಕ್ಕೂ ಇಂಥದೊಂದು ಮಧ್ಯಂತರ ಪಲ್ಲಟವು ಅವಶ್ಯವಾಗಿರುವಂತೆ ತೋರುತ್ತಿದೆ. ಮತ್ತು ಇಂಥ ಪಲ್ಲಟದಿಂದ ಸಾರ್ವಜನಿಕ ಜೀವನದ ಬೇಗುದಿಗಳು ತುಸು ತಣಿದು ನೆಮ್ಮದಿ ಸಿಗುತ್ತದೆಯೆಂದು ಬಹುಸಂಖ್ಯಾತ ಭಾರತೀಯ ಜನ ಭಾವಿಸಿದ ಹಾಗೂ ಕಾಣುತ್ತದೆ.

ಈ ಬಾರಿಯ ಚುನಾವಣೆಯಲ್ಲಿ ಕಾಣಿಸಿಕೊಂಡ ಇನ್ನೊಂದು ಸಾಮಾನ್ಯಾಂಶ – ಜನರು ಸಾರ್ವಜನಿಕ ಕ್ಷೇತ್ರದಲ್ಲಿ ಒಂದು ಬಗೆಯ ಕನಿಷ್ಠ ಸೌಜನ್ಯವಾದರೂ ಉಳಿದಿರಲಿ ಎಂದು ಭಾವಿಸಿ ಅದಕ್ಕಾಗಿ ಹುಡುಕಾಟ ನಡೆಸಿದ್ದು. ನೇತ್ಯಾತ್ಮಕ ಪ್ರಚಾರಗಳು, ಅತಿಯಾದ ವ್ಯಕ್ತಿದೂಷಕ ಮಾತುಗಳು ಮತ್ತು ಹಳಿದಾಟದ ಉದ್ಘೋಷಗಳು – ಇವೆಲ್ಲವೂ ಈ ಬಾರಿ ಮತದಾರರಿಗೆ ಕಿರಿಕಿರಿಯನ್ನುಂಟುಮಾಡಿವೆ ಎಂದು ಕಾಣುತ್ತದೆ. ಉದಾಹರಣೆಗೆ ಬಿಜೆಪಿ ಮತ್ತು ಎಡಪಕ್ಷಗಳೆರಡೂ ಮನಮೋಹನ ಸಿಂಗರನ್ನು ಎದುರಾಳಿಯಾಗಿಟ್ಟುಕೊಂಡು ಅವರ ಬಗ್ಗೆ ಆಪಾದನೆಗಳನ್ನೂ ಹಾಸ್ಯಚಟಾಕಿಗಳನ್ನೂ ಹಾರಿಸುತ್ತಿದ್ದಾಗ, ಸಾದಾ ಜನವರ್ಗಕ್ಕೆ ಅವರು ಅಂಥ ಆಪಾದನೆ ಮತ್ತು ಚಟಾಕಿಗಳ ಮೂಲಕವೇ ವಿಶೇಷ ಗುಣಗಳಿರುವ ನಾಯಕರೂ ಆಗಿ

ಕಾಣಿಸಿಕೊಳ್ಳತೊಡಗಿದರು. ಸಿಂಗ್ ಅವರ ದುರ್ಬಲತೆ, ಅವರಿಗೆ ರಾಜಕೀಯ ಅಡಿಪಾಯ ಇಲ್ಲದಿರುವುದು, ಕಾಂಗ್ರೆಸ್ ಹೈಕಮಾಂಡಿನ ಮರ್ಜಿಗೆ ಅವರು ಬಾಗಲೇಬೇಕಾಗಿರುವ ಪರಿಸ್ಥಿತಿ – ಇವೆಲ್ಲವೂ ಕ್ರಮೇಣ ಮನಮೋಹನ ಸಿಂಗರ ದೌರ್ಬಲ್ಯಗಳಾಗಿ ಕಾಣುವ ಬದಲು, ಅವರ ರಾಜಕೀಯ ನಾಜೂಕಿನ ಮತ್ತು ವ್ಯಕ್ತಿಗತ ಸುಸಂಸ್ಕೃತತೆಯ ಕುರುಹುಗಳಾಗಿ ಗೋಚರಿಸಲು ಆರಂಭವಾದವು. ನನ್ನ ಪ್ರಕಾರ, ಅದು ಕಾಂಗ್ರೆಸ್ಸಿಗೆ ಲಾಭವಾಯಿತು. ತಾರಸ್ವರದಲ್ಲಿ ಕಿರಿಚುವ ತಮ್ಮ ಎದುರಾಳಿಗಳಿಗೆ ಹೋಲಿಸಿದರೆ ಸೋನಿಯಾ ಮತ್ತು ರಾಹುಲ್ ಗಾಂಧಿಯವರು ನಡೆದುಕೊಂಡ ಹದವರಿತ ರೀತಿ ಅವರಿಗೆ ಲಾಭ ತಂದುಕೊಟ್ಟಿತು.

(ಈ ಬಾರಿಯ ಚುನಾವಣೆಯ ಫಲಿತಾಂಶ ನಿನಗೇನನ್ನಿಸಿತು ಎಂದು ನಾನು, ದೆಹಲಿಯ ಇಂಡಿಯಾ ಇಂಟರ್‌ನ್ಯಾಶನಲ್ ಸೆಂಟರಿನ ವೆಯ್ಟರ್ ಒಬ್ಬನನ್ನು ಕೇಳಿದೆ. 'ತುಂಬಾ ಚೆನ್ನಾಗಾಯಿತು' ಅಂದ ಆತ. ಹಾಗಾದರೆ ನೀನು ಕಾಂಗ್ರೆಸ್ ಬೆಂಬಲಿಗನೋ ಎಂದು ನಾನು ಆತನನ್ನು ವಿಚಾರಿಸಿದೆ. ಆತ ವಿವರಿಸಿದ – 'ಹಾಗೇನಿಲ್ಲ ಸಾಹೇಬರೆ, ಆದರೆ, ಆ ಸರ್ದಾರ್ಜಿ ಒಳ್ಳೇ ಮನುಷ್ಯ. ವಿದ್ಯಾವಂತ, ಕಳ್ಳನಲ್ಲ, ಮತ್ತೆ ರಾಜಕೀಯಕ್ಕೆ ಹೊಸಬ. ಅಷ್ಟಿದ್ದರೂ ಉಳಿದವರೆಲ್ಲ ಅವನ ಮೇಲೆ ಎಗರಿದರಲ್ಲ, ಅದು ಯಾರಿಗೆ ಸರಿ ಕಾಣುತ್ತದೆ ಹೇಳಿ ? ಅವನು ಗೆದ್ದಿದ್ದು ನನಗಂತೂ ಸಂತೋಷವೇ; ದೇವರು ಮೇಲೆ ನಿಂತು ಎಲ್ಲ ನೋಡುತ್ತಿರುತ್ತಾನೆ ಅನ್ನೋದಕ್ಕೆ ಇದೇ ಸಾಕ್ಷಿ'. ಆತನ ಮಾತುಗಳನ್ನು ನಾನು ಪದಶಃ ಉಲ್ಲೇಖಿಸಿದ್ದೇನೆ – ಕಾರಣ, ನನಗನ್ನಿಸುವಂತೆ, 'ದೇವರು ಮೇಲೆ ನಿಂತು ಎಲ್ಲ ನೋಡುತ್ತಿರುತ್ತಾನೆ' ಎಂಬ ಭಾವನೆ ಪ್ರಾಯಶಃ ಆತನೊಬ್ಬನದೇ ಅಲ್ಲ; ಇನ್ನೂ ಬಹುಸಂಖ್ಯೆಯ ಜನ ಹೀಗಂದುಕೊಳ್ಳುತ್ತಾರೆಂದು ನನ್ನ ಭಾವನೆ.)

ಇನ್ನು, ಈ ಬಾರಿಯ ಚುನಾವಣಾ ಪರಿಣಾಮದ ಎರಡನೆಯ ವೈಶಿಷ್ಟ್ಯ – ಅದು, ದುರಹಂಕಾರಿಗಳನ್ನು ಕೆಡವಬೇಕೆಂಬ ಮತದಾರರ ಬಯಕೆಯನ್ನು ಬಿಂಬಿಸಿದ ರೀತಿ. ಉದಾಹರಣೆಗೆ, ಯಾವತ್ತೂ ಸ್ಥಿರವಾಗಿರುವ ಬೆಂಬಲದ ಮೇಲೆ ನಿಂತಿದ್ದೇವೆಂದು ತಿಳಿದಿದ್ದ ಮಾಯಾವತಿಯಂಥವರ ಬುಡವೇ ಈ ಬಾರಿ ಅಲುಗಾಡಿದ್ದು ಬಹುಮುಖ್ಯ ಸಂಗತಿಯೊಂದಕ್ಕೆ ಸೂಚಕವಾಗಿದೆ. ಬಹುಪಾಲು ಮತದಾರರಿಗೆ ಆಕೆಯ ರಾಜಕೀಯ ಮರ್ಜಿಗಳು ಹಿಡಿಸಿರಲಿಲ್ಲವೆಂದು ಕಾಣುತ್ತದೆ – ತನ್ನ ಪ್ರಭಾವಳಿಯ ಭಾರವನ್ನು ಸುತ್ತ ಹರಡುತ್ತ, ಮಹಾನ್‌ವ್ಯಕ್ತಿಯೆಂದು ತನ್ನನ್ನೇ ತಾನು ಬಿಂಬಿಸಿಕೊಳ್ಳುತ್ತ, ತನ್ನದೇ ಪ್ರತಿಮೆಗಳನ್ನು ಪ್ರತಿಷ್ಠಾಪಿಸಿಕೊಳ್ಳುತ್ತ ಬೀಗುತ್ತಿದ್ದ ಆಕೆ ಇತಿಹಾಸಕ್ಕೆ ತಾನೇನೂ ಮಾಡದಿದ್ದರೂ ಸರಿಯೇ, ಅದು ತನಗೆ ಪ್ರತ್ಯುಪಕಾರ ಮಾಡಲಿಕ್ಕೇಬೇಕು ಎಂದು ಭ್ರಮಿಸಿಕೊಂಡಿದ್ದವಳು. ಹಾಗೇ ಇನ್ನೂ ಕೆಲವರಿಗೆ ನರೇಂದ್ರ ಮೋದಿ ಹಿಡಿಸಲಿಲ್ಲ;



ಮತ್ತೂ ಕೆಲವರಿಗೆ ಪ್ರಕಾಶ್ ಕಾರಟ್ ಸರಿ ಕಾಣಲಿಲ್ಲ. ಒಟ್ಟಿನಲ್ಲಿ, ಅಹಂಕಾರದ ಶೈಲಿ, ಅಹಮಿಕೆಯ ಮಹತ್ವಾಕಾಂಕ್ಷೆ ಮತ್ತು ಜನರನ್ನೇ ನಿರ್ಲಕ್ಷಿಸುವ ಧಿಮಾಕು – ಇವೆಲ್ಲಕ್ಕೂ ಈ ಬಾರಿಯ ಮತದಾರರು ಶಿಕ್ಷೆ ವಿಧಿಸಿದ್ದಾರೆ.

ನರೇಂದ್ರ ಮೋದಿ ಬಿಜೆಪಿಯೊಳಗೇ ತಮಗೆ ಎದುರಾದ ಎಲ್ಲ ತಡೆಗಳನ್ನೂ ಬದಿಗೆ ತಳ್ಳಿದವರು -- ಆರ್.ಎಸ್.ಎಸ್., ಭಜರಂಗದಳ, ವಿಶ್ವಹಿಂದೂ ಪರಿಷತ್‌ಗಳನ್ನೆಲ್ಲ ಅವರು ಕಡೆಗಾಣಿಸಿದರು; ಅವು ಯಾವುವೂ ತಮ್ಮ ಕಾಲಿಗೆ ಅಡ್ಡ ಬರದಂತೆ ಅವನ್ನು ಮೂಲೆಗುಂಪು ಮಾಡಿದರು. ಮೋದಿಯವರ ಆಸೆ ಇದ್ದದ್ದು ಅಧಿಕಾರಕ್ಕೆ ಮಾತ್ರ; ಮತ್ತು ಅದು ಸಿಕ್ಕಾಗ ಅದನ್ನು ಬೇಕಷ್ಟು ಬಳಸಿ ಬೇಡವಾದಾಗ ತಳ್ಳಿದರು. ನಿಜ, ಪಶ್ಚಿಮ ಗುಜರಾತಿನಲ್ಲಿ, ಅದರಲ್ಲೂ ಅಲ್ಲಿನ ಮಧ್ಯಮ ವರ್ಗಗಳಲ್ಲಿ ಅವರಿಗೆ ಸದೃಢವಾದ ಬೆಂಬಲದ ನೆಲೆಗಟ್ಟು ಇದ್ದೇ ಇದೆ. ಹಾಗಾಗಿ ಅವರು ಸದ್ಯಕ್ಕೆ ರಾಜಕೀಯದಿಂದ ಮಾಯವಾಗುವುದು ಅಸಾಧ್ಯ. ಹಾಗಿದ್ದರೂ ಅಖಿಲ ಭಾರತ ವ್ಯಾಪ್ತಿಯಲ್ಲಿ ಅವರೊಬ್ಬ ನಾಯಕನಾಗಿ ಹೊರಹೊಮ್ಮುತ್ತಾರೆ ಎಂಬ ಸಾಧ್ಯತೆಗಂತೂ ಈ ಬಾರಿಯ ಫಲಿತಾಂಶ ಅನುಮಾನದ ತೆರೆ ಎಳೆದಿದೆ. ಅವರನ್ನು ಬಿಜೆಪಿಯ ತಾರಾಮೌಲ್ಯದ ನಾಯಕನೆಂದು ಈ ಬಾರಿ ಬಿಂಬಿಸಲಾಗಿತ್ತು; ಆದರೆ ಭಾರತೀಯ ಮತದಾರ ತನ್ನ ಪ್ರತ್ಯುತ್ತರದಲ್ಲಿ ಆ ಮೋದಿಪ್ರತಿಮೆಯ ಉದ್ದಗಲಗಳನ್ನು ತುಸು ಕಡಿಮೆಯಂತೂ ಮಾಡಿದ್ದಾನೆ.

ಸದಾ ವಿವಾದಗಳಲ್ಲೇ ಮುಳುಗಿರುವ ನಾಯಕರು ಈ ದೇಶದಲ್ಲಿ ಅತ್ಯುನ್ನತ ಪದವಿಗೆ ಏರುವುದು ತುಂಬ ಅಪರೂಪ. ಮೋದಿಯವರು ಅಂಥವರಲ್ಲೊಬ್ಬರು. ಅವರ ಕಣ್ಣಿಗೆ ಸಮುದಾಯಗಳು ಕಾಣುವುದೇ ಇಲ್ಲ. ೨೦೦೨ರ ಗಲಭೆಗಳನ್ನು ಕುರಿತು ಅವರು ಮುಸ್ಲಿಮರ ಕ್ಷಮೆ ಕೇಳುವುದಿರಲಿ, ಆ ಬಗ್ಗೆ ಒಂದು ಬೇಸರದ ಮುದ್ರೆಯನ್ನೂ ಎಂದೂ ಕಾಣಿಸಿದವರಲ್ಲ. ತಾನು ಐದೂವರೆ ಕೋಟಿ ಗುಜರಾತಿಗಳ ನಾಯಕ, ಆದ್ದರಿಂದಲೇ ಮುಸ್ಲಿಮರಿಗೂ ನಾಯಕ – ಎಂಬುದು ಅವರು ಯಾವತ್ತೂ ಹಾಡುವ ರಾಗ. ಆದರೆ ಈ ಬಾರಿಯ ಫಲಿತಾಂಶ ಅವರಿಗೆ ವಿನಯ ಮತ್ತು ಹೊಂದಾಣಿಕೆಗಳಿಗೆ ಸಂಬಂಧಿಸಿದ ಕೆಲವು ಪಾಠಗಳನ್ನು ಕಲಿಸುವಂತಿದೆ. ಆ ಪಾಠಗಳನ್ನು ಅವರು ಕಲಿತದ್ದೇ ಆದರೆ, ಭಾರತದ ರಾಜಕಾರಣದ ಭಾಷೆಯು ಅವರಿಗೆ ಪರಿಚಯ ವಾದೀತು. ಭಾರತದ ರಾಜಕಾರಣವು ಇಂಥ ಹಲವು ಮಹತ್ವಾಕಾಂಕ್ಷಿಗಳಿಗೆ ಪಾಠ ಕಲಿಸಿದೆ – ಇಂದಿರಾ ಗಾಂಧಿಯವರಿಂದ ಮಾಯಾವತಿಯವರವರೆಗೂ. ಆದ್ದರಿಂದ, ನರೇಂದ್ರ ಮೋದಿಯವರಿಗೂ ಈ ರಾಜಕಾರಣವು ಪಾಠ ಕಲಿಸದೆ ಬಿಡುವುದಿಲ್ಲ.

ದುರದೃಷ್ಟವಶಾತ್, ಈ ಫಲಿತಾಂಶದಲ್ಲಿ ಪ್ರಕಾಶ್ ಕಾರಟ್‌ರಿಗೂ ನರೇಂದ್ರ

ಮೋದಿಯವರಿಗೂ ಒಂದು ಬೃಹತ್ ಸಾವ್ಯ ಎದ್ದು ಕಾಣುತ್ತಿದೆ. ಅದನ್ನು ಗುರುತಿಸುವುದು ಯಾರಿಗೆ ಎಷ್ಟೇ ಮುಜುಗರದ ವಿಷಯವಾಗಿರಲಿ, ಅದು ಕಾಣುತ್ತಿರುವುದಂತೂ ಸತ್ಯ. ಈ ಇಬ್ಬರೂ ಪುರುಷರಿಗೂ ಹೊಂದಾಣಿಕೆಯ ವಿನಯ ಏನೆಂಬುದು ಗೊತ್ತಿಲ್ಲ. ಮತ್ತೆ ಇವರಿಬ್ಬರೂ ತಮ್ಮತಮ್ಮ ಸಿದ್ಧಾಂತಗಳನ್ನು ತುಸುವಾದರೂ ತೆಳುಗೊಳಿಸಿಕೊಳ್ಳಲು ಬಯಸುವವರಲ್ಲ. ಹಾಗಾಗಿ ಮೋದಿ ಮಾಯಾವತಿಯರ ಪ್ರತಿಮೆಗಳ ಜತೆಗೆ ಈ ಬಾರಿ ಕಾರಟ್ ಪ್ರತಿಮೆಯ ಗಾತ್ರವೂ ಕುಗ್ಗಿದೆ. ಇಷ್ಟರಮೇಲೆ, ಎಡಪಕ್ಷಗಳ ಸೋಲು ಆ ವಲಯದ ಇನ್ನೂ ಗಹನ ವಾದೊಂದು ಸಮಸ್ಯೆಯ ಮೇಲೆ ಬೆಳಕು ಚೆಲ್ಲುತ್ತದೆ.

ಬಂಗಾಲದ ವಿಚಾರಕ್ಕೇ ಬರುವುದಾದರೆ, ಅಲ್ಲಿ ಬಹುದೀರ್ಘಕಾಲದಿಂದ ಎಡಪಕ್ಷಗಳು ಅಧಿಕಾರ ಹಿಡಿದಿದ್ದವು. ನಮ್ಮ ದೇಶದ ಸಾಮಾಜಿಕ ಸನ್ನಿವೇಶಗಳಲ್ಲಿ ಸಾಧಾರಣವಾಗಿ ಏನಾಗುತ್ತದೆಯೆಂದರೆ -- ಯಾವುದೇ ರಾಜಕೀಯ ಪಕ್ಷವು ಏರುಮುಖದತ್ತ ಚಲಿಸತೊಡಗಿದರೆ, ಕ್ರಮೇಣ, ಈ ಸಮಾಜದ ಎಲ್ಲ ದುಷ್ಟಕೂಟ ಗಳೂ, ಕಳ್ಳದಂಧೆಯ ಖದೀಮರೂ, ಬೆದರಿಕೆ ಒಡ್ಡಿ ಹಣ ಮಾಡುವ ಖಳರೂ ಆ ಪಕ್ಷದೊಂದಿಗೇ ಕೈಜೋಡಿಸಲು ಆರಂಭಿಸುತ್ತಾರೆ. ಉತ್ತರಪ್ರದೇಶದಲ್ಲಿ ಇಂಥ ಭೂಗತ ಶಕ್ತಿಗಳು ಮೊದಲು ಕಾಂಗ್ರೆಸ್ಸಿನೊಡನಿದ್ದವು, ಬಳಿಕ ಬಿಜೆಪಿಯ ಕಡೆ ವಾಲಿದವು, ಆಮೇಲೆ ಸಮಾಜವಾದಿ ಪಕ್ಷದತ್ತ ತಿರುಗಿ ಕಡೆಗೆ ಬಹುಜನಸಮಾಜ ಪಕ್ಷಕ್ಕೆ ಸೇರಿಕೊಂಡವು. ರಾಜಕೀಯ ಪಕ್ಷಗಳ ನಕ್ಷೆ ಹೇಗೆ ಏರಿಳಿಯಿತೋ ಹಾಗೆಯೇ ಈ ಭೂಗತ ಸಂಬಂಧವೂ ಬದಲಾಗುತ್ತಹೋಯಿತು. ಅದೇ ರೀತಿ, ೩೨ ವರ್ಷಗಳಿಂದ ಎಡಪಕ್ಷಗಳು ಅಧಿಕಾರದಲ್ಲಿರುವಂಥ ಬಂಗಾಲದ ಸನ್ನಿವೇಶದಲ್ಲಿ, ಕ್ರಮೇಣ, ಎಲ್ಲ ಬಗೆಯ ಸಮಾಜವಿದ್ರೋಹಿ ಶಕ್ತಿಗಳೂ ಸಿಪಿಎಂನ ಕಕ್ಷೆಗೆ ಹೋಗಿ ಕೂಡಿಕೊಂಡಿವೆ. ಎಡಪಕ್ಷಗಳ ತೋಳ್ಬಲ ಅಲ್ಲಿ ಅಸಾಧಾರಣವಾಗಿ ವಿಜೃಂಭಿಸಿದೆ – ಎದುರು ಪಕ್ಷದ ಬೆಂಬಲಿಗರು ಪ್ರಚಾರವನ್ನೇ ಮಾಡದಂತೆ ತಡೆಯುವ ಸಾಮರ್ಥ್ಯವನ್ನು ಅಲ್ಲಿ ಅವರು ಗಳಿಸಿದ್ದಾರೆ. ಈ ಚುನಾವಣೆಯಲ್ಲಿ ಅಂಥ ನಿಯಂತ್ರಣವು ಪೂರ್ಣ ನಾಶವಾಗಿಲ್ಲ; ಅಥವಾ ಅವರ ಸಾಮರ್ಥ್ಯ ಇಡಿಯಾಗಿ ಕುಗ್ಗಿಲ್ಲ. ಆದರೆ, ಅಂಥ ಆತ್ಮವಿಶ್ವಾಸದಲ್ಲೀಗ ಬಿರುಕು ಕಾಣಿಸಿಕೊಂಡಿದೆ. ದೀರ್ಘಾವಧಿ ರಾಜಕಾರಣದ ದೃಷ್ಟಿಯಿಂದ ನೋಡಿದರೆ ಪ್ರಕಾಶ್ ಕಾರಟ್ ಬಂಗಾಳಕ್ಕೆ ಒಳ್ಳೆಯದನ್ನೇ ಮಾಡಿದ್ದಾರೆ. ಆದರೆ ಮೂರು ದಶಕ ಮೀರಿದ ಅಲ್ಲಿಯ ಅಧಿಕಾರವು ಆಡಳಿತ ಯಂತ್ರದ ತಿರುಳಿಗೇ ಜಂಗು ಹತ್ತುವಂತೆ ಮಾಡಿದೆ. ಆದ್ದರಿಂದ ಆಗಾಗ ಒಮ್ಮೆಯಾದರೂ ಅವರು ಅಧಿಕಾರ ಕಳೆದುಕೊಳ್ಳು ವುದು ಒಳ್ಳೆಯದು – ವಿರೋಧ ಪಕ್ಷಗಳು ಅವರಿಗಿಂತ ಕೆಟ್ಟದಾಗಿದ್ದಾಗ್ಯೂ ಕೂಡ.



ಕಾರಣ, ಹಾಗೆ ಅಧಿಕಾರವಿಸರ್ಜನೆಯಾದಾಗಲೇ ಜನಗಳೂ ಪಕ್ಷಗಳೂ ಮತ್ತೊಮ್ಮೆ ಎಚ್ಚೆತ್ತುಕೊಳ್ಳುತ್ತವೆ.

(ಉದಾಹರಣೆಗೆ, ಬಿಜೆಪಿಯು ಒಂದು ಬಾರಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿದ್ದು ಒಳ್ಳೆಯದೇ ಆಯಿತೆಂದು ನನ್ನ ಭಾವನೆ. ಇದರಿಂದ ಕಾಂಗ್ರೆಸ್ಸು ನಿದ್ರೆ ತಿಳಿದೆದ್ದಿತು ಮಾತ್ರವಲ್ಲ, ಬಿಜೆಪಿಗೂ ತಾನು ತನ್ನ ರಾಜಕೀಯ ಸಮೀಕರಣಗಳನ್ನು ಸರಿಯಾಗಿ ಮಾರ್ಪಡಿಸಿಕೊಂಡ ಪಕ್ಷದಲ್ಲಿ ಅಧಿಕಾರಕ್ಕೆ ಬರುವುದು ಸಾಧ್ಯವಿದೆ ಎಂಬ ಅರಿವು ಮಾಡಿತು. ಈ ಅರಿವಿನ ಫಲವಾಗಿ ಬಿಜೆಪಿಯು ತನ್ನ ಅರಾಜಕ ಅಂಚುಗಳಾದ ವಿಶ್ವಹಿಂದೂ ಪರಿಷತ್ತು, ಭಜರಂಗದಳ ಮತ್ತು ಶಿವಸೇನೆಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ಪ್ರೇರಣೆ ಸಿಕ್ಕಿತು. ನ್ಯಾಯಯತವಾಗಿಯೇ ಅಧಿಕಾರಕ್ಕೆ ಬರುವ ಸಾಧ್ಯತೆಗಳು ತೆರೆದಾಗ, ಬೀದಿಶಕ್ತಿಯಿಂದಲೇ ಅಧಿಕಾರ ಹಿಡಿಯುವ ಹುನ್ನಾರ ಕಡಿಮೆಯಾಗುವುದರಿಂದ, ಅಂಥ ಸಂದರ್ಭಗಳಲ್ಲಿ, ಬಿಜೆಪಿಯಂಥ ಪಕ್ಷವೊಂದು ತನ್ನ ಸ್ವರೂಪವನ್ನೇ ತನ್ನ ಉದ್ದೇಶಕ್ಕೆ ವಿರೋಧವಾಗದಂತೆ ಮತ್ತು ತಾನು ಗೌರವಾನ್ವಿತವೂ ಆಗುವಂತೆ ಪರಿವರ್ತಿಸಿಕೊಳ್ಳುತ್ತದೆ.)

ಹಾಗಿದ್ದರೂ, ಬಂಗಾಳ ಮತ್ತು ಕೇರಳಗಳಲ್ಲಿ ಎಡಪಕ್ಷಗಳು ನೆಲಕಚ್ಚಿದ್ದಕ್ಕೆ ಅಪರಾಧಿ ವಲಯದ ಸಹಯೋಗ ಮತ್ತು ದುರಹಂಕಾರಗಳೆರಡೇ ಕಾರಣಗಳಲ್ಲ. ಆ ಪಕ್ಷವು ಪ್ರತಿನಿಧಿಸುವ ಲೆನಿನ್‌ವಾದದ ಒಂದು ಮಾದರಿಯೇ ಅದರ ಬಹುದೊಡ್ಡ ಸಮಸ್ಯೆ. ಆ ಮಾದರಿಯೀಗ ಕ್ಯೂಬಾ, ಬಂಗಾಳ ಮತ್ತು ಕೇರಳ ಬಿಟ್ಟರೆ ಜಗತ್ತಿನಲ್ಲಿ ಇನ್ನೆಲ್ಲೂ ಬದುಕಿ ಉಳಿದಿಲ್ಲ. ಚಂದನ ಮಿತ್ರ ಅವರ ವಕ್ರೋಕ್ತಿಯ ಪ್ರಕಾರ ಇನ್ನೊಂದು ಕಡೆ ಅದು ಉಳಿದಿದೆ – 'ಪೀಪಲ್ಸ್ ರಿಪಬ್ಲಿಕ್ ಆಫ್ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ'. ಇಂಥ ಒಂದು ಐಡಿಯಾಲಜಿಗೆ ಎಡ್ವರ್ಡಿಯನ್ ಯುಗದ ಪ್ರಭಾವಳಿಯಿದ್ದು ಅದು ಭಾರತದಲ್ಲಿ ಈವರೆಗೆ ಇಷ್ಟಾದರೂ ಜನವರ್ಗವನ್ನು ಆಕರ್ಷಿಸಿತೆಂಬುದೇ ನನಗೆ ಆಶ್ಚರ್ಯದ ಸಂಗತಿಯಾಗಿ ಕಾಣುತ್ತದೆ. ಮುಖ್ಯ ವೈರುಧ್ಯ ಯಾವುದೆಂದರೆ – ಈ ಸಿದ್ಧಾಂತದ ನಂಬಿಕೆಯಿರುವುದು ನಿರ್ಗತಿಕರ ನಾಯಕತ್ವ – ವ್ಯಾನ್‌ಗಾರ್ಡ್ ಆಫ್ ದಿ ಪ್ರಾಲಿಟೇರಿಯಟ್ – ದಲ್ಲಿ. ಆದರೆ ಅದೀಗ ನಡೆಯುತ್ತಿರುವುದು ಮಾತ್ರ ಸಂಪೂರ್ಣವಾಗಿ ಮಧ್ಯಮವರ್ಗಗಳ ಕ್ರಿಯಾವಂತಿಕೆಯ ಮೇಲುಸ್ತುವಾರಿಯಲ್ಲಿ. ಆ ಕಾರಣದಿಂದಲೇ, ಭಾರತದ ಇನ್ನುಳಿದ ಕೆಲಪ್ರದೇಶಗಳಲ್ಲಿ ಸಂಭವಿಸಿದಂಥ ಕ್ರಾಂತಿಕಾರಿ ಸಾಮಾಜಿಕ ಪಲ್ಲಟಗಳು, ಎಡ ಪಕ್ಷಗಳು ಕಳೆದ ೩೨ ವರ್ಷಗಳಿಂದ ಆಳಿದ ಪಶ್ಚಿಮಬಂಗಾಲದಂಥ ಸ್ಥಳಗಳನ್ನು ಮುಟ್ಟಿಯೇ ಇಲ್ಲ. ಈಗಲೂ ಅಲ್ಲಿ ಎಲ್ಲವೂ ನಡೆಯುವುದು ಮೇಲುಜಾತಿಗಳ ನಿಯಂತ್ರಣದಲ್ಲಿಯೇ; ಕೆಲವು

ರೀತಿಗಳಿಂದ ನೋಡಿದರೆ, ಭಾರತದ ಅತ್ಯಂತ ಜಾತಿವಾದಿ ಸಮಾಜವೊಂದು ಇವತ್ತಿಗೂ ಬಂಗಾಲದಲ್ಲಿ ಉಳಿದುಕೊಂಡಿದೆ. ಉದಾಹರಣೆಗೆ, ಭಾರತದ ಯಾವುದಾದರೂ ಒಂದು ರಾಜ್ಯದಲ್ಲಿ ದಲಿತರು ಮುಖ್ಯಮಂತ್ರಿಯಾಗುವುದು ಇನ್ನೂ ಕನಸಿನ ಮಾತಾಗಿದ್ದರೆ ಅದು ಬಂಗಾಲದಲ್ಲಿಯೇ. ಅದಕ್ಕೆ ತುಂಬ ಭಿನ್ನವಾಗಿ, ದಕ್ಷಿಣದಲ್ಲಿ ಈ ಅವಧಿಯಲ್ಲಿಯೇ ಕೆಳಜಾತಿಗಳಿಗೊಂದು ಹೊಸ ಅವಕಾಶವಲಯವೇ ತೆರೆದು ಕೊಂಡಿದೆ. ಹೊಸ ಬಗೆಯ ಚೈತನ್ಯಗಳೂ ಅಲ್ಲಿ ಬಿಡುಗಡೆಗೊಂಡಿದ್ದನ್ನು ನಾವು ಕಾಣಬಹುದಾಗಿದೆ – ಬಂಗಾಲವು ಒಬ್ಬನಾದರೂ ಎ.ಆರ್. ರೆಹಮಾನ್‌ನನ್ನು ಕೊಟ್ಟಿದ್ದುಂಟೆ? ಅಥವಾ ಅವನ ಗುರು ಇಳೆಯರಾಜಾ ಥರದವರಾದರೂ ಅಲ್ಲಿ ಬಂದದ್ದುಂಟೆ? ಸಮಾಜದ ತಳಭಾಗಗಳಿಂದ ಹುಟ್ಟುವ ಇಂಥ ಹೂವುಗಳಿಗೆ ಬಂಗಾಲದಲ್ಲಿ ಎಡೆಯಿಲ್ಲದಾಗಿದೆ. ಕಾರಣ, ದಕ್ಷಿಣದಲ್ಲಿ ನಡೆದ ಬ್ರಾಹ್ಮಣೇತರ ಜಾತಿಗಳ ಕ್ರಿಯಾವಂತ ವಿದ್ಯಮಾನಗಳಿಗೆ ಸಮಾನಾಂತರವಾದ ಯಾವ ಘಟನೆಯೂ ಬಂಗಾಳದಲ್ಲಿ ಇದುವರೆಗೆ ನಡೆದಿಲ್ಲ.

ಇಂಥ ಸೋಲಿನ ಸುಳಿಯಲ್ಲಿ ಸಿಲುಕಿದ ಬಳಿಕವೂ ಬಂಗಾಲದ ಮಾರ್ಕ್ಸ್‌ವಾದ ದಲ್ಲಿ ಹೊಸ ಚಿಂತನೆ ಹುಟ್ಟುತ್ತದೆಯೆಂದು ಆಶಿಸಲು ಎಡೆಯಿಲ್ಲ. ಕಾರಣ, ಬಂಗಾಳವು ವಸಾಹತುಶಾಹಿ ಸಂಸ್ಕೃತಿಯ ಕಡೆಯ ಪಳೆಯುಳಿಕೆಯ ಪ್ರತಿನಿಧಿ. ಆದ್ದರಿಂದಲೇ ಇಲ್ಲಿನ ಮಾರ್ಕ್ಸ್‌ವಾದಿಗಳು ತಮ್ಮದೇ ಪಠ್ಯಪುಸ್ತಕಗಳಲ್ಲಿ ಬಂದಿಯಾಗಿದ್ದಾರೆ. ಲ್ಯಾಟಿನ್ ಅಮೇರಿಕಾದ ಅಥವಾ ಯುರೋಪಿನ ಮಾರ್ಕ್ಸ್‌ವಾದಗಳಿಂದ ಅವರು ಏನನ್ನೂ ಕಲಿತು ಪಡೆದಿಲ್ಲ. ಆದಕಾರಣವೇ, ಹೊಸ ಸ್ಥಳೀಯ ಆವಿಷ್ಕಾರಗಳೂ ಕೂಡಾ ಬಂಗಾಳದಲ್ಲಿ ಸಂಭವಿಸಿಲ್ಲ. ಅಂಥ ಬೌದ್ಧಿಕ ಜಗತ್ತಿನೊಳಗೆ ಮರುಚಿಂತನೆ ಯೇನಾದರೂ ಹುಟ್ಟುವುದಾದರೆ ಅದು ಎರಡೇ ಮೂಲಗಳಿಂದ ಸಾಧ್ಯ – ಸಾವು ಮತ್ತು ನಿವೃತ್ತಿ. ಒಮ್ಮೆ ಮನುಷ್ಯರು ನಿವೃತ್ತರಾಗುತ್ತ ಮರಣಹೊಂದುತ್ತ ಹೋದಾಗ ಹೊಸ ತಲೆಮಾರೊಂದು ಅಲ್ಲಿ ಹುಟ್ಟಿಕೊಳ್ಳುತ್ತದೆ. ಆಮೇಲೆ ಸುಲಭ – ಹಿಂದೆ ನಡೆದಿದ್ದಕ್ಕೆ ಆ ಹೊಸ ತಲೆಮಾರು ಜವಾಬ್ದಾರರಾಗುವ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ, ಇಂಥ ಚಿಂತನ ಮಾರ್ಗವನ್ನು ಸೋಲಿಸಲು ಅದನ್ನು ಎದುರಿಸಿ ಅದರೊಡನೆ ಸಂಘರ್ಷಕ್ಕಿಳಿಯುವುದಕ್ಕಿಂತ ಅವುಗಳ ಬಗ್ಗೆ ನಿರ್ಲಕ್ಷ್ಯ ಮತ್ತು ಉದಾಸೀನ ತೋರುವುದೇ ಒಳಿತು.

ಇನ್ನೊಂದು ಹೊಸ ಗಾಳಿಯನ್ನೂ ಈ ಬಾರಿಯ ಚುನಾವಣೆ ತಂದಿದೆ – ರಾಷ್ಟ್ರಮಟ್ಟದ ವಿಶಾಲ ತಳಹದಿಯ ಪಕ್ಷಗಳಿಗೆ ಈ ಬಾರಿ ಬೆಂಬಲ ಮರಳಿ ದೊರಕಿದೆ. ಇದು ಕಳೆದ ವರ್ಷಗಳಲ್ಲಾದ ಪಲ್ಲಟವನ್ನು ಸರಿಪಡಿಸುವಂಥ ಒಂದು ನಡೆ ಎಂದು



ಬೇಕಾದರೂ ವ್ಯಾಖ್ಯಾನಿಸಬಹುದು. ಯಾಕೆಂದರೆ, ಪುಟ್ಟಪುಟ್ಟ ಪಕ್ಷಗಳ ಮತ್ತು ಅದಕ್ಕೆ ಸಂವಾದಿಯಾದ ಹಿತಾಸಕ್ತಿಯ ಪಂಗಡಗಳ ಅತಿ ಹೆಚ್ಚಳದಿಂದಾಗಿ ಮತಶಕ್ತಿಯ ವಿಚ್ಛಿದ್ರತೆ ಉಂಟಾಗಿ ಅದರಿಂದ ಫಲಿತಾಂಶಗಳು ಫಲಕಾರಿಯಾಗದೆಹೋಗುತ್ತಿದ್ದವು. ಆದ್ದರಿಂದ ಮತದಾರರು ಈಗ ಕೇಂದ್ರದಲ್ಲಿ ವಿಶಾಲ ತಳಹದಿಯ ಪಕ್ಷಗಳೇ ಅಧಿಕಾರ ನಡೆಸುವುದು ಒಳ್ಳೆಯದೆಂಬ ಅರಿವನ್ನು ಕಾಣಿಸಿದ್ದಾರೆ.

ಕುತೂಹಲಕಾರಿ ಸಂಗತಿಯೆಂದರೆ, ಈ ಚುನಾವಣೆಯಲ್ಲಿ ಮಂಡಲ ಆಯೋಗದ ಶಿಪಾರಸ್ಸುಗಳನ್ನು ಕುರಿತ ವಿವಾದಗಳ ಗಲಾಟೆಯೇನೋ ತಗ್ಗಿದೆ; ಹಾಗಿದ್ದರೂ ಇದನ್ನು ಮಂಡಲೋತ್ತರ ರಾಜಕಾರಣದ ಉದ್ಭವ ಎಂದೇನೂ ವ್ಯಾಖ್ಯಾನಿಸಲಿಕ್ಕಾಗದು. ಕಾಂಗ್ರೆಸ್ಸನ್ನು ಸಾಂಪ್ರದಾಯಿಕವಾಗಿ ಬೆಂಬಲಿಸುತ್ತ ಬಂದ ಹಲವು ಮತಗುಂಪುಗಳು – ಉದಾಹರಣೆಗೆ, ಉತ್ತರಪ್ರದೇಶದಲ್ಲಿ ದಲಿತರು ಮತ್ತು ಮುಸ್ಲಿಮರು – ಹಿಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನಿಂದ ದೂರ ಸರಿದಿದ್ದರು; 'ವಿಶೇಷ ಅನುಕೂಲದ ವಲಯ'ಗಳಾಗಿ ತಮಗೆ ಕಂಡ ಪಕ್ಷಗಳ ಕಡೆಗೆ ಅವರು ಮುಖ ಮಾಡಿದ್ದರು. ದಲಿತರು ಬಿ.ಎಸ್.ಪಿ.ಯ ಕಡೆಗೂ ಮುಸ್ಲಿಮರು ಮುಲಾಯಮ್ ಸಿಂಗರ ಕಡೆಗೂ ಸರಿದದ್ದು ಆ ರೀತಿ. ಹಾಗೇ ಬಿಹಾರದಲ್ಲಿ ಅವರೆಲ್ಲ ಲಾಲೂರ ಕಡೆಗೆ ವಾಲಿದ್ದರು. ಈ ಪಕ್ಷಗಳ ಬಗ್ಗೆ ದಲಿತರು ಮತ್ತು ಮುಸ್ಲಿಮರಿಗಿದ್ದ ಆಕರ್ಷಣೆ ಯಾವುದೆಂದರೆ, ಅವು ಸಣ್ಣ ಪಕ್ಷಗಳಾಗಿರುವುದರಿಂದ ಅವುಗಳನ್ನು ತಮ್ಮ ಮತಗುಂಪು ಪ್ರತಿನಿಧಿಸುವ ಆಶೋತ್ತರಗಳಿಗೆ ಸುಲಭವಾಗಿ ಬಾಗಿಸಿಕೊಳ್ಳಬಹುದು ಎಂಬುದೇ ಆಗಿತ್ತು. ಕಾಂಗ್ರೆಸ್ಸಿನಂಥ ರಾಷ್ಟ್ರೀಯ ಪಕ್ಷಗಳಲ್ಲಿ ಅನ್ಯಪಂಗಡಗಳ ಬೇಡಿಕೆಗಳು ಈ ಪುಟ್ಟ ಪಂಗಡಗಳಿಗೆ ವಿರೋಧ ಒಡ್ಡುತ್ತಿದ್ದವು. ಈಗ ಕಾಣುತ್ತಿರುವ ವ್ಯಂಗ್ಯ ಇದಕ್ಕೆ ವ್ಯತಿರಿಕ್ತವಾದದ್ದು – ಎಸ್.ಪಿ. ಮತ್ತು ಬಿ.ಎಸ್.ಪಿ.ಯಂಥ 'ಸೀಮಿತ' ಪಕ್ಷಗಳೀಗ ದೊಡ್ಡದಾಗಿ ಬೆಳೆದಿವೆ ಮತ್ತು ಅದಕ್ಕೆ ಸಂವಾದಿಯಾಗಿ ಆ ಪಕ್ಷಗಳ ಆಕಾಂಕ್ಷೆಗಳೂ ವಿಸ್ತಾರಗೊಂಡಿವೆ. ಆದ್ದರಿಂದ ಅವೀಗ ಇಂಥ ಪುಟ್ಟ ಪಂಗಡಗಳ ಆಶೋತ್ತರಗಳಿಗೆ ಸ್ಪಂದಿಸುವುದು ಕಡಿಮೆಯಾಗುತ್ತಿರುವುದರಿಂದ ಈ ಬಾರಿ ಅಂಥ ಪಂಗಡಗಳು ಕಾಂಗ್ರೆಸ್ಸಿನತ್ತಲೇ ಚಲಿಸಲು ಆರಂಭಿಸಿವೆ. ಪರಿಣಾಮವಾಗಿ, ಈಗ ಕಾಂಗ್ರೆಸ್ಸೇ ಹೊಸದಾದ ಒಂದು ಪುಟ್ಟ ಪಕ್ಷವಾಗಿ ಪರಿಣಮಿಸಿದೆ; ಮತ್ತು, ತನಗಾಗಿ ಒಂದು ಹೊಸ ಬೆಂಬಲದ ಸೆಲೆಯನ್ನು ನಿರ್ಮಿಸಿಕೊಳ್ಳುವ ಪ್ರಯೋಗಕ್ಕೆ ತೊಡಗಿಕೊಂಡಿದೆ. ಆದ್ದರಿಂದ ಕಾಂಗ್ರೆಸ್ಸೇ ತಮ್ಮ ಆಶೋತ್ತರಗಳಿಗೆ ಹೆಚ್ಚು ಅನುಕೂಲ ಎಂದು ಈ ಕಿರುಸಮುದಾಯಗಳ ಜನ ಭಾವಿಸುವಂತಾಗಿದೆ.

ಈ ಚುನಾವಣೆಯನ್ನು ಮಂಡಲೋತ್ತರ ರಾಜಕೀಯದ ಆರಂಭ ಎಂದು

ವ್ಯಾಖ್ಯಾನಿಸಲಾಗದೆ ಇರುವುದಕ್ಕೆ ಇನ್ನೂ ಅನೇಕ ಕಾರಣಗಳಿವೆ. ಭಾರತದಲ್ಲಿ ಎಲ್ಲೆಡೆ – ನಗರೀಕರಣಗೊಂಡ ಮತ್ತು ಆಧುನೀಕರಣಗೊಂಡ ಅಲ್ಪಸ್ವಲ್ಪ ಭಾಗಗಳನ್ನು ಹೊರತುಪಡಿಸಿ ಉಳಿದೆಲ್ಲ ಕಡೆ – ಮತಗಟ್ಟೆಯ ಒಲವುಗಳು ಚಲಿಸುವುದು ವ್ಯಕ್ತಿಘಟಕಗಳನ್ನು ಆಧರಿಸಿಯಲ್ಲ; ಜಾತಿಘಟಕಗಳನ್ನಾಧರಿಸಿ ಅಂಥ ಚಲನೆ ನಡೆಯುತ್ತದೆ. ಯಾವುದೇ ಪಕ್ಷವೂ ತನ್ನ ಅಭ್ಯರ್ಥಿಯನ್ನಾರಿಸುವಾಗ ಗಮನಕೊಡುವ ಕನಿಷ್ಠ ಸಾಮಾನ್ಯ ಅಂಶವೆಂದರೆ ಅದು ಜಾತಿಯೇ – ಪ್ರಾಬಲ್ಯ, ಸಾಮರ್ಥ್ಯ ಮೊದಲಾದ ಅಂಶಗಳೆಲ್ಲವೂ ಆ ಬಳಿಕ ಗಣನೆಗೆ ಬರುವಂಥವು. ಸ್ಥಿತಿ ಹೀಗಿರುವುದರಿಂದ, ಅಂದರೆ ಅಂಚಿನ ವಲಯಗಳಿಂದ ರಾಜಕೀಯದ ಮುಖ್ಯಪ್ರವಾಹಕ್ಕೆ ಬರಬೇಕೆಂಬ ಆಶೋತ್ತರವೇ ಇನ್ನೂ ನಮ್ಮ ಸಮಾಜದಲ್ಲಿ ಒಂದು ಪ್ರಬಲ ಚಾಲಕಶಕ್ತಿ ಆಗಿರುವುದರಿಂದ, ನಿಜವಾಗಿ, ನಾವಿನ್ನೂ ಮಂಡಲೋತ್ತರ ಕಾಲವೊಂದಕ್ಕೆ ಹೋಗಲು ಸಿದ್ಧರಾಗಿಲ್ಲ.

ಈಗಾಗಲೇ ಮುಖ್ಯಪ್ರವಾಹಕ್ಕೆ ಬಂದು ಮುಟ್ಟಿರುವ ಕೆಲವು ಪಂಗಡಗಳು ಅಂಚಿನ ವಲಯಗಳಿಂದ ಲಾಭ ಪಡೆದುಕೊಳ್ಳುವ ಕೆಲಸಕ್ಕೆ ಅಷ್ಟಾಗಿ ಒತ್ತು ಕೊಡುವುದಿಲ್ಲ. ಉದಾಹರಣೆಗೆ ಮರಾಠರು, ಪಟೇಲರು, ಒಕ್ಕಲಿಗರು, ಲಿಂಗಾಯತರು, ಜಾಟರು, ಯಾದವರು – ಇವರೆಲ್ಲ ಈಗಾಗಲೇ ಮುಖ್ಯಪ್ರವಾಹಕ್ಕೆ ತಲುಪಿದ್ದಾರಾದ್ದರಿಂದ ಅವರಿಗೆ ಅಂಚಿನ ವಲಯಗಳ ಬಗ್ಗೆ ಅಷ್ಟು ಆಸಕ್ತಿಯಿಲ್ಲ. ಪ್ರಾಯಶಃ ಕುಮರಿ ಸಮುದಾಯವೂ ಕೂಡ ಈಗ ನಿತೀಶ್ ಕುಮಾರರ ಮೂಲಕ ಭದ್ರತೆಯ ವಲಯಕ್ಕೆ ಪ್ರವೇಶಿಸಿಯಾಗಿದೆ. ಹಾಗಿದ್ದರೂ ಇನ್ನೂ ಅಂಚಿನಲ್ಲೇ ಉಳಿದಿರುವ ನೂರಾರು ಸಮುದಾಯಗಳು ನಮ್ಮ ದೇಶದಲ್ಲಿವೆ; ಅವಕ್ಕಿನ್ನೂ ಸರಿಯಾದ ಪ್ರಾತಿನಿಧ್ಯ ದೊರಕಿಲ್ಲ. ಈಗ ದೊಡ್ಡ ಸಮುದಾಯಗಳು ತಮ್ಮನ್ನು ತಾವು ಸಂಘಟಿಸಿಕೊಂಡು ಅದರಿಂದ ಲಾಭ ಪಡೆದುಕೊಂಡಿರುವುದರಿಂದ, ಅದಕ್ಕಿಂತ ಸಣ್ಣ ಸಮುದಾಯಗಳೀಗ ಅದೇ ಮಾರ್ಗ ಹಿಡಿದು ಲಾಭದಲ್ಲಿ ತಮ್ಮ ಪಾಲನ್ನು ಪಡೆಯಲು ಹವಣಿಸಲಾರಂಭಿಸಿವೆ. ೧೯೭೦-೮೦ರ ದಶಕಗಳಲ್ಲಿ ಎನ್.ಟಿ.ಆರ್. ಅವರ ಮೂಲಕ ಕಮ್ಮ ಪಂಗಡವು ಮುಂಚೂಣಿಗೆ ಬಂದಂತೆಯೇ ಈ ಚುನಾವಣೆಯಲ್ಲಿ ಚಿರಂಜೀವಿಯ ಮೂಲಕ ಕಾಪು ಪಂಗಡವು ಮುಂಬರಲು ಹವಣಿಸಿತು. ಇಂಥ ಪಂಗಡಗಳೆಲ್ಲವೂ ತುಂಬ ಚಿಕ್ಕವಾಗಿದ್ದು ಹಿಂದೆ ಅವು ದೊಡ್ಡ ಪಕ್ಷಗಳ ಛತ್ರಿಯಡಿಗೆ ಆಸರೆ ಪಡೆದುಕೊಳ್ಳುತ್ತಿದ್ದವು. ಈಗ ಅವಕ್ಕೆ ರಾಜಕಾರಣದಲ್ಲಿ ಪುಟ್ಟದಾದರೂ ತಮ್ಮದೇ ಒಂದು ವಲಯವನ್ನು ನಿರ್ಮಿಸಿಕೊಳ್ಳುವ ಇರಾದೆ ಹುಟ್ಟಿದೆ.

ಉದಾಹರಣೆಗೆ, ಈಚೆಗೆ ಗುಜ್ಜರ್ ಪಂಗಡವು ಸಂಘಟನೆಗೊಂಡು ತನಗೆ



ಪರಿಶಿಷ್ಟ ಪಂಗಡದ ಸವಲತ್ತು ಬೇಕೆಂದು ಹಿಂಸ್ರ ಮಾರ್ಗಕ್ಕಿಳಿದಿತ್ತು. ಸಂಸತ್ತಿನ ಮುದ್ರೆ ಬಿದ್ದರೆ ಸಾಕು, ತಾವು ಪರಿಶಿಷ್ಟ ವರ್ಗಕ್ಕೆ ಸೇರಿಕೊಳ್ಳುತ್ತೇವೆಂಬ ಅತಾರ್ಕಿಕ ಅವಸರ ಅವರಿಗಿದ್ದಂತೆ ಅವರು ವರ್ತಿಸಿದ್ದರು. ಇಂಥ ವಿದ್ಯಮಾನಗಳು ಭಾರತದಲ್ಲಿ ಇನ್ನೂ ಸಾಕಷ್ಟು ನಡೆಯಲಿಕ್ಕಿವೆ – ಅದರಲ್ಲಿ ಕಾನೂನಿನ ದುರ್ಬಳಕೆಗಳೂ ಆಗುತ್ತವೆ; ಪಾಲಿಗಾಗಿ ಜಗಳಗಳೂ ನಡೆಯುತ್ತವೆ; ಅನಗತ್ಯ ಮೀಸಲಾತಿಗಾಗಿಯೂ ಪ್ರಯತ್ನಗಳು ನಡೆಯುತ್ತವೆ. ಮಾತ್ರವಲ್ಲ, ಇನ್ನೂ ಹತ್ತಾರು ಬಗೆಯ ಮತಸಂಚಯಗಳು ತಮ್ಮ ಬಲವನ್ನು ಪ್ರದರ್ಶಿಸಲಿಕ್ಕಿವೆ. ಇವೆಲ್ಲವೂ ಸದ್ಯಕ್ಕೆ ಸಮಸ್ಯಾತ್ಮಕವೆಂದು ಕಂಡರೂ ದೀರ್ಘಕಾಲೀನ ಭವಿಷ್ಯದಲ್ಲಿ ಭಾರತಕ್ಕೆ ಇದರಿಂದ ಒಳ್ಳೆಯದೇ ಆಗುತ್ತದೆ.

ಇಂಥ ತಿಕ್ಕಾಟಗಳ ಫಲವಾಗಿ, ನಮ್ಮ ಪ್ರತಿನಿಧಿ ವ್ಯವಸ್ಥೆಯು ವಿಭಿನ್ನ ಸಮುದಾಯಗಳಿಗೆ ಇನ್ನಷ್ಟು ಅವಕಾಶ ಕೊಡಲೇಬೇಕಾಗುತ್ತದೆ; ಮತ್ತು ಆಗ, ಒಟ್ಟೂ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿಯೇ ಎಲ್ಲ ವರ್ಗಗಳ ಹಕ್ಕುಗಳಿಗೆ ಹೆಚ್ಚು ಬೆಲೆ ಸಿಗುತ್ತಹೋಗುತ್ತದೆ. ದೀರ್ಘಕಾಲೀನ ಭವಿಷ್ಯದಲ್ಲಿ ಇಂಥ ತಿಕ್ಕಾಟಗಳ ಸಂಖ್ಯೆ ಹೆಚ್ಚಿ ಅವುಗಳ ನಡುವೆ ಪರಸ್ಪರ ನಡೆಯುವ ಹೋರಾಟದಿಂದ ಈ ಸಮಸ್ಯೆಯು ತನ್ನ ಪರಿಹಾರವನ್ನು ತಾನೇ ಹುಡುಕಿಕೊಳ್ಳುತ್ತದೆ. ೩೫-೪೦ ಲೋಕಸಭಾ ಸ್ಥಾನಗಳಿಗಾಗಿ ಪ್ರಯತ್ನಿಸುವ ಲಾಲು ಮುಲಾಯಮ್ ಮಾದರಿಯ ತಂಡಗಳಿಗೂ ಮತ್ತು ೮-೧೦ ಸ್ಥಾನಗಳಿಗಷ್ಟೇ ಹವಣಿಸುವ ಸಣ್ಣ ಜಾತಿಪಂಗಡಗಳಿಗೂ ನಡುವೆ ದೊಡ್ಡ ವ್ಯತ್ಯಾಸ ಇದೆ. ಉದಾಹರಣೆಗೆ, ಈಗ ಚಿರಂಜೀವಿಯ ಪಕ್ಷಕ್ಕೆ ನಾಲ್ಕೈದು ಸ್ಥಾನಗಳಷ್ಟೇ ಸಿಕ್ಕಿವೆ. ಇಂಥ ಪುಟ್ಟ ಪಕ್ಷಗಳ ಸಂಖ್ಯೆ ಇನ್ನೂ ಇಳಿಯುತ್ತ ಹೋಗುತ್ತದೆ, ಕಾರಣ, ಈಗಾಗಲೇ ಹಲವು ಪಂಗಡಗಳು ತಮ್ಮ ಪಾಲನ್ನು ಪಡೆದಾಗಿದೆ. ಆದ್ದರಿಂದ ನನ್ನ ಪ್ರಕಾರ, ಮುಂದಿನ ತಲೆಮಾರುಗಳಿಗೆ ಪ್ರಾತಿನಿಧ್ಯಕ್ಕಾಗಿ ಹೀಗೆ ಪೈಪೋಟಿ ಮಾಡುವ ಅಗತ್ಯ ಅಷ್ಟಾಗಿ ಕಾಡುವುದಿಲ್ಲ. ಬದಲು, ಅವರು ಇವತ್ತಿಗಿಂತ ಹೆಚ್ಚು ಸಮಗ್ರೀಕರಣಗೊಂಡ ಜಗತ್ತಿನಲ್ಲಿ ಬದುಕುವವರಿದ್ದಾರೆ.

ಕಡೆಯದಾಗಿ, ದುರಹಂಕಾರದ ವಿಚಾರವಾಗಿ ಇನ್ನೂ ಒಂದು ಮಾತು. ಈ ಚುನಾವಣೆಯಲ್ಲಿ ಎಡಪಕ್ಷಗಳೇನೋ ಪರಾಜಿತಗೊಂಡಿರಬಹುದು, ಆದರೆ ಎಡಚಿಂತನೆಯ ಮೂಲಧಾತು ಇನ್ನೂ ನಮ್ಮ ಸಮಾಜದಲ್ಲಿ ಜೀವಂತವಾಗಿದೆ. ಮಾತ್ರವಲ್ಲ, ಅದೊಂದು ತುರ್ತಿನ ಕಾಳಜಿಯೂ ಆಗಿದೆ. ಆದ್ದರಿಂದ ಈ ವಿಜಯವನ್ನು ಎಗ್ಗುಸಿಗ್ಗಿಲ್ಲದ ಉದಾರೀಕರಣವನ್ನು ನಡೆಸಲಿಕ್ಕೆ ದೊರೆತ ಅನುಮತಿ ಎಂದೇನಾದರೂ ಯು.ಪಿ.ಎ. ಸರ್ಕಾರವು ಭಾವಿಸಿದರೆ ಅದು ದೊಡ್ಡ ದೋಷವಾಗುತ್ತದೆ. ಸಮಾಜದ ಕೆಳಸ್ತರಗಳ ಬಗ್ಗೆ ಒಂದಿಷ್ಟು ಎಚ್ಚರ, ಸಮಾಜದ ಬಡವರು ಈ ಸರ್ಕಾರದ ಆದ್ಯತೆಯ

ಪ್ರಮುಖ ಭಾಗ ಎಂಬ ಬಗ್ಗೆ ಒಂದಿಷ್ಟು ಅರಿವು – ಇವು ಇಲ್ಲದೆಹೋದಲ್ಲಿ ಈ ಸಮಾಜವು ಉಳಿದು ಬಾಳುವುದು ಅಸಾಧ್ಯ; ನಮ್ಮನ್ನು ನಾವು ಮಾನವೀಯ ಸಮಾಜವೆಂದು ಕಲ್ಪಿಸಿಕೊಳ್ಳುವುದೂ ಆಗ ಅಸಾಧ್ಯವೇ ಸರಿ.  ಹನ್ನೆರಡು ಸಾವಿರ ರೂಪಾಯಿ ಸುರಿದು ಪಂಚತಾರಾ ಹೋಟೆಲ್ಲೊಂದರಲ್ಲಿ ಇಬ್ಬರು ಭೋಜನ ಮುಗಿಸಿ ಹೊರಬರುವಾಗ, ಹೊರಗೆ ಉಳಿದಿದ್ದನ್ನು ಬಿಸಾಕಿದ್ದಕ್ಕೆ ಒಂದು ನಾಯಿಯೂ ಒಬ್ಬ ಬಡವನೂ ಪರಸ್ಪರ ಕಿತ್ತಾಡುತ್ತಿರುವುದನ್ನು ಕಂಡು, ಆ ದರಿದ್ರನಿಗೆ ಹತ್ತು ರೂಪಾಯಿಯ ನೋಟೊಂದನ್ನು ಎಸೆದು ಅಲ್ಲಿಗೆ ನಮ್ಮ ಸಾಮಾಜಿಕ ಜವಾಬ್ದಾರಿ ಪೂರೈಸಿತು – ಎಂದು ತಿಳಿದರೆ ಅದು ಅಕ್ಷಮ್ಯ. ಹಾಗೇ, ಇಡಿಯ ಅರ್ಥವ್ಯವಸ್ಥೆಯು ಶ್ರೀಮಂತವಾದಂತೆ ಅದರ ಲಾಭಗಳು ಹನಿಹನಿಯಾಗಿ ಕೆಳಗಿಳಿದು ದರಿದ್ರರನ್ನೂ ತಲುಪುತ್ತವೆ ಎಂದು ಹೇಳಲಾಗುವ 'ಟ್ರಿಕಲ್-ಡೌನ್-ಎಫೆಕ್ಟ್' ಎಂದು ಕರೆಯಲಾಗುವ ಪರಿಣಾಮಕ್ಕಾಗಿ ನಾವು ಈಗಾಗಲೇ ಇನ್ನೂರು ವರ್ಷ ಕಾದಿದ್ದಾಗಿದೆ; ಇನ್ನೂ ಅದನ್ನೇ ಜಪಿಸುತ್ತ ಸಮಾಧಾನಪಡಬಾರದು.

ನಿಜವಾಗಿ, ಈ ಬಾರಿಯ ಚುನಾವಣೆಯಲ್ಲಿ ಯು.ಪಿ.ಎ. ಗೆದ್ದಿದ್ದು ಆಕಸ್ಮಿಕವೇನೂ ಅಲ್ಲವೆಂಬುದನ್ನೂ ಮತ್ತು ಅದಕ್ಕೆ ವಾಸ್ತವಿಕವಾದ ಕಾರಣವು ಅದರ ಗ್ರಾಮೀಣ ಉದ್ಯೋಗಖಾತ್ರಿಯೋಜನೆ ಮತ್ತು ರೈತರಿಗೆ ಸಾಲ ಮನ್ನಾ ಮಾಡಿದ್ದರಲ್ಲಿ ಇದೆ ಎಂಬುದನ್ನೂ ನಾವು ಮರೆಯಬಾರದು.  ಈ ಯೋಜನೆಗಳಿಗೆ ಖರ್ಚಾದ ಹಣದಲ್ಲಿ ಶೇಕಡಾ ೯೦ ಅಪವ್ಯಯವಾಗಿದೆಯೆಂದು ಇಟ್ಟುಕೊಂಡರೂ ಕೂಡ ಈ ಹಣದ ಒಂದು ಭಾಗವಂತೂ ಗ್ರಾಮೀಣ ಪ್ರದೇಶಗಳಿಗೆ ಮುಟ್ಟಿದೆ.  ಈ ದೇಶದ ಭ್ರಷ್ಟಾಚಾರಗಳು ದೆಹಲಿ ಮತ್ತು ಭುವನೇಶ್ವರದಂಥ ಕೇಂದ್ರಗಳಿಗೆ ಮಾತ್ರ ಸೀಮಿತವಾಗಿಲ್ಲದೆ ಇರುವುದರಿಂದ, ವೆಚ್ಚದ ಸರಪಣಿಯ ಕೆಳಗಿರುವ ಭಾಗಕ್ಕೂ ಈ ಹಣ ಇಳಿದೇ ಇಳಿದಿರುತ್ತದೆ. ಹಾಗೆ ಕೆಳಸ್ತರಗಳಲ್ಲಿ ಈ ಹಣವನ್ನು ನುಂಗಿದವರೂ ಕೂಡಾ ಖರ್ಚು ಮಾಡಲೇಬೇಕಲ್ಲ ?  ಅದರಿಂದಾಗಿ, ಸ್ಥಳೀಯ ಅರ್ಥವ್ಯವಸ್ಥೆಗಳು ಅಷ್ಟಿಷ್ಟಾದರೂ ಲಾಭ ಪಡೆದಿರುತ್ತವೆ ಮತ್ತು ಅದು ಈ ಚುನಾವಣೆಯಲ್ಲಿ ಫಲವನ್ನು ತಂದುಕೊಟ್ಟಿದೆ.

ಭಾರತದ ಬಡವರು ಯಾವತ್ತೂ ಮತ ಚಲಾಯಿಸುತ್ತಾರಲ್ಲ, ಅದೇ ನಿಜವಾಗಿ ಇಲ್ಲಿಯ ಎಲ್ಲ ದುರಂಹಕಾರಗಳಿಗೂ ಅತ್ಯುತ್ತಮ ಪ್ರತ್ಯೌಷಧಿ.

*ಕೃಪೆ:  'ತೆಹಲ್ಕಾ' ಪತ್ರಿಕೆ,*
*ಸಂಪುಟ ೬, ಸಂಚಿಕೆ ೨೧, ೩೦ ಮೇ ೨೦೦೯*

# ಗತಕಾಲ-ಇತಿಹಾಸ :
# ಪ್ರತಿಕ್ರಿಯೆಗಳು

*ಮಾತುಕತೆ ೮೯ರಲ್ಲಿ ಎರಡು ಲೇಖನಗಳನ್ನು ಪ್ರಕಟಿಸಲಾಗಿತ್ತು -- ಎಸ್. ಎನ್. ಬಾಲಗಂಗಾಧರ ಅವರ 'ಭಾರತೀಯರಿಗೆ ಏನು ಬೇಕು ಚರಿತ್ರೆಯೊ, ಗತ ಕಾಲವೊ ?' ಮತ್ತು ಅದಕ್ಕೆ ಪ್ರತಿಕ್ರಿಯೆ ಯಾಗಿ, ಮನು ದೇವದೇವನ್ ಅವರ 'ಜನಮರುಳೋ ? ಜಾತ್ರೆ ಮರುಳೋ ?'. ಈ ಎರಡು ಲೇಖನಗಳು ಮಾತುಕತೆಯ ಓದುಗರಲ್ಲಿ ತೀವ್ರ ರೂಪದ ಪ್ರತಿಕ್ರಿಯೆಗಳನ್ನು ಎಬ್ಬಿಸಿದ್ದವು – ಖಾಸಗಿ/ದೂರವಾಣಿ ಸಂದೇಶಗಳಿಂದ ಆರಂಭಿಸಿ ಲಿಖಿತ ಪ್ರತಿಸ್ಪಂದನೆ ಗಳವರೆಗೆ ಹಲವು ರೀತಿಗಳಿಂದ ಈ ಪ್ರತಿಕ್ರಿಯೆಗಳು ಮಾತುಕತೆಗೆ ಬಂದವು.  ಇವುಗಳಲ್ಲಿ ಆಯ್ದ ಕೆಲವನ್ನು ಮುಂದಿನ ಪುಟಗಳಲ್ಲಿ ಕೊಡುತ್ತಿದ್ದೇವೆ.*

*ಕಡೆಯಲ್ಲಿ, ಮನು ಚಕ್ರವರ್ತಿಯವರ ಇನ್ನೊಂದು ಲೇಖನವೂ ಈ ಪ್ರತಿಕ್ರಿಯಾ ಸರಣಿಯ ತುದಿಗೆ ಪ್ರಕಟವಾಗಿದೆ.  ಆದರೆ, ಇದು ಬಾಲಗಂಗಾಧರ ಅಥವಾ ಮನು ದೇವದೇವನ್ ಅವರ ಲೇಖನಗಳಿಗೆ ಪ್ರತಿಕ್ರಿಯೆಯಲ್ಲ ಎಂದೂ, ಬದಲು, ಅವರು ಎತ್ತಿರುವ ವಿಚಾರ ಕುರಿತಂತೆ ವಿಭಿನ್ನ ನೆಲೆಯ ಮತ್ತು ಸಮಾನಾಂತರವಾದ ಸ್ವತಂತ್ರ ಲೇಖನ ಎಂದೂ  ಲೇಖಕರು ಸೂಚಿಸಿದ್ದಾರೆ.*

*ಈ ಪ್ರತಿಕ್ರಿಯೆಗಳೊಂದಿಗೆ ಈ ವಿಚಾರ ಕುರಿತ ಚರ್ಚೆಯನ್ನು ಮಾತುಕತೆಯು ಮುಕ್ತಾಯಗೊಳಿಸುತ್ತದೆ.*

# ಜನಮರುಳೋ ಜಾತ್ರೆ ಮರುಳೋ ಎಂಬ ಪ್ರತಿಕ್ರಿಯೆ ಕುರಿತು

ಸದಸ್ಯರು,
ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರ,
ಕುವೆಂಪು ವಿಶ್ವವಿದ್ಯಾನಿಲಯ

ಮಾತುಕತೆ ೮೯ ರಲ್ಲಿ ಪ್ರಕಟವಾದ ಬಾಲಗಂಗಾಧರ ಅವರ 'ಭಾರತೀಯರಿಗೆ ಏನು ಬೇಕು ಚರಿತ್ರೆಯೊ, ಗತಕಾಲವೊ?' ಎಂಬ ಲೇಖನಕ್ಕೆ ಅದೇ ಸಂಚಿಕೆಯಲ್ಲೇ ಮನು ದೇವದೇವನ್ ಅವರು 'ಜನಮರುಳೋ ಜಾತ್ರೆ ಮರುಳೋ' ಎಂಬ ಪ್ರತಿಕ್ರಿಯೆಯನ್ನು ನೀಡಿದ್ದಾರೆ. ಮೇಲ್ನೋಟಕ್ಕೆ ತುಂಬಾ ಗಂಭೀರವಾಗಿ ಏನೋ ಚರ್ಚೆ ನಡೆಯುತ್ತಿದೆ ಎಂಬ ಭ್ರಮೆಯನ್ನು ಈ ಲೇಖನವು ಉಂಟುಮಾಡಿದರೂ ಚರ್ಚೆಯನ್ನು ಮುಂದುವರಿಸೋಣವೆಂದರೆ ಅಲ್ಲಿ ಈ ಚರ್ಚೆಗೆ ಉಪಯುಕ್ತವಾದ ಯಾವುದೇ ವಾದಾಂಶವೂ ನಮಗೆ ಸಿಕ್ಕಿಲ್ಲ. ಹಾಗಾಗಿ ವೃಥಾ ವಿತಂಡವಾದದಲ್ಲಿ ಕಾಲಹರಣ ಮಾಡುವ ಇಚ್ಛೆಯಾಗಲೀ ಸಮಯವಾಗಲೀ ನಮ್ಮಲ್ಲಿ ಯಾರೊಬ್ಬರಿಗೂ ಇಲ್ಲವಾದುದರಿಂದ ನಾವು ಆ ಕುರಿತು ಚರ್ಚೆಯನ್ನು ಬೆಳೆಸುವುದಿಲ್ಲ. ನಮ್ಮ ಚರ್ಚೆಗೆ ಉಪಯುಕ್ತವಾದ ಯಾವುದೇ ಅಂಶಗಳು ಈ ಲೇಖನದಲ್ಲಿ ಸಿಗುವುದಿಲ್ಲವೇಕೆಂದರೆ ಈ ಲೇಖನವು ಚರ್ಚೆಯನ್ನು ಉದ್ದೇಶಿಸುವುದಿಲ್ಲ, ಬದಲಾಗಿ ಅದರ ಲೇಖಕರನ್ನು ಉದ್ದೇಶಿಸಿದೆ. ಸ್ವಲ್ಪ ಒರಟಾಗಿ ಹೇಳುವುದಾದರೆ ಇದು ಕೆಸರೆರಚುವ ಕೆಲಸದಂತೆ ಕಾಣುತ್ತದೆ. ಇದನ್ನು ಸಂಕ್ಷಿಪ್ತವಾಗಿ ಸ್ಪಷ್ಟೀಕರಿಸಿ, ಕೊನೆಯಲ್ಲಿ ಬಾಲಗಂಗಾಧರರದೇ ಕೆಲವು ಅಭಿಪ್ರಾಯಗಳನ್ನಿಟ್ಟು ಈ ಪ್ರತಿಕ್ರಿಯೆಯನ್ನು ಮುಗಿಸುತ್ತೇವೆ.

ಇದೊಂದು ಚರ್ಚೆಯ ವಿಷಯವೇ ಅಲ್ಲ ಎಂಬುದು ಮನು ಅವರ ಅಭಿಪ್ರಾಯ. ಆದರೆ ಇಂಥದೊಂದು ಪ್ರಮುಖವಾದ ಚರ್ಚೆಯಿರುವುದಂತೂ ಹೌದು; ನಮ್ಮ ಪರಂಪರೆಯ ಜೊತೆಗೆ ನಮ್ಮ ಸಂಬಂಧ ಹೇಗಿರಬೇಕು? ಪ್ರಸ್ತುತ ಲೇಖನವು



ನಮ್ಮ ಪುರಾಣ ಕಥೆಗಳನ್ನು ಸತ್ಯಘಟನೆಗಳನ್ನಾಗಿ ಮಾರ್ಪಡಿಸುವ ವಿಷಯವನ್ನು ಆಯ್ದುಕೊಳ್ಳುತ್ತದೆ. ಈ ಚರ್ಚೆಯು ಕೇವಲ ಒಂದು ಬೌದ್ಧಿಕ ಕಸರತ್ತಾಗಿ ಉಳಿದಿಲ್ಲ, ಅದು ವರ್ತಮಾನದ ಭಾರತಕ್ಕೆ ವ್ಯಾವಹಾರಿಕ ಸಮಸ್ಯೆಯಾಗಿ ಕಾಡುತ್ತಿದೆ. ಈ ಸಮಸ್ಯೆಯನ್ನು ಎಲ್ಲಾ ಚಿಂತಕರೂ, ಚಳುವಳಿಗಳೂ ಒಪ್ಪಿ ಕೊಂಡಿವೆಯಷ್ಟೇ ಅಲ್ಲ, ಅದಕ್ಕೆ ತಮ್ಮ ತಮ್ಮ ನಿಟ್ಟಿನಿಂದ ಪರಿಹಾರವನ್ನೂ ಕಂಡುಹಿಡಿಯುತ್ತಿವೆ. ಅಂಥ ಗುಂಪುಗಳಲ್ಲಿ ಹಿಂದುತ್ವವಾದಿಗಳೂ ಇದ್ದಾರೆ, ಸೆಕ್ಯುಲರ್‌ವಾದಿಗಳೂ ಇದ್ದಾರೆ. ಇಂಥ ಪರಿಹಾರೋಪಾಯಗಳೇ ಹೊಸ ಹೊಸ ಸಮಸ್ಯೆಗಳನ್ನು ಸೃಷ್ಟಿಸುತ್ತಿವೆ ಎಂಬುದೂ ಗೊತ್ತಿಲ್ಲದ ವಿಷಯವೇನಲ್ಲ. ಅಂದರೆ ಈ ಸಂಬಂಧಿಸಿ ಸಮಸ್ಯೆಯೊಂದು ವಾಸ್ತವಿಕವಾಗಿ ಇದೆ ಹಾಗೂ ಬಾಲಗಂಗಾಧರ ಅವರ ಲೇಖನವು ಈ ಕುರಿತು ಬಂದ ಹಲವಾರು ಲೇಖನ/ಗ್ರಂಥಗಳ ಸಾಲಿನಲ್ಲಿ ಆ ಸಮಸ್ಯೆಯನ್ನೇ ಉದ್ದೇಶಿಸಿ ಬಂದದ್ದೇ ವಿನಃ ಅದು ಪೇಪರ್ ಟೈಗರ್ ಅಲ್ಲ. (ವಿಪರ್ಯಾಸವೆಂದರೆ, ಈ ಲೇಖನವನ್ನು ಓದಿದ ಕೆಲವರು 'ಬಾಲಗಂಗಾಧರರು ಇಲ್ಲಿ ಹೇಳುವ ಅನೇಕ ವಿಷಯಗಳನ್ನು ಹಲವರು ಈಗಾಗಲೇ ಹೇಳಿದ್ದಾರೆ' ಎಂಬುದಾಗಿ ಕೂಡಾ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ).

ಬಾಲಗಂಗಾಧರ ಅವರು ಈ ಸಮಸ್ಯೆಯನ್ನು ಅರ್ಥೈಸುವ ನಿಟ್ಟಿನಲ್ಲಿ ಅದರ ಮೂಲ ಹಾಗೂ ಸ್ವರೂಪಗಳ ಕುರಿತು ಚರ್ಚಿಸುತ್ತಾರೆ. ಆ ಚರ್ಚೆಗೆ ಯಾವ ದೃಷ್ಟಾಂತಗಳು ಪ್ರಸ್ತುತವೊ ಅವುಗಳನ್ನು ಪರಿಶೀಲಿಸಿದ್ದಾರೆ. ಇಷ್ಟೆಲ್ಲ ಪರಿಶೀಲನೆಯ ನಂತರ 'ನಮಗೇನು ಬೇಕು? ಚರಿತ್ರೆಯೊ ಗತಕಾಲವೊ?' ಎಂಬ ಪ್ರಶ್ನೆಯ ರೂಪದಲ್ಲಿ ಈ ಸಮಸ್ಯೆಯನ್ನು ಸೂತ್ರೀಕರಿಸುತ್ತಾರೆ. ಪ್ರಸ್ತುತ ಲೇಖನವು ಈ ಪ್ರಶ್ನೆಯನ್ನು ಸತಾರ್ಕಿಕವಾಗಿ ನಮ್ಮ ಮುಂದಿಡುತ್ತದೆ. ಈ ಲೇಖನದ ಕುರಿತು ಇನ್ನು ಯಾವ ಚರ್ಚೆ ನಡೆಯುವುದಿದ್ದರೂ ಈ ಪ್ರಶ್ನೆಗಳನ್ನೇ ಇಟ್ಟುಕೊಂಡು ಮುಂದುವರಿಯುವುದು ಯಥೋಚಿತ. ಅಂದರೆ ಮನು ಅವರ ಈ ಕೆಳಗಿನ ಹೇಳಿಕೆಗಳು ಈ ಚರ್ಚೆಯ ಯಥೋಚಿತವಾದ ಮುಂದುವರಿಕೆಗಳೆಂಬುದನ್ನು ಚರ್ಚೆಯಲ್ಲಿ ಕಿಂಚಿತ್ತು ಆಸಕ್ತಿಯುಳ್ಳವರಾರೂ ಹೇಳಲಾರರು:

೧. ಲೇಖಕರು ಚರಿತ್ರೆಯನ್ನು ಪ್ರಶ್ನಿಸಲು ಚರಿತ್ರೆಯ ವಿಧಾನವನ್ನೇ ಆಯ್ದುಕೊಂಡಿದ್ದಾರೆ. ಒಬ್ಬ ವ್ಯಕ್ತಿ 'ನಾನು ಸದಾ ಸುಳ್ಳನ್ನೇ ಹೇಳುವುದು' ಎಂದರೆ ಆ ಹೇಳಿಕೆ ಸುಳ್ಳೊ ಸತ್ಯವೊ?

೨. ಲೇಖಕರು ಅನುಕೂಲಕ್ಕೆ ಒದಗಿಬರುವ ನಿಜಾಂಶಗಳನ್ನು ಮಾತ್ರ ದುಡಿಸಿಕೊಳ್ಳುತ್ತಾರೆ. ಇದು ಯಾವ ಐಡಿಯಾಲಜಿಯ ವಕ್ತಾರರನ್ನು ಈ ಲೇಖನವು ಟೀಕಿಸುತ್ತದೆಯೊ ಅವರ ಲಕ್ಷಣವೇ ಆಗಿದೆ.

೩. ಸಂಘ ಪರಿವಾರದಲ್ಲಿ ಖಾಲಿ ಬಿದ್ದ ಜಾಗಕ್ಕೆ ಗುಜರಾಯಿಸುತ್ತಿರುವ ಅರ್ಜಿಯಂತಿದೆ ಈ ಲೇಖನ. ಇದು ಈ ಲೇಖನದ ಗೂಢೋದ್ದೇಶವಾಗಿರಬಹುದು.

೪. ಚರಿತ್ರೆ ಬೇಕೆ ಗತಕಾಲ ಬೇಕೆ ಎಂಬುದು ನಮ್ಮಲ್ಲಿ ಅನೇಕರಿಗೆ ಪ್ರಶ್ನೆಯಾಗಿಯೇ ತೋರುತ್ತಿಲ್ಲ.

೫. ಲೇಖಕರು ಎನ್‌ಲೈಟನ್‌ಮೆಂಟ್‌ಗಿಂತ ಬೇರೆಯ ಆವರಣವನ್ನು ನಿರ್ಮಿಸಲು ಹೊರಟಿದ್ದೇನೆಂಬ ಘೋಷಣೆಯನ್ನು ಮಾಡುತ್ತಾರೆ, ಆದರೆ ಈ ಲೇಖನವು ಎನ್‌ಲೈಟನ್‌ಮೆಂಟ್ ಕಾಲದಲ್ಲಿ ರೂಪುಪಡೆದ 'ಅನ್ಯಾಯಗಳ ಕಥನ'ದ ರಾಜಕಾರಣವನ್ನೇ ಮೈಗೂಡಿಸಿಕೊಂಡಿದೆ.

ನಮ್ಮ ಸುತ್ತಮುತ್ತ ನಡೆಯುತ್ತಿರುವ ವಾಗ್ವಾದಗಳು, ವಿವಾದಗಳು, ಸಂಘರ್ಷಗಳು 'ಚರಿತ್ರೆ ಬೇಕೆ ಗತಕಾಲ ಬೇಕೆ' ಎಂಬ ಸಮಸ್ಯೆಯ ಸುತ್ತಲೇ ಸುತ್ತುತ್ತಿವೆ ಎಂಬುದು ಬಾಲಗಂಗಾಧರ ಅವರ ವಾದ. ಆದರೆ ಮನು ದೇವದೇವನ್ ಅವರ ೪ ನೇ ಹೇಳಿಕೆಯು ಈ ಪ್ರಶ್ನೆಯನ್ನೇ ಅಪ್ರಸ್ತುತವೆಂದು ಮೂಲೆಗೊತ್ತಲು ಪ್ರಯತ್ನಿಸುತ್ತದೆ. ಅವರ ೧, ೨, ೫ ನೇ ಹೇಳಿಕೆಗಳು ಬಾಲಗಂಗಾಧರ ಅವರಿಗೆ ಅಂಥ ಪ್ರಶ್ನೆಗಳನ್ನೆತ್ತುವ ತಾರ್ಕಿಕ ಸಾಧ್ಯತೆಯಾಗಲೀ, ನೈತಿಕ ಹಕ್ಕಾಗಲೀ ಇಲ್ಲ ಎಂಬುದಾಗಿ ತಿಳಿಸಿ ಇಂಥ ಚರ್ಚೆಯ ಸಾಧ್ಯತೆಯನ್ನೇ ಅಲ್ಲಗಳೆಯುತ್ತವೆ. ಹಾಗೂ ೩ ನೇ ಹೇಳಿಕೆಯು ಈ ಇಡೀ ಲೇಖನದ ಹಿಂದಿನ ಗೂಢೋದ್ದೇಶದ ಕುರಿತು ಓದುಗರಿಗೆ ಸುಳಿವನ್ನು ನೀಡುವ ಮಹತ್ಕಾರ್ಯವನ್ನು ಗೈಯುತ್ತದೆ. ಅಂತಿಮವಾಗಿ ಈ ಎಲ್ಲಾ ಕಾರಣಗಳಿಗಾಗಿ ಪ್ರಸ್ತುತ ಲೇಖನದಲ್ಲಿ ಎತ್ತಿದ ಚರ್ಚೆಯನ್ನು ಗಂಭೀರವಾಗಿ ತೆಗೆದುಕೊಳ್ಳುವ ಅಗತ್ಯವಿಲ್ಲ ಎಂಬುದಾಗಿ ಅಪ್ಪಣೆ ಕೊಡಿಸಲಾಗಿದೆ. ಆಯಿತು, ಈ ಸಮಸ್ಯೆಗಳ ಸಂಬಂಧಿಸಿ ಬಾಲಗಂಗಾಧರರು ಎತ್ತುವ ಪ್ರಶ್ನೆಗಳು ಪ್ರಸ್ತುತವಲ್ಲ, ಹಾಗೂ ಅವರು ನೀಡುವ ಪರಿಹಾರಗಳು ಸಂಘ ಪರಿವಾರದವರಿಗೆ ಅನುಕೂಲವಾಗಿವೆ (ಅದರಿಂದ ಏನು ಅನಾಹುತವಾಗುತ್ತದೆ ಎಂಬುದನ್ನು ಅವರು ತಿಳಿಸುವುದಿಲ್ಲ) ಎಂಬುದು ಮನು ದೇವದೇವನ್ ಅವರ ಅಭಿಪ್ರಾಯವೇ ಆದರೆ ಅವರು ಈ ಮುಂದಿನ ಎರಡು ನಿಲುವುಗಳನ್ನು ಹೊಂದಿರಲು ಸಾಧ್ಯ: ೧. ಈ ಸಮಸ್ಯೆಯನ್ನು ಅರ್ಥೈಸಲು ಇದಕ್ಕೂ ಒಳ್ಳೆಯ ಪ್ರಶ್ನೆಗಳಿವೆ ಅಥವಾ ವಿಧಾನಗಳಿವೆ ಎಂಬ ನಿಲುವು. ೨. ಪುರಾಣಗಳನ್ನು ನಿಜಘಟನೆಗಳ ಚರಿತ್ರೆ ಎಂಬುದಾಗಿ ಭಾವಿಸಿಕೊಳ್ಳಲಿ ಬಿಡಿ, ನೀವೇಕೆ ಇಲ್ಲದ ಸಮಸ್ಯೆಯನ್ನು ಮಾಡಿಕೊಳ್ಳುತ್ತೀರಿ? ಎಂಬ ನಿಲುವು. ಮೊದಲನೆಯ ನಿಲುವನ್ನು ಸ್ಪಷ್ಟಪಡಿಸುವ ನಿಟ್ಟಿನಲ್ಲಿ ಈ ಲೇಖನದಲ್ಲಿ ಏನನ್ನೂ ಹೇಳಲಾಗಿಲ್ಲ. ಒಂದೊಮ್ಮೆ ಈ ನಿಲುವಿನಿಂದಾಗಿಯೇ ಅವರಿಗೆ ಬಾಲಗಂಗಾಧರರ ಲೇಖನದ ಕುರಿತು ಆಕ್ಷೇಪಣೆ



ಇದ್ದಲ್ಲಿ ಅದನ್ನು ಸ್ಪಷ್ಟೀಕರಿಸುವುದನ್ನೇ ಮರೆಯುವಷ್ಟು ಬೇಜವಾಬ್ದಾರಿಗಳೆಂಬುದಾಗಿ ಅವರನ್ನು ಪರಿಗಣಿಸಬೇಕಾಗುತ್ತದೆ. ಆದರೆ ನಾವು ಆ ತೀರ್ಮಾನವನ್ನು ತೆಗೆದುಕೊಳ್ಳುವುದಿಲ್ಲ. ಈ ಲೇಖನವು ಎರಡನೆಯ ನಿಲುವನ್ನು ಸಾಕಷ್ಟು ಬಾರಿ ವ್ಯಕ್ತಪಡಿಸಿದೆ. ಹಾಗಾಗಿ ಎರಡನೆಯ ನಿಲುವೇನಾದರೂ ಅವರ ಪ್ರತಿಕ್ರಿಯೆಯಲ್ಲಿದ್ದರೆ ಅದರಲ್ಲಿ ನಮಗೆ ಆಸಕ್ತಿಯಿಲ್ಲ. ಹಾಗಂತ ಮನು ದೇವದೇವನ್ ರೈತರ ಆತ್ಮಹತ್ಯೆಯ ಕುರಿತು ಬರೆಯಲಿಚ್ಛಿಸಿದಲ್ಲಿ ನಮ್ಮದೇನೂ ಆಕ್ಷೇಪಣೆಯಿಲ್ಲ.

ಮನು ಅವರ ಪ್ರತಿಕ್ರಿಯೆಯ ಕುರಿತು ಬಾಲಗಂಗಾಧರರಿಗೆ ಏನಾದರೂ ಹೇಳುವುದಿದೆಯೆ ಎಂಬುದಾಗಿ ವಿಚಾರಿಸಿದಾಗ ಇದರಲ್ಲಿ ತಮ್ಮ ಲೇಖನದ ವಿಚಾರಗಳಿಗೆ ಸಂಬಂಧಿಸಿದಂತೆ ತಾವು ಚರ್ಚೆಗೆತ್ತಿಕೊಳ್ಳಬಲ್ಲ ವಿಷಯಗಳಾವುವೂ ಇಲ್ಲ ಎಂಬುದಾಗಿ ತಿಳಿಸಿದ್ದಾರೆ. ಏಕೆಂದರೆ ಮನು ಅವರು ತಮ್ಮ ಲೇಖನವನ್ನು ಯಥಾರ್ಥವಾಗಿ ಗ್ರಹಿಸಿಲ್ಲ ಹಾಗೂ ಅವರು ಬಳಸುವ ವಿಚಾರಗಳ ಕುರಿತು ಅವರಿಗೆ ಸ್ಪಷ್ಟತೆಯಿಲ್ಲ ಎಂಬುದಾಗಿ ತಿಳಿಸಿದ್ದಾರೆ. ಅವರೇ ಸೂಚಿಸಿದ ಕೆಲವು ಉದಾಹರಣೆಗಳನ್ನು ಈ ಕೆಳಗೆ ಇಡಲಾಗಿದೆ:

## ಅಜ್ಞಾನ

ಮನು ಅವರಿಗೆ ತಾವು ಬಳಸುವ ಪರಿಭಾಷೆಗಳು ಹಾಗೂ ಲೇಖಕರ ಕುರಿತು ಎಷ್ಟು ತಿಳುವಳಿಕೆಯಿದೆಯೆಂಬುದಕ್ಕೆ ಕೆಲವು ಉದಾಹರಣೆಗಳು:

೧. ಮನು ಅವರು ತಮ್ಮ ಲೇಖನದ ಪ್ರಾರಂಭದಲ್ಲಿ ತಿಳಿಸುವ 'Liar`s Paradox' ಎಂಬುದು ಭಾಷಾ ತತ್ವಶಾಸ್ತ್ರದಲ್ಲಿನ ಸಮಸ್ಯೆ. ಒಂದು ವಾಚ್ಯಾರ್ಥ (ವಸ್ತು ಪಾತಳಿಯಲ್ಲಿ) ಹಾಗೂ ಅದರ ಸತ್ಯಾಸತ್ಯತೆ (ಮೆಟಾ ಪಾತಳಿಯಲ್ಲಿ)ಗಳ ನಡುವೆ ವೈರುಧ್ಯ ನಿರ್ಮಾಣವಾಗುತ್ತದೆ; ಅವುಗಳಲ್ಲಿ ಒಂದು ಸತ್ಯವಾದರೆ ಮತ್ತೊಂದು ಸುಳ್ಳಾಗಲೇ ಬೇಕು. ಇದು paradox. ನಾನು ಚರಿತ್ರೆಲೇಖನವನ್ನು ಮಾಡುತ್ತಲೇ ಅದರ ಪ್ರಸ್ತುತತೆಯನ್ನು ಅಲ್ಲಗಳೆಯುವುದು ಅಸಂಬದ್ಧತೆಯ (inconsistency) ಸಮಸ್ಯೆಯಾಗಬಹುದೇ ಹೊರತು paradoxನ ಸಮಸ್ಯೆ ಆಗಲಾರದು. ಅಂದರೆ ಹೇಳುವುದು ಹಾಗೂ ಮಾಡುವುದರ ನಡುವೆ ಸಂಬದ್ಧತೆಯಿಲ್ಲ ಎಂಬಂಥ ಸಮಸ್ಯೆ. ಆದರೆ ನನ್ನ ಲೇಖನದಲ್ಲಿ ನಾನೇನು ಮಾಡಹೊರಟಿದ್ದೇನೆ? ನಾನು ಗತಕಾಲದ ಕುರಿತು ಮಾತನಾಡಲಿಕ್ಕೆ ಚರಿತ್ರೆಲೇಖನವೊಂದೇ ಮಾರ್ಗವಲ್ಲ ಎನ್ನುತ್ತೇನೆ. ನಾವೆಲ್ಲ ಸಾಮಾನ್ಯವಾಗಿ ಚರಿತ್ರೆಲೇಖನದ ಸಹಾಯವಿಲ್ಲದೇ ಗತಕಾಲದ ಕುರಿತು ಮಾತನಾಡುತ್ತೇವೆ, ಮಾತನಾಡಿಕೊಂಡು ಬಂದಿದ್ದೇವೆ. ಹಾಗಿರುವಾಗ ನನ್ನ

ಹೇಳಿಕೆಯಲ್ಲಿ ಅಸಂಬದ್ಧತೆಯೇನಿದೆ? paradox ಗೂ inconsistency ಗೂ ನಡುವೆ ವ್ಯತ್ಯಾಸಗಳು ತಿಳಿಯದಿದ್ದಾಗ ಎರಡೂ ಒಂದೇ ಆಗಿ ಕಾಣುವುದು ಸ್ವಾಭಾವಿಕ.

೨. `ad hoc' (ತಾತ್ಪೂರ್ತಿಕ) ವಿವರಣೆಗೆ ಸಂಬಂಧಿಸಿದ ವಿಚಾರ: `ad hocness' ಗೂ ವಸ್ತುಗಳನ್ನು ಗುರುತಿಸುವುದಕ್ಕೂ ಯಾವುದೇ ಸಂಬಂಧವಿಲ್ಲ. ಅದು ವಿವರಣೆಗೆ ಸಂಬಂಧಪಟ್ಟ ಅಂಶ. ತಾತ್ಪೂರ್ತಿಕ ವಿವರಣೆಯು 'ವೈಜ್ಞಾನಿಕ ವಿವರಣೆ'ಗೆ ಪ್ರತಿಯಾಗಿ ಬಳಕೆಯಲ್ಲಿರುವ ಶಬ್ದ. ಯಾವುದೇ ಸಾಮಾನ್ಯ ತತ್ವಗಳ ಆಧಾರವಿಲ್ಲದೇ ಆಯಾ ಸಂದರ್ಭದಲ್ಲಿ ತೋಚಿದ ಹಾಗೆ ಮಾಡುವ ವಿವರಣೆಗೆ `ad hoc' ವಿವರಣೆಯೆನ್ನುತ್ತಾರೆ. Quantum Physics ಮತ್ತು relativity ಗಳ ನಡುವೆ ಇರುವ ಸಂಘರ್ಷವು `ad hocness'ಗೆ ನಿದರ್ಶನಗಳಲ್ಲ. ಅವೆರಡರಲ್ಲಿ ಯಾವುದೂ ತಾತ್ಪೂರ್ತಿಕ ವಿವರಣೆಗಳಲ್ಲ, ಅವು ವೈಜ್ಞಾನಿಕ ವಿವರಣೆಗಳೇ. ಅವುಗಳ ನಡುವೆ ಸಂಘರ್ಷವೇಕಿದೆಯೆಂಬುದನ್ನು ತಿಳಿಸಲಿಕ್ಕೂ ಮೊದಲು ಭೌತಶಾಸ್ತ್ರವನ್ನು ಓದಬೇಕಾಗುತ್ತದೆ.

೩. ನಾನು ಎನ್‌ಲೈಟನ್‌ಮೆಂಟ್ ಚೌಕಟ್ಟನ್ನು ಅಳವಡಿಸಿಕೊಂಡು ಅದೇ ವೇಳೆಗೆ ಅದನ್ನು ಟೀಕಿಸುತ್ತೇನೆ, ಅದರಲ್ಲೂ ರೂಸೊ ಹುಟ್ಟುಹಾಕಿದ 'ಅನ್ಯಾಯದ ಕಥನ'ದ ರಾಜಕೀಯವನ್ನೇ ಮುಂದುವರಿಸುತ್ತಿದ್ದೇನೆ ಎಂಬ ವಿಷಯ: ವಸ್ತುಸ್ಥಿತಿ ಯೆಂದರೆ ರೂಸೋ ರೋಮಾಂಟಿಕ್ ಚಿಂತನೆಯ ಹರಿಕಾರನಾಗಿದ್ದಾನೆ ಹಾಗೂ ಆತನು ಎನ್‌ಲೈಟನ್‌ಮೆಂಟ್ ವಿಚಾರಗಳನ್ನು ವಿರೋಧಿಸಿದವನು. ರಾಜಕೀಯ ಚಿಂತನೆಗಳ ಕುರಿತು ದಿವ್ಯ ಅಜ್ಞಾನವಿರುವವರು ಮಾತ್ರವೇ ಆತನದು ಎನ್‌ಲೈಟನ್‌ಮೆಂಟ್ ವಿಚಾರಧಾರೆಯೆಂಬುದಾಗಿ ಹೇಳಬಲ್ಲರು. ರೂಸೋನಲ್ಲಿ 'ಅನ್ಯಾಯದ ಕಥನ'ದ ರಾಜಕೀಯವನ್ನು (ಅದರ ಅರ್ಥ ಏನೇ ಆಗಿರಲಿ) ಕಾಣಲಿಕ್ಕೆ ಇನ್ನೂ ಒಂದು ತೂಕ ಹೆಚ್ಚು ಅಜ್ಞಾನವೇ ಬೇಕು.

೪. ಸಂಘ ಪರಿವಾರದಲ್ಲಿ ಖಾಲಿಬಿದ್ದ 'ಹುದ್ದೆ'ಗಳನ್ನು ತುಂಬುವ ಗೂಢೋದ್ದೇಶವನ್ನು ಹೊಂದಿರುವುದರ ಬಗ್ಗೆ: ಇಲ್ಲಿ ಮನು ಅವರಿಗೆ ಸಮಾಜ ಶಾಸ್ತ್ರೀಯ ಅಜ್ಞಾನ ಕವಿದಿದೆ. ಸಾಮಾಜಿಕ ಚಳುವಳಿಗಳಿಗೂ ಬುದ್ಧಿಜೀವಿಗಳಿಗೂ ನಡುವೆ ಇರುವ ಸಂಬಂಧವು ಖಾಲಿ ಹುದ್ದೆ ಹಾಗೂ ಅದರ ಜಾಹೀರಾತಿನದಲ್ಲ. ಅಂಥ ಸಂಬಂಧವು ಐಡಿಯಾಲಜಿಯ ವಕ್ತಾರರು ಹಾಗೂ ಚಳುವಳಿಗಳ (ಅಥವಾ ರಾಜಕೀಯ ಪಕ್ಷಗಳ) ನಡುವೆ ಇರುತ್ತದೆ. ಸಂಘ ಪರಿವಾರವು ಏಕೆ ಬುದ್ದಿಜೀವಿಗಳನ್ನು ಸೃಷ್ಟಿಸಿಲ್ಲವೆಂಬುದು ನನಗೂ ಗೊತ್ತಿಲ್ಲ. ಆದರೆ ಅದು ಐಡಿಯಾಲಜಿಯ ವಕ್ತಾರರನ್ನು ನೇಮಿಸಿಕೊಳ್ಳುತ್ತದೆ. ನಾನು ಬುದ್ಧಿಜೀವಿ ಎಂಬುದಾಗಿ ಭಾವಿಸಿಕೊಂಡಿದ್ದೇನೆ. ಮನು ಅವರಿಗೆ ಇವೆರಡರ



ನಡುವಿನ ವ್ಯತ್ಯಾಸವು ತಿಳಿದಿರುವ ಹಾಗೆ ಕಾಣುವುದಿಲ್ಲ. ಇವೆರಡರ ನಡುವಿನ ವ್ಯತ್ಯಾಸವು ತಿಳಿಯದೇ ಹೋದಾಗ ಒಂದಾಗಲು ಹೋಗಿ ಮತ್ತೊಂದಾಗಿ ಕೊನೆಗಾಣುವ ಅಪಾಯವಿದೆ ಎಂಬ ಕಿವಿಮಾತು ಹೇಳಬಲ್ಲೆ.

**ವಿಫಲತೆ**

ನನ್ನ ಲೇಖನವನ್ನು ಹಾಗೂ ನಿಲುವನ್ನು ಅರ್ಥಮಾಡಿಕೊಳ್ಳಲು ಮನು ವಿಫಲರಾದಂತೆ ತೋರುತ್ತದೆ. ಈ ಕೆಳಗೆ ಕೆಲವು ಉದಾಹರಣೆಗಳನ್ನು ನೀಡಿದ್ದೇನೆ:

೧. ನಾನು ಗ್ರೀಕರ ಕಾಲದಿಂದ ಹಿಡಿದು ವರ್ತಮಾನದವರೆಗಿನ 'ಚರಿತ್ರೆಯನ್ನು' ಬರೆಯಲಿಕ್ಕೆ ಹೊರಟಿಲ್ಲ. ನಾನು ನನ್ನ ಪ್ರಬಂಧದಲ್ಲಿ ಕೆಲವು ಸೈದ್ಧಾಂತಿಕ ಅಂಶಗಳನ್ನು ಉದಾಹರಿಸುತ್ತಿದ್ದೇನೆ ಅಷ್ಟೆ. ಹಾಗಾಗಿ ನನಗೆ ಪ್ರಸ್ತುತವಾದ ಉದಾಹರಣೆಗಳನ್ನು ಆಯ್ದು ಉದಾಹರಿಸುವ ಅಗತ್ಯವಿದೆ. ಕ್ವಾಂಟಮ್ ಭೌತಶಾಸ್ತ್ರದ ಉದಾಹರಣೆಗಳನ್ನು ಇಟ್ಟುಕೊಂಡು ಪಾಕಶಾಸ್ತ್ರವನ್ನು ವರ್ಣಿಸಲು ಸಾಧ್ಯವಿಲ್ಲವಷ್ಟೆ? ಇದೂ ಹಾಗೆಯೇ. ಇದು ನನ್ನ ವಾದವನ್ನು ಪುಷ್ಟೀಕರಿಸುವ ಸತ್ಯಗಳನ್ನು ಮಾತ್ರವೇ ಆಯ್ದುಕೊಳ್ಳುವುದಕ್ಕೆ ಸಂಬಂಧಿಸಿದ್ದಲ್ಲ. ಇವು ನನ್ನ ವಾದಕ್ಕೆ ಉದಾಹರಣೆಗಳೇ ವಿನಃ ಅವುಗಳ ಸತ್ಯಕ್ಕೆ ಪುರಾವೆಗಳಲ್ಲ.

೨. ನೆಹರೂ ಕಾಲದ ಬುದ್ಧಿಜೀವಿಗಳ ಕುರಿತು ನಾನು ನೀಡಿದ ಹೇಳಿಕೆಯ ಕುರಿತು ಮನು ಏನನ್ನು ಬರೆದಿದ್ದಾರೆಂಬುದನ್ನು ನೋಡಿದರೆ ಇವರಿಗೆ ನನ್ನ ಲೇಖನವು ಅರ್ಥವಾಗದಿರುವುದೊಂದೇ ಅಲ್ಲ, ಅರ್ಥಮಾಡಿಕೊಳ್ಳಲು ಮನಸ್ಸೂ ಇಲ್ಲ ಎಂಬುದು ಗೊತ್ತಾಗುತ್ತದೆ. ನೆಹರೂ ಕಾಲದ ಬುದ್ಧಿಜೀವಿಗಳು ಅವರ ಜೀವನಶೈಲಿ ಹಾಗೂ ಧೋರಣೆಗಳಿಂದಾಗಿ ಸಾಂಪ್ರದಾಯಿಕ ಜನರ ಕುರಿತು ಅಸಡ್ಡೆಯನ್ನು ಹೊಂದಿದ್ದರಿಂದ ಅವರ ಚರಿತ್ರೆಯಿಂದಾಗುವ ಹಾನಿಯು ಮಿತವಾಗಿತ್ತು, ಅದಕ್ಕೆ ಬದಲಾಗಿ ಸಂಘಪರಿವಾರವು ಅದನ್ನು ಸಾಂಪ್ರದಾಯಿಕ ಜನರ ನಡುವೆ ಪ್ರಸಾರ ಮಾಡಲು ಪ್ರಯತ್ನಿಸುವುದರಿಂದ ಹಾನಿಯು ಅಧಿಕವಾಗಿದೆ ಎಂಬುದು ನನ್ನ ವಾದ.

೩. ಇಸ್ಲಾಂ ಹಿಂದುತ್ವಕ್ಕೆ 'ಅನ್ಯಾಯ'ವೆಸಗಿತು ಎಂದು ನಾನು ಹೇಳುತ್ತಿಲ್ಲ, ಅದನ್ನು ಸೂಚಿಸುತ್ತಲೂ ಇಲ್ಲ. ನಮ್ಮ ಬೌದ್ಧಿಕ ಪ್ರಪಂಚದ ಮೇಲೆ ಇಸ್ಲಾಂ ಮತ್ತು ಬ್ರಿಟಿಷ್ ಆಳ್ವಿಕೆಗಳ ಪ್ರಭಾವವನ್ನು ಕುರಿತಾಗಿ ಮಾತ್ರವೇ ಹೇಳುತ್ತಿದ್ದೇನೆ. ನನ್ನ ಲೇಖನಕ್ಕೆ ಬಂದ ಈ ಪ್ರತಿಕ್ರಿಯೆಯೇ ಈ ಹಾನಿ ಎಷ್ಟರಮಟ್ಟಿಗೆ ಆಗಿದೆ ಎಂಬುದಕ್ಕೆ ನಿದರ್ಶನ.

೪. ನನ್ನ ಲೇಖನವು ಪೋಸ್ಟ್ ಕೊಲೊನಿಯಲ್ ವಿಚಾರಧಾರೆಯನ್ನು

ಪ್ರಸ್ತುತಪಡಿಸುತ್ತಿಲ್ಲ. ನಾನು ಆ ಪಂಥಕ್ಕೆ ಸೇರಿದವನಲ್ಲ. ಹಾಗಾಗಿ ಅನ್ಯಾಯದ ಕಥನದ ರಾಜಕೀಯವನ್ನು ಮಾಡುತ್ತಿಲ್ಲ. ವಿಚಾರಗಳು ಹೇಗೆ ಪ್ರಚಲಿತದಲ್ಲಿ ಬಂದವು ಎಂಬುದನ್ನು ಮಾತ್ರವೇ ಗುರುತಿಸುತ್ತಿದ್ದೇನೆ.

ನಾವೇಕೆ ಈ ಚರ್ಚೆಯನ್ನು ಮುಂದುವರಿಸಬಯಸುವುದಿಲ್ಲ ಎಂಬುದಕ್ಕೆ ಈ ಮೇಲಿನ ಸ್ಪಷ್ಟೀಕರಣಗಳು ಸಾಕು ಎಂಬುದಾಗಿ ಭಾವಿಸಿದ್ದೇವೆ.

**ನೀನಾಸಮ್ ಚಟುವಟಿಕೆಗಳು:**

ಮಾರ್ಚ್ ೫ರಂದು ನೀನಾಸಮ್ ಮರುತಿರುಗಾಟದ 'ಕಥನಕುತೂಹಲ' ಪ್ರಯೋಗದ ಪ್ರದರ್ಶನಗಳು ನಡೆದವು. ಈ ಪ್ರಯೋಗದಲ್ಲಿ ಕನ್ನಡದ ಇಬ್ಬರು ಯುವ ಕಥೆಗಾರರ ಎರಡು ಕಥೆಗಳನ್ನು ಇಬ್ಬರು ಯುವ ನಿರ್ದೇಶಕರು ರಂಗರೂಪಕ್ಕೆ ತಂದಿದ್ದರು (ವಿವೇಕ ಶಾನಭಾಗರ 'ಶರವಣ ಸರ್ವೀಸಸ್', ನಿ: ಮಂಜು ಕೊಡಗು ಮತ್ತು ವಸುಧೇಂದ್ರರ 'ಯುಗಾದಿ', ನಿ: ಗಣೇಶ್ ಎಂ.) ಹುನಗುಂದ ಮತ್ತು ಮಲ್ಲಾಡಿಹಳ್ಳಿಗಳಲ್ಲಿ ನೀನಾಸಮ್ ನಡೆಸಿದ ರಂಗಶಿಬಿರಗಳಲ್ಲಿ ಪ್ರಯೋಗಿಸಿದ ಎರಡು ನಾಟಕಗಳನ್ನು ಆಯಾ ತಂಡದವರು ಮಾರ್ಚ್ ೩೦ ಮತ್ತು ೩೧ರಂದು ಹೆಗ್ಗೋಡಿನಲ್ಲಿ ಪ್ರದರ್ಶಿಸಿದರು: ತಿರುಕರಂಗ, ಮಲ್ಲಾಡಿಹಳ್ಳಿ ತಂಡದವರಿಂದ 'ಸಾಹೇಬರು ಬರುತ್ತಾರೆ' (ನಿಕೊಲಾಯ್ ಗೊಗೋಲ್ ಅನುವಾದ: ಕೆ.ವಿ. ಸುಬ್ಬಣ್ಣ, ಅಕ್ಷರ ಕೆ.ವಿ.) ಮತ್ತು 'ದೇಸಗತಿ' (ರಾಘವೇಂದ್ರ ಪಾಟೀಲರ ಕಥೆ ಆಧರಿಸಿ; ನಿ: ಮಹದೇವ ಹಡಪದ), ಧ್ರುವರಂಗ, ಹುನಗುಂದ ತಂಡದವರಿಂದ 'ಈ ಕೆಳಗಿನವರು' (ಮಾಕ್ಸಿಂ ಗಾರ್ಕಿ ನಾಟಕದ ರೂಪಾಂತರ: ಬಿ.ಟಿ. ದೇಸಾಯಿ, ನಿ: ಗೋಪಾಲಕೃಷ್ಣ ದೇಶಪಾಂಡೆ). ಎಪ್ರಿಲ್ ೧೬ರಿಂದ ೨೫ರವರೆಗೆ ಚನ್ನಕೇಶವ ಅವರ ನಿರ್ದೇಶನದಲ್ಲಿ ಮಕ್ಕಳ ಶಿಬಿರವನ್ನು ನಡೆಸಲಾಯಿತು. ಹೆಗ್ಗೋಡಿನ ಸುತ್ತಮುತ್ತಲಿನ ಏಳೆಂಟು ಶಾಲೆಗಳ ಸುಮಾರು ೮೮ ಮಕ್ಕಳು ಈ ಶಿಬಿರದಲ್ಲಿ ಭಾಗವಹಿಸಿದರು. ಮೇ ೧ರಂದು ಬೆಂಗಳೂರಿನ ಕಲಾಗಂಗೋತ್ರಿ ತಂಡದವರಿಂದ 'ಮೈಸೂರು ಮಲ್ಲಿಗೆ' (ಕೆಎಸ್‌ನ ಕವಿತೆಗಳನ್ನು ಆಧರಿಸಿದ ನಾಟಕರೂಪ: ರಾಜೇಂದ್ರ ಕಾರಂತ; ನಿರ್ದೇಶನ: ಡಾ.ಬಿ.ವಿ. ರಾಜಾರಾಮ್) ಪ್ರಯೋಗದ ಪ್ರದರ್ಶನ ಹೆಗ್ಗೋಡಿನಲ್ಲಿ ನಡೆಯಿತು. ಜೂನ್ - ಜುಲೈ ಅವಧಿಯಲ್ಲಿ ನೀನಾಸಮ್ ಬಳಗವು ರಘುನಂದನರ ನಿರ್ದೇಶನದಲ್ಲಿ ಒಂದು ನಾಟಕವನ್ನು ಸಿದ್ಧಪಡಿಸಿ ಜುಲೈ ೧೬ ಮತ್ತು ೧೭ರಂದು ಪ್ರದರ್ಶಿಸಲಿದೆ.

# ಪುಟ್ಟದೊಂದು ಪ್ರತ್ಯುತ್ತರ

ಬಿ. ಎಸ್. ಸೋಮಶೇಖರ

ಮಾತುಕತೆಯ ಫೆಬ್ರವರಿ ಸಂಚಿಕೆಯಲ್ಲಿ ಪ್ರಕಟವಾಗಿರುವ ಮನು ದೇವದೇವನ್ ಅವರ ಬರಹಕ್ಕೆ ಪುಟ್ಟದೊಂದು ಪ್ರತ್ಯುತ್ತರವನ್ನು ಈ ಮೂಲಕ ನೀಡಲು ಬಯಸುತ್ತೇನೆ. ಈ ನನ್ನ ಪ್ರತಿಕ್ರಿಯೆ ಬಹುಶಃ ಸ್ವಲ್ಪ ತಡವಾಗಿರುವ ಹಾಗೆ ಕಾಣುತ್ತದೆ, ಹಾಗೇನಾದರೂ ಇದ್ದಲ್ಲಿ ಕ್ಷಮೆಯಿರಲಿ.

ಪತ್ರಿಕೆಗಳಲ್ಲಿ, ಅದರಲ್ಲೂ ಅಕಾಡೆಮಿಕ್ ಜರ್ನಲ್‌ಗಳಲ್ಲಿ ಲೇಖನಗಳಿಗೆಂದು ಮೀಸಲಾಗಿರುವ ಪುಟಗಳು ಎಂದರೆ ಅದು ಚಿಂತಕರು, ಲೇಖಕರು, ವಿಜ್ಞಾನಿಗಳು ತಂತಮ್ಮ ವಿಚಾರಗಳನ್ನು ಶಿಸ್ತುಬದ್ಧವಾಗಿ, ಸಂಯಮ ಮೀರದ ರೀತಿಯಲ್ಲಿ ಪ್ರಸ್ತುತಪಡಿಸಲು ದೊರಕಿರುವ ಪ್ರಶಸ್ತವಾದ ಅವಕಾಶ ಎಂಬುದು ನನ್ನ ತಿಳುವಳಿಕೆ. ಇಂಥ ಅಕಾಡೆಮಿಕ್ ವೇದಿಕೆಗೆ ಅದರದೇ ಆದ ಮಾನ್ಯತೆಯಿರುತ್ತದೆ, ಇದರ ಮೂಲಕ ನಡೆಯುವ ಸಂವಾದಗಳು ಬೇರೆಬೇರೆ ವಾದ-ಪ್ರತಿವಾದಗಳ ಮಂಡನೆಗೆ ಇಂಬುಕೊಟ್ಟು ಆ ಮೂಲಕ ಒಂದು ವಿಷಯದ ಬಗೆಗಿನ ಎಲ್ಲರ ತಿಳುವಳಿಕೆಯನ್ನು ಹೆಚ್ಚಿಸಲು ಅಥವಾ ಅದನ್ನು ಮತ್ತಷ್ಟು ಸ್ಪಷ್ಟಗೊಳಿಸಲು ಪ್ರಯತ್ನ ಪಡುತ್ತವೆ ಎನ್ನುವುದನ್ನು ನಾನು ಮತ್ತೊಮ್ಮೆ ಇಲ್ಲಿ ನೆನಪಿಸಬೇಕಿಲ್ಲ. ಈ ಕಾರಣಕ್ಕಾಗಿಯೇ ಇಂಥ ಸಂವಾದಗಳನ್ನು ಆಸಕ್ತ ಓದುಗ ಆಸ್ಥೆಯಿಂದ ಗಮನಿಸುತ್ತಾನೆ.

ಆದರೆ ಇಂಥ ಸಂವಾದಗಳಲ್ಲಿ, ಅದರಲ್ಲೂ ಪ್ರತಿವಾದಗಳ ಮಂಡನೆಯ ಸಂದರ್ಭದಲ್ಲಿ, 'ವಾದಖಂಡನೆ'ಯ ಬದಲಿಗೆ ಕೇವಲ 'ವಾದಿಯ ಖಂಡನೆ' ಜರುಗಿದರೆ ಅಲ್ಲಿ ಕಾಣುವುದು ಬರೀ ಮುಜುಗರ. ಯಾಕೆಂದರೆ ವಾದದ ಮಟ್ಟಿಗೆ ವಾದಿಯ ಸ್ಥಾನವಾಗಲೀ ಅವನ ಭೌತಿಕ ನೆಲೆಯಾಗಲೀ ಅವನ ಇತರ ವೈಯಕ್ತಿಕ ವಿಚಾರಗಳಾಗಲೀ ಓದುಗನಿಗೆ ಅಪ್ರಸ್ತುತ. ಇದನ್ನು ಮರೆತು, ವಾದಿಯ ವಾದವೆಲ್ಲಾ ಅವನ ಹಿನ್ನೆಲೆ, ಅವನ ಸ್ಥಾನ, ಭೌತಿಕ ನೆಲೆ, ಆರ್ಥಿಕ ಸ್ಥಿತಿಯಿಂದ ಪ್ರೇರಿತವಾದ್ದು ಎಂದು ಪ್ರತಿವಾದಿಸಿದರೆ ಅದು ಮೊಂಡುವಾದವಷ್ಟೇ ಅಲ್ಲ, ಪ್ರತಿವಾದವನ್ನು

ಮಂಡಿಸುವ ಸರಿಯಾದ ಕ್ರಮವೂ ಅಲ್ಲ. ಅಷ್ಟೇ ಅಲ್ಲ, ಅದು ಸಂವಾದಕ್ಕೆ ಅನುವುಮಾಡಿದ ಪತ್ರಿಕೆಗೂ ಪ್ರತಿವಾದಿಗೂ ಶೋಭೆ ತರುವಂಥ ಸಂಗತಿಯೂ ಅಲ್ಲ. ಬದಲಿಗೆ ಅಂಥ 'ವಾದಿಖಂಡನೆ'ಯನ್ನು ನಡೆಸುವವರ ಬಗೆಗೆ ಓದುಗನಲ್ಲಿ ಅಸಹ್ಯ ಮೂಡಬಹುದು ಅಷ್ಟೆ. ಯಾಕೆಂದರೆ, ಮನು ದೇವದೇವನ್ ಅವರ ಮಟ್ಟಿಗೆ ಈಗ ಇಲ್ಲಿ ಆಗಿರುವುದು ಕೂಡಾ ಇಷ್ಟೇ!: ವಾದಕ್ಕೊಂದು ತಕ್ಕುದಾದ ಪ್ರತಿವಾದವನ್ನು ಮಂಡಿಸುವುದರ ಬದಲಿಗೆ ಅವರು, ವಾದವನ್ನು ಮುಂದಿಟ್ಟ ವಾದಿಯನ್ನು ಖಂಡಿಸಲು ಹೊರಟು ಆ ಮೂಲಕ ತಮ್ಮ ಸ್ಕಾಲರ್‌ತನವನ್ನು ಸಾಧಿಸಲು ಯತ್ನಿಸಿದ್ದಾರೆ. ಅದೂ ಕೂಡ ಒಂದು ಗಂಭೀರ-ಸಂವಾದದ ಚೌಕಟ್ಟಿಗೆ ಒಂದಿಷ್ಟೂ ಒಗ್ಗದ ಪದಗಳನ್ನು ಬಳಸಿಕೊಂಡು! (ಉದಾಹರಣೆಗೆ: *ಅಂಡೂರಿಕೊಂಡು, ಸ್ಖಲನೆ, ವಲ್ಗರ್ ಮಾರ್ಕ್ಸಿಸ್ಟ್, ಬಾಲಸಿದ್ಧಾಂತ*... ಇತ್ಯಾದಿ). ಇದು, ೧. ವಾದಿಯ ಕುರಿತು ಅವರಲ್ಲಿ ತುಂಬಿರುವ ಅಸಹನೆ ಮತ್ತು ಅಸೂಯೆ, ೨. ವಾದಕ್ಕಿಟ್ಟ ವಿಷಯದ ಬಗೆಗೆ ತನ್ನ ತಿಳುವಳಿಕೆಯನ್ನು ಪರೀಕ್ಷೆಗೆ ಒಡ್ಡಿಕೊಳ್ಳಲು ತೋರುವ ನಿರಾಕರಣೆ, ೩. ಹೊಸದೊಂದು ವಾದವನ್ನು ತೆರೆದ ಮನಸ್ಸಿನಿಂದ ನೋಡಲಾಗದ ಸಂಕುಚಿತತೆ, ೪. ಅವರಲ್ಲಿರುವ ಅವಸರದ ಪ್ರತಿಕ್ರಿಯಾ ಧೋರಣೆ, ೫. ತನ್ನ ಸ್ಕಾಲರ್ ಪಟ್ಟಕ್ಕೆ ಎಲ್ಲಿ ಧಕ್ಕೆಯಾಗುತ್ತದೋ ಎನ್ನುವ ಅವರಲ್ಲಿನ ಅಭದ್ರತೆ/ಆತಂಕ – ಇವನ್ನು ಮಾತ್ರ ಓದುಗನಿಗೆ ಎತ್ತಿ ತೋರಿಸುತ್ತಿದೆ. ಹಾಗಿದ್ದರೆ, ಇದು ದೇವದೇವನ್ ಅವರ ನಿಜವಾದ ಬಣ್ಣವೇ ಇರಬಹುದೇನೋ ಎನ್ನುವ ಅನುಮಾನವೂ ಓದುಗನಲ್ಲಿ ಮೂಡಿ, ದೇವದೇವನ್ ಅವರಲ್ಲಿರಬಹುದಾದ ಮೂಲ ಸ್ಕಾಲರ್‌ತನವನ್ನೇ ಪ್ರಶ್ನಿಸಬೇಕಾದೀತೇನೋ ಎಂದೂ ಅವನಿಗೆ ಅನಿಸುತ್ತದೆ.

ಒಬ್ಬ ಸ್ಕಾಲರ್‌ನಲ್ಲಿ ಇರಬೇಕೆಂದು ಬಯಸುವ ಪ್ರೊಫೆಷನಲ್ ಮಟ್ಟದ ಆರೋಗ್ಯಕರ ಸ್ಪರ್ಧಾತ್ಮಕ ನಿಲುವು ಕೂಡಾ ದೇವದೇವನ್ ಅವರಲ್ಲಿ ಕಾಣುತ್ತಿಲ್ಲ. ಅವರು 'ಮಾತುಕತೆ'ಯಲ್ಲಿ ಕೊಟ್ಟಿರುವ ಪ್ರತಿಕ್ರಿಯೆಯನ್ನು ನೋಡಿದರೆ ಅದು, ಒಂದು ರೀತಿಯಲ್ಲಿ 'ಹೆಗಲು ಮುಟ್ಟಿ ನೋಡಿಕೊಂಡ ಕಳ್ಳನ ಹುಳ್ಳಮನಸ್ಸಿನ' ಪ್ರತಿಕ್ರಿಯೆಯಾಗಿ ಕಾಣುತ್ತಿದೆ. ಬಾಲಗಂಗಾಧರ ಅವರು ತಮ್ಮ ಲೇಖನದಲ್ಲಿ, ನೆಹರೂ ಯುಗದ ಭಾರತದ ಚರಿತ್ರಕಾರರ ಯಾವ ನಿಲುವು - ಧೋರಣೆಗಳನ್ನು ವಿವರಿಸಿ, ಅವು ಹೇಗೆ ಗತಕಾಲ - ಚರಿತ್ರೆಯನ್ನು ಸರಿಯಾಗಿ ಗ್ರಹಿಸಲು ಅಡ್ಡಗಾಲು ಆದವು ಎಂದು ಹೇಳಿದ್ದಾರೋ (ಪು. ೧೯), ಬಹುಪಾಲು ಅಂಥದೇ ವರ್ತನೆಯನ್ನು ದೇವದೇವನ್ ಅವರು ತಮ್ಮ ಪ್ರತಿಕ್ರಿಯೆಯ ಮೂಲಕ ಇಲ್ಲಿ ಪ್ರತ್ಯಕ್ಷವಾಗಿ ಓದುಗನ ಮುಂದೆ ಪ್ರದರ್ಶಿಸಿದ್ದಾರೆ. ಅಲ್ಲಿಗೆ, ಬಾಲಗಂಗಾಧರ ಅವರು ಚರಿತ್ರಕಾರರ ಕುರಿತು ವ್ಯಕ್ತಪಡಿಸಿರುವ ಅಭಿಪ್ರಾಯಕ್ಕೆ ಅನಾಯಾಸವಾಗಿ ಸರಿಯಾದ ರುಜುವಾತು



ದೊರಕಿದಂತಾಯಿತಲ್ಲ! ಇಂಥ 'ವ್ಯಕ್ತಿಕೇಂದ್ರಿತ ವೈಯಕ್ತಿಕ ದಾಳಿ'ಯ ಬದಲಿಗೆ ದೇವದೇವನ್ ಅವರು ಬಾಲಗಂಗಾಧರ ಅವರ ವಾದವು ಹೇಗೆ ಸರಿಯಾದುದಲ್ಲ ಎಂದು ಬಲವಾದ ಆಧಾರಗಳ ಮೂಲಕ ಪ್ರತಿಪಾದಿಸುವ ಪ್ರಯತ್ನ ಮಾಡಬೇಕಿತ್ತು. ಆದರೆ ಅಂಥದೊಂದು ಪ್ರಯತ್ನವನ್ನು, ಅಂದರೆ ದೇವದೇವನ್ ಅವರು ತಮ್ಮದೇ ಸ್ವಂತ ಪ್ರತಿವಾದವನ್ನು ಮಂಡಿಸುವ ಪ್ರಯತ್ನವನ್ನು ಇಲ್ಲಿ ಮಾಡಿಲ್ಲ.

ಹೋಗಲಿ, ಇದೆಲ್ಲದರ ನಂತರ ದೇವದೇವನ್ ಅವರು ಬಾಲಗಂಗಾಧರ ಅವರ ಮಂಡನೆಯನ್ನು ಸರಿಯಾದ ಕ್ರಮದಲ್ಲಿ ಅಲ್ಲಗಳೆಯುವ ಯತ್ನವನ್ನು ಮಾಡಿದ್ದಾರೇನೋ ನೋಡೋಣವೆಂದರೆ, ಅವರು ಅಲ್ಲೂ ಕೂಡ ಎಡವಿದ್ದಾರೆ. ಬಾಲಗಂಗಾಧರ ಅವರ ವಾದಮಂಡನೆಯ ವಿಧಾನದ ಸಕ್ಷಮತೆಯನ್ನು ಅಲ್ಲಗಳೆಯುವ ದೇವದೇವನ್ ಅವರು, ಬಾಲಗಂಗಾಧರ ಅವರು ತಮ್ಮ ವಾದಮಂಡನೆಗಾಗಿ, ತಮಗೆ ಸರಿಕಂಡ ನಾಕಾರು ಉದಾಹರಣೆಗಳನ್ನು ಮಾತ್ರ ಬಳಸಿಕೊಂಡಿದ್ದಾರೆ, ಆದರೆ ತಾವು ಅಂಥ ಕೆಲಸಕ್ಕೆ ಕೈಹಾಕದೆ, ಆಯಾಕಾಲದ ಅತ್ಯಂತ ಖ್ಯಾತವೂ ಪ್ರಾತಿನಿಧಿಕವೂ ಆದ ರಾಜಮೀಮಾಂಸೆಯ ಕೃತಿಗಳನ್ನು ಬಳಸಿಕೊಳ್ಳುವುದಾಗಿ ಘೋಷಿಸಿದ್ದಾರೆ (ಪು. ೩೬). ಹೀಗೆ ಹೇಳಿದ ಅವರು ನಂತರ ಮಾಡುವುದೇನು? ಪ್ರಾಚೀನ ಗ್ರೀಕ್ ಕಾಲದಿಂದ ಎನ್‌ಲೈಟನ್‌ಮೆಂಟ್‌ವರೆಗಿನ ಕಿರುಚರಿತ್ರೆಯ ಪುನರ್‌ನಿರೂಪಣೆ ಮಾಡುವ ಪ್ರಯತ್ನದಲ್ಲಿ ಆ ಕಾಲದ ಒಂದೆರಡು ಜನಪ್ರಿಯ ಕೃತಿಗಳನ್ನು ರೆಫರ್ ಮಾಡುತ್ತಲೇ, ಅದರ ಜತೆಗೆ ತಾವೇ ಇತ್ತೀಚೆಗೆ ಬರೆದ ಮತ್ತೊಂದು ಕೃತಿಯ ಪುಟಗಳನ್ನು ಪದೇಪದೇ ರೆಫರ್ ಮಾಡುತ್ತಾ ಹೋಗುತ್ತಾರೆ! ಅಂದರೆ ಏನರ್ಥ? ದೇವದೇವನ್ ಅವರನ್ನು ಹೊರತುಪಡಿಸಿ ಬೇರಾವ ಚಿಂತಕರೂ ಇತಿಹಾಸಕಾರರೂ ಈ ಕುರಿತು ಈ ಹಿಂದೆ ಏನನ್ನೂ ಮಾತನಾಡಿಲ್ಲ ಎಂದು ಅರ್ಥವೇ? ಅಥವಾ ದೇವದೇವನ್ ಅವರ ಕೃತಿಯು ಆ ಕಾಲದ ರಾಜಮೀಮಾಂಸೆಯ ಪ್ರಾತಿನಿಧಿಕ ಕೃತಿ ಎಂದು ಅರ್ಥವೇ? ನಿರ್ಣಯ ನನ್ನದಲ್ಲ.

ಸರಿ, ಇದನ್ನೂ ಪಕ್ಕಕ್ಕಿಟ್ಟು ದೇವದೇವನ್ ಅವರು ಏನು ಹೇಳಿದ್ದಾರೆ ನೋಡೋಣ ಎಂದರೆ, ಅಲ್ಲಿ ಅವರು ನಮಗೆಲ್ಲರಿಗೂ ಈಗಾಗಲೇ ಗೊತ್ತಿರುವ ಅದೇ ಚರ್ವಿತಚರ್ವಣವನ್ನು ಮತ್ತೊಮ್ಮೆ ಬಡಿಸುತ್ತಾರೆ; ಅದೇ ರಿಪಬ್ಲಿಕ್‌ನ ಸಿದ್ಧಾಂತ, ಅದೇ ನಗರನಿರ್ಮಾಣ-ಕಸುಬು-ಕಸುಬುದಾರರ ಸರಬರಾಜಿನ ಕೊಂಡಿ, ಅದೇ ಹಾಬ್ಸ್‌ನ ಲೆವಿಯೇಥಿಯನ್‌ನ ರಾಜನೀತಿ. ಇಲ್ಲಿ ಹೊಸ-ವಾದ ಎಲ್ಲಿದೆ? ಹೀಗಾಗಿ, ಭಾರತದ ಮಟ್ಟಿಗಿನ ಚರಿತ್ರೆ-ಗತಕಾಲದ ಸ್ಪಷ್ಟಗ್ರಹಿಕೆಯ ಸಂದಿಗ್ಧತೆಯ ಪ್ರಶ್ನೆಗೂ ಈ ರಾಜನೀತಿಯ ಸಿದ್ಧಾಂತಗಳಿಗೂ ಹೇಗೆ ಸಂಬಂಧ ಕಲ್ಪಿಸಬಹುದು ಎಂದು ನಿರೂಪಿಸುವಲ್ಲಿ ದೇವದೇವನ್ ವಿಫಲರಾಗುತ್ತಾರೆ.

ಇದಷ್ಟೇ ಅಲ್ಲ, ಅವರು ಮುಂದುವರಿಸುವ ಪ್ರತಿವಾದದ ನಿರೂಪಣೆಯಲ್ಲೇ ಇನ್ನಷ್ಟು ಗೊಂದಲ ಕಾಣುತ್ತದೆ. ಒಂದೆಡೆ ಅವರು, *‘ಅನ್ಯಾಯದ ಕಥನ ಹಿಂದೆಯೂ ನಡೆದಿತ್ತು, ಆದರೆ ರೂಸೋನ ಕಾಲದಿಂದೀಚೆಗೆ ಅದು ರಾಜಕಾರಣದ ಜತೆ ವಿಶಿಷ್ಟವಾಗಿ ಬೆಸೆದುಕೊಂಡಿತು... ಇಂದಿನ ಮಟ್ಟಿಗೆ ಅನ್ಯಾಯದ ಕಥನಗಳ ಮೂಲಕ ರಾಜಕಾರಣ ನಡೆಸುವುದು ಅಗತ್ಯವಷ್ಟೇ ಅಲ್ಲ, ಅನಿವಾರ್ಯವೂ ಹೌದು’* ಎನ್ನುತ್ತಾರೆ (ಪು. ೪೧-೪೨). ಆದರೆ *‘ಭಾರತೀಯರಿಗೆ ಇಂದು ಚರಿತ್ರೆ ಬೇಕೆ ಅಥವಾ ಗತಕಾಲ ಬೇಕೆ?’* ಎಂದು ಬಾಲಗಂಗಾಧರ ಅವರು ಕೇಳುವ ಪ್ರಶ್ನೆಯಲ್ಲಿ ‘ಅನ್ಯಾಯದ ಕಥನದಿಂದ ರಾಜಕಾರಣ ಮಾಡುವ’ ಮನೋಭಾವವು ಕಾಣುತ್ತದೆ, ಇದು ಸಾಧುವಲ್ಲ ಎಂದು ಬಾಲಗಂಗಾಧರ ಅವರನ್ನು ದೇವದೇವನ್ ಜರಿಯುತ್ತಾರೆ. ಅನ್ಯಾಯದ ಕಥನದ ಮೂಲಕ ರಾಜಕಾರಣ ಮಾಡುವುದು ಚಿರಕಾಲ ಸಾಧ್ಯವಿಲ್ಲ ಎಂದೂ ಅವರು ಹೇಳುತ್ತಾರೆ. ದೇವದೇವನ್ ಅವರು ಯಾವ ನಿಲುವಿನ ಪರವಾಗಿದ್ದಾರೆ ಎಂದು ಸ್ಪಷ್ಟವಾಗುವುದಿಲ್ಲ.

ತಮ್ಮ ಗೊಂದಲಮಯ ವಾದವನ್ನು ಹೀಗೇ ಮುಂದುವರಿಸುವ ದೇವದೇವನ್ ಅವರು, ಭಿನ್ನವಾದ ರಾಜಕಾರಣದ ಬಗ್ಗೆ ತ್ವರಿತವಾಗಿ ಚಿಂತನೆ ನಡೆಯಬೇಕಿದೆ ಎಂಬ ಆಶಯವನ್ನು ಮುಂದಿಟ್ಟು ತಮ್ಮ ಬರಹವನ್ನು ಕೊನೆಗೊಳಿಸುತ್ತಾರೆ. ಇದು ಅವರ ಪೊಳ್ಳು ಚಿಂತನೆಯನ್ನಷ್ಟೇ ತೋರಿಸುತ್ತದೆ. ಯಾಕೆಂದರೆ ಬಾಲಗಂಗಾಧರ ಅವರು ತಮ್ಮ ಲೇಖನದಲ್ಲಿ ಕೇಳಿರುವ *‘ಚರಿತ್ರೆ ಬೇಕೋ ಅಥವಾ ಗತಕಾಲ ಬೇಕೋ’* ಎಂಬ ಪ್ರಶ್ನೆಯು, ಮತ್ತು ಅಂಥ ಪ್ರಶ್ನೆಗಳು ಭಿನ್ನವಾದ ರಾಜಕಾರಣಕ್ಕೆ ಬೇಕಾದ ಮೊದಲ ಚಿಂತನೆ, ಆ ದಿಕ್ಕಿನಲ್ಲಿ ಹೋಗಲು ಇವು ಮೊದಲ ಹೆಜ್ಜೆಗಳು ಎಂದು ಗುರುತಿಸಲು ದೇವದೇವನ್ ಅವರು ಸೋಲುತ್ತಾರೆ.

ಅಷ್ಟೇ ಅಲ್ಲ, ಅಂಥದೊಂದು ಚಿಂತನೆಗೆ ಬೇಕಾದ ಸೂಕ್ತವಾದ ಮನಸ್ಥಿತಿಯ ನಿರ್ಮಾಣಕ್ಕೆ ಬೇಕಾದುದೇನು ಎಂಬುದನ್ನು ಕೂಡ ಬಹುಶಃ ದೇವದೇವನ್ ಅವರು ಕೇಳಿಕೊಂಡಿಲ್ಲ ಅನಿಸುತ್ತಿದೆ. ಯಾಕೆಂದರೆ ಅವರಿಂದ ಬಂದ ಇಂಥ ಕೇವಲ ‘ತುಟಿಯಂಚಿನ ಮಾತು’ಗಳಿಂದ ಸೂಕ್ತವಾದ ಮನಸ್ಥಿತಿಗಳು ನಿರ್ಮಾಣವಾಗುವುದಿಲ್ಲ ಎನ್ನುವುದು ಅವರಿಗೆ ಗೊತ್ತಿರಲಿ. ಅಂಥ ಪರ್ಯಾಯ ಚಿಂತನೆಯ ಎಳ್ಳಷ್ಟು ಸೂಚನೆಯೂ ಅವರ ಬರವಣಿಗೆಯಲ್ಲಿ ಕಾಣುತ್ತಿಲ್ಲ.

# ಜ್ಞಾನದ ಪ್ರಶ್ನೆಗಳು

ಸುಷುಮ್ನಾ ಕಣ್ಣನ್

ಎಸ್. ಎನ್. ಬಾಲಗಂಗಾಧರ ಅವರ ಲೇಖನಕ್ಕೆ ಕಳೆದ ಮಾತುಕತೆ ಸಂಚಿಕೆಯಲ್ಲಿ ಮನು ದೇವದೇವನ್ ಅವರು ಪ್ರತಿಕ್ರಿಯೆ ನೀಡಿದ್ದರು. ಮನು ಅವರ ಪ್ರತಿಕ್ರಿಯೆಯು ಹಲವಾರು ವಿಷಯಗಳನ್ನು ಇನ್ನೂ ಗೊಂದಲಮಯಗೊಳಿಸಿವೆ ಎಂಬುದು ನನ್ನ ಅನಿಸಿಕೆ. ಈ ಕುರಿತು ನಾನು ಇಲ್ಲಿ ಹಂಚಿಕೊಳ್ಳಬಯಸುತ್ತೇನೆ.

ಮನು ತಮ್ಮ ಪ್ರತಿಕ್ರಿಯೆಯನ್ನು ಕನಿಷ್ಠ ಎರಡು ರೀತಿಯಲ್ಲಿ ರಚಿಸಿದ್ದಾರೆ: ಮೊದಲನೆಯದಾಗಿ ಪ್ರೊ. ಬಾಲು ಅವರ ಲೇಖನದಲ್ಲಿ ಅವರಿಗೆ ಕಂಡ ಸಮಸ್ಯೆಗಳನ್ನು ಟೀಕಿಸಿದ್ದಾರೆ, ಮತ್ತು ಎರಡನೆಯದಾಗಿ ಏಕೆ ಪ್ರೊ. ಬಾಲು ಅವರು ಇಂತಹ ವಿಷಯಗಳನ್ನು ಹೇಳಿದ್ದಾರೆ ಎಂಬುದರ ಬಗ್ಗೆ ಊಹೆ ಮಾಡುತ್ತಿದ್ದಾರೆ. ಈ ಎರಡನೆಯದನ್ನು ಅವರು ಮಾಡಿರುವ ರೀತಿ ಸ್ವಲ್ಪ ಅಸಭ್ಯವಾಗಿಯೇ ಇದೆ. ಲೇಖಕರ ಮನಸ್ಥಿತಿಯನ್ನು ಊಹಿಸಿವುದು, ಹಾಲುಹಸುಳೆ ಎಂದು ಹೇಳುವುದು, ಗೂಢೋದ್ದೇಶ ವೇನು ಎಂದು ಕೇಳುವುದು, ಇತ್ಯಾದಿ. ಇವೆಲ್ಲದಕ್ಕೆ ನಾನು ಪ್ರತಿಕ್ರಿಯಿಸಲು ಬಯಸುವುದಿಲ್ಲ. ಆದರೆ ಬೌದ್ಧಿಕ ಪ್ರಶ್ನೆಗಳನ್ನು ಮಾತ್ರ ಎತ್ತಿಕೊಳ್ಳುತ್ತೇನೆ.

ಮನು ಹೇಳುತ್ತಾರೆ, ಪ್ರೊ. ಬಾಲು ಕೇಳುವ ‘ಚರಿತ್ರೆ ಬೇಕೆ, ಗತಕಾಲ ಬೇಕೆ?’ ಎಂಬ ಪ್ರಶ್ನೆಯು ಅನೇಕರಿಗೆ ಪ್ರಶ್ನೆಯಾಗಿಯೇ ತೋರುತ್ತಿಲ್ಲ ಎಂದು. ಈ ಅನೇಕರು ಯಾರು ಎಂಬುದನ್ನೂ ಅವರು ಸ್ಪಷ್ಟವಾಗಿ ಹೇಳಿದ್ದರೆ ಚೆನ್ನಾಗಿರುತ್ತಿತ್ತು. ನನಗೆ ತಿಳಿದ ಹಾಗೆ ಚರಿತ್ರೆ ಎಂಬ ಅಧ್ಯಯನ ಕ್ಷೇತ್ರದಲ್ಲಿ ಇತ್ತೀಚಿಗೆ ಹಲವು ಮೂಲಭೂತ ಪ್ರಶ್ನೆಗಳನ್ನು ಎತ್ತಲಾಗಿದೆ. ಉದಾಹರಣೆಗೆ, ಭಾರತೀಯರು ಏಕೆ ಚರಿತ್ರೆ ಬರೆಯುತ್ತಿರಲಿಲ್ಲ? ಬ್ರಿಟಿಷರು ಬರೆದ ಭಾರತೀಯ ಚರಿತ್ರೆಗೂ ಮುನ್ನ ನಮ್ಮಲ್ಲಿ ಚರಿತ್ರೆ ಎಂಬುದನ್ನು ಹೋಲುವ ಬರವಣಿಗೆಗಳು ಇವೆಯೇ? ಇದ್ದಲ್ಲಿ ಅವು ಯಾವುವು? ಅವು ಭಾರತದ ಸಂಸ್ಕೃತಿಯಿಂದ ರೂಪುಗೊಂಡಿರಬಹುದೇ? ಅವನ್ನು ನಾವು ಗುರುತಿಸಲು ಆಧಾರಗಳೇನು? ಇತ್ಯಾದಿ. ಆದ್ದರಿಂದ ಮನು ಅವರು ಈ ಪ್ರಶ್ನೆಯೇ ಸರಿಯಲ್ಲ

ಎಂದು ಹೇಳುವುದಾದಲ್ಲಿ ಭಾರತದಲ್ಲಿ ಚರಿತ್ರೆ ಬರೆಯುತ್ತಿರುವ ಮತ್ತು ಅದರ ಸಮಸ್ಯೆಗಳನ್ನು ಅರಿತ ಅನೇಕರಿಗೆ ದೀರ್ಘವಾದ ಉತ್ತರವನ್ನು ಕೊಡ ಬೇಕಾಗುತ್ತದೆ.

ಪ್ರತ್ಯೇಕವಾಗಿ ಮಾತನಾಡುವುದಾದರೆ, ಎರಡು ಮುಖ್ಯ ಲೇಖನಗಳನ್ನು ಮನು ಅವರು ಗಮನಿಸಬೇಕಾಗುತ್ತದೆ. ಒಂದು, ಆಶೀಶ್ ನಂದಿ ಅವರ 'ಹಿಸ್ಟರಿ'ಸ್ ಫರ್ಗಾಟ್ಟನ್ ಡಬಲ್ಸ್' ಮತ್ತು ಇನ್ನೊಂದು ದೀಪೇಶ್ ಚಕ್ರಬರ್ತಿ ಅವರ 'ಚರಿತ್ರೆ ಎಂಬ ಟೀಕೆ, ಚರಿತ್ರೆಯ ಟೀಕೆಗಳು' ಎಂಬ ಲೇಖನವು. ನಂದಿ ಅವರು ತಮ್ಮ ಲೇಖನದಲ್ಲಿ, ಚರಿತ್ರೆಯು ಗತಕಾಲವನ್ನು ರಚಿಸುವ ಒಂದು ಪ್ರಧಾನ ವಿಧಾನ ವಾಗಿದೆಯೇ ಹೊರತು, ಸಾರ್ವತ್ರಿಕ ಮತ್ತು ಏಕಮಾತ್ರ ವಿಧಾನವಂತೂ ಖಂಡಿತವಾಗಿಯೂ ಅಲ್ಲ ಎಂದು ವಾದಿಸಿದ್ದಾರೆ. ಚರಿತ್ರೆಯೇ ಪ್ರಧಾನ ಎಂದು ಭಾವಿಸುವುದು ಆಧುನಿಕ ರಾಷ್ಟ್ರ-ರಾಜಕೀಯ, ಬೇಕನ್‌ನ ಸೈಂಟಿಫಿಕ್ ರಾಶನಾಲಿಟಿ ಮತ್ತಿತರ ಕಲ್ಪನೆಗಳನ್ನು ಆಧರಿಸಿದ್ದು ಎಂದೂ ಹೇಳುತ್ತಾರೆ. ಆಧುನಿಕವಲ್ಲದ ಪ್ರತಿಯೊಂದು ಸಂಸ್ಕೃತಿಗೂ ಚಾರಿತ್ರಿಕ ಪ್ರಜ್ಞೆಯನ್ನು ತರಲಾದಾಗ ಆಗುವ ಆಘಾತಗಳನ್ನು ಈ ಲೇಖನವು ತೋರಿಸುತ್ತದೆ. ದೀಪೇಶ್ ಚಕ್ರಬರ್ತಿ ಅವರು ಕೂಡ ತಮ್ಮ ಲೇಖನದಲ್ಲಿ 'ಕಳೆದ ಕೆಲವೇ ವರ್ಷಗಳ ಹಿಂದೆ ಚರಿತ್ರೆಯೇ ಇಲ್ಲದ ಸಂಸ್ಕೃತಿಗಳು ಯಾಕೆ ಇಂದು ಚರಿತ್ರೆಯನ್ನು ಹೊರತರಲು ಸಾಧ್ಯವೇ ಇಲ್ಲವೆಂಬಂತೆ ಆಡತೊಡಗಿವೆ' ಎಂದು ಕೇಳುತ್ತಾರೆ. ಈ ಎಲ್ಲ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವಂತಹ ವಿಶ್ಲೇಷಣೆಯನ್ನು ಪ್ರೊ. ಬಾಲು ಅವರು ತಮ್ಮ ಲೇಖನದಲ್ಲಿ ನೀಡಿದ್ದಾರೆ. ಅವರು ಯೂರೋಪಿನ ಕ್ರಿಶ್ಚಿಯಾನಿಟಿ ಮತ್ತು ಅದಕ್ಕೆ ಸಂಬಂಧಪಟ್ಟ ಕೆಲವು ಮುಖ್ಯ ತಿರುವುಗಳು, ಇಂದು ನಾವು ಚರಿತ್ರೆ ಬರೆಯುವಾಗ 'ಸತ್ಯ'ದ ಬಗ್ಗೆ ಕೇಳುವ ಪ್ರಶ್ನೆಗಳನ್ನು ಕೇಳುವಂತೆ ಮಾಡಿವೆ ಎಂದು ಹೇಳುತ್ತಾರೆ. ಈ ವಿಶ್ಲೇಷಣೆಯು ನಂದಿ ಅವರ ಲೇಖನದಲ್ಲಿ ದೊರೆಯುವುದಿಲ್ಲ, ಮತ್ತು ನಿಜವಾಗಿಯೂ ಹೊಸದಾದಂತಹದು. ಆದ್ದರಿಂದ ಮನು ಗತಕಾಲಕ್ಕೂ ಚರಿತ್ರೆಗೂ ಬರೀ ವಿನ್ಯಾಸದ ವ್ಯತ್ಯಾಸ ಎಂದು ಹೇಳುವುದಾದಲ್ಲಿ, ಗತಕಾಲವನ್ನು ಯಾವುದೇ ವಿನ್ಯಾಸಕ್ಕೆ ತರದೇ ಇರಿಸಿಕೊಳ್ಳುವ ಸಂಸ್ಕೃತಿಗಳ ಇರುವಿಕೆಯನ್ನು ಅವರು ಒಪ್ಪಿಕೊಳ್ಳುತ್ತಾರೆಯೇ ಅಥವಾ ಹೇಗೆ ಉಲ್ಲೇಖಿಸುತ್ತಾರೆ ಎಂಬುದು ನಾನು ಕೇಳುವ ಪ್ರಶ್ನೆ. ಅಲ್ಲದೇ ಒಂದು ಕಾಲದ ಬಗ್ಗೆ ಭಿನ್ನ ವಿವರಣೆಗಳನ್ನು ಚರಿತ್ರಕಾರರು ಕೊಟ್ಟಿರುವ ಸಂದರ್ಭದಲ್ಲಿ ಹುಟ್ಟುವ ಅನೇಕ ಪ್ರಶ್ನೆಗಳನ್ನು ಮನು ಹೇಗೆ ಎದುರಿಸುತ್ತಾರೆ ಎಂಬುದರ ಬಗ್ಗೆಯೂ ನನಗೆ ಕುತೂಹಲ ಹುಟ್ಟಿದೆ.

ಸೋಕ್ರಾಟಿಸ್‌ನಿಂದ ಸಮಕಾಲೀನ ಸಮಯದವರೆಗೆ ಮನು ಅನೇಕ ಚಿಂತಕರನ್ನು ಮತ್ತು ಚಾರಿತ್ರಿಕ ಘಟ್ಟಗಳನ್ನು ಎತ್ತಿ ತೋರಿಸಿ ಪ್ರೊ. ಬಾಲು ಅವರು



'ಎನ್ಲೈಟನ್ಮೆಂಟನ್ನು ಜರಿಯುತ್ತಿದ್ದರೂ ಅದರ ಮನೋಧರ್ಮದಿಂದ ಮುಕ್ತರಾಗಿಲ್ಲ' ಎಂದು ಹೇಳಿದ್ದಾರೆ. ಆದರೆ, ಅವರು ತಮ್ಮ ವಾದಕ್ಕೆ ಬಳಸುವ ಚಿಂತಕರು ಅಥವಾ ಚಿಂತನೆಗಳಾವುವೂ ಭಾರತದಿಂದ ಹೊರಬಂದವಲ್ಲ. ಈ ಚಿಂತನೆಗಳೇ ಅವರಿಗೆ ಭಾರತದಲ್ಲಿ ದೊರಕಲಿಲ್ಲವಾದರೆ ಅದು ಏಕೆ ಎಂಬ ಪ್ರಶ್ನೆ ಹುಟ್ಟುತ್ತದೆ. ಸರಳವಾಗಿ ಹೇಳುವುದಾದರೆ ಭಾರತದ ಗತಕಾಲದಲ್ಲಿ ಶಾನ್ ಬೋದಾ ಅಥವಾ ಹಾಬ್ಸ್ ಇರಲಿಲ್ಲ. ಮತ್ತು ಭಾರತ ಆ ರೀತಿಯ ಚಿಂತನೆಯನ್ನಾಗಲೀ ಆ ರೀತಿಯ ಚಿಂತಕರನ್ನಾಗಲೀ ಸೃಷ್ಟಿಸಲಿಲ್ಲ. ಹೀಗಿರುವಾಗ ನಮ್ಮ ಗತಕಾಲದ ಬಗ್ಗೆ ಪ್ರೊ. ಬಾಲು ಕೇಳುತ್ತಿರುವ ಪ್ರಶ್ನೆಗಳು ಹಾಗೂ ನೀಡುತ್ತಿರುವ ಉತ್ತರಗಳು ಅತಿ ಸೂಕ್ತ ಎಂದು ನನಗನಿಸುತ್ತದೆ. ಪ್ರೊ. ಬಾಲು ಚಾರಿತ್ರಿಕ ಪ್ರಜ್ಞೆಗೆ ದೊರೆತಿರುವ ಹಲವಾರು ರೀತಿಯ ಪ್ರತಿಕ್ರಿಯೆಗಳನ್ನು ತಮ್ಮ ಲೇಖನದಲ್ಲಿ ವಿವರಿಸುತ್ತಾರೆ, ಅಲ್ಲದೆ ಭಾರತದಲ್ಲಿ ನಡೆದ ಚಿಂತನೆಗಳ ಬಗ್ಗೆಯೂ ತಮ್ಮ ವಾದವನ್ನು ಮಂಡಿಸುತ್ತಾರೆ. ಈ ವಾದಗಳು ಏಕೆ ಸಾಲದು ಎಂದು ಮನು ಅವರು ವಾದಿಸಬೇಕಾದರೆ ಭಾರತದಲ್ಲಿ ಯಾವ ರೀತಿಯ ಚಿಂತನೆ ಇದ್ದಿತ್ತೆಂಬುದನ್ನು ಅವರು ನಮಗೆ ಹೇಳಬೇಕಾಗುತ್ತದೆ. ಅದು ಬಿಟ್ಟು ಊಟ-ಬಟ್ಟೆಯ ಸಮಸ್ಯೆಯನ್ನು ಏಕೆ ಪ್ರೊ. ಬಾಲು ತೆಗೆದುಕೊಂಡಿಲ್ಲ ಎಂದು ಕೇಳುವುದು ಅಪ್ರಸ್ತುತ.

ಏಕೆ ನಾವು ಯೂರೋಪಿಯನ್ ಚಿಂತಕರನ್ನು ಬಳಸಿಕೊಂಡು ಭಾರತವನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನದಲ್ಲಿ ತೊಡಗಿದ್ದೇವೆ, ಎಂದು ದೀಪೇಶ್ ಚಕ್ರಬರ್ತಿ ತಮ್ಮ 'ಪೋಸ್ಟ್ ಕಲೊನಿಯಾಲಿಟಿ ಆನ್ಡ್ ದ ಆರ್ಟಿಫೈಸ್ ಆಫ್ ಹಿಸ್ಟರಿ' ಎಂಬ ಇನ್ನೊಂದು ಲೇಖನದಲ್ಲಿ ಕೇಳುತ್ತಾರೆ. ಇಲ್ಲಿ ಅವರು ಹೆಗೆಲ್ ಭಾರತಕ್ಕೆ ಬಂದೇ ಇರಲಿಲ್ಲ ಆದರೂ ಅವನ ಚಿಂತನೆಯನ್ನು ಆಧರಿಸಿ ನಾವು ಏಕೆ ಭಾರತದ ಇಂದಿನ ಆಗುಹೋಗುಗಳನ್ನು ವಿವರಿಸುತ್ತೇವೆ ಎಂದು ಕೇಳುತ್ತಾರೆ. ಹೆಗೆಲ್ ಭಗವದ್ಗೀತೆಯ ಬಗ್ಗೆ ಬರೆದ ವಿಷಯಗಳನ್ನು ನೋಡಿದರಂತೂ ಅವನು ಓರಿಯಂಟಲಿಸಮ್‌ನ ಧಾಟಿಯ ಚಿಂತಕ ಎಂದು ಸ್ಪಷ್ಟವಾಗುತ್ತದೆ. ಆದ್ದರಿಂದ ಮನು ಅವರು ಹಾಬ್ಸ್ ಮತ್ತಿತರರು ಭಾರತದ ಬಗ್ಗೆ ಮಾತಾಡುತ್ತಿದ್ದರು ಎಂಬಂತೆ ವರ್ತಿಸಿದರೆ, ಅದು ಪ್ರಶ್ನಾರ್ಹ. ಅಲ್ಲದೇ ಮನು ಅವರ ಸೋಕ್ರಾಟಿಸ್‌ನಿಂದ ಹಾಬ್ಸ್‌ವರೆಗಿನ ಉದಾಹರಣೆಗಳು ಭಾರತದ ಗತಕಾಲದಿಂದ ಬಾರದಿರುವುದರಿಂದ, ಭಾರತದ ಗತಕಾಲದಲ್ಲಿ ಏನು ಸಂಘಟಿಸಿರಬಹುದು ಎಂಬ ಪ್ರಶ್ನೆ ಹಾಗೆಯೇ ಉಳಿಯುತ್ತದೆ.

ಭಾಷೆ ಮತ್ತು ಸತ್ಯ, ಹಾಗೂ ನಮ್ಮ ಗತಕಾಲದಲ್ಲಿರುವ ಕಥೆಗಳ ಬಗ್ಗೆ ಪ್ರೊ. ಬಾಲು ನೀಡಿರುವ ವಿವರಣೆಯು, ಎನ್ಲೈಟನ್ಮೆಂಟ್‌ನ ಬಳುವಳಿಯಾದ ಅನೇಕ ಪರಿಕಲ್ಪನೆಗಳು ಯಾವ ಚರಿತ್ರೆಯ ಭಾಗವಾಗಿ ಇವೆ ಎಂದು ತಿಳಿಸಿ, ಹಲವಾರು

ವಿಷಯಗಳನ್ನು ಸ್ಪಷ್ಟಪಡಿಸುತ್ತದೆ ಎಂದು ನನಗನ್ನಿಸುತ್ತದೆ. ಮನು ಅವರು ಅಲ್ಲಲ್ಲಿ ಕೊಡುವ ಕೆಲವು ಉದಾಹರಣೆಗಳನ್ನು ನೋಡಿದರೆ, ಅವರು ಪ್ರೊ. ಬಾಲು ಅವರ ಇತರ ಒಂದೆರಡು ಲೇಖನಗಳನ್ನೂ ಓದಿರುವಂತೆ ಕಾಣುತ್ತದೆ. ಆದರೆ ಜ್ಞಾನ ಎಂದರೆ ಅರಿವು ಎಂಬ ತಮ್ಮ ಅಭಿಪ್ರಾಯವನ್ನು ಹೇಳುತ್ತಾ ಮನು ಪ್ರೊ. ಬಾಲು ಅವರ ಸಂಶೋಧನೆಯ ಬಗ್ಗೆ ತಪ್ಪು ಕಲ್ಪನೆಗಳನ್ನಿಟ್ಟುಕೊಂಡಿರುವುದು ಕಂಡುಬರುತ್ತದೆ. ಪ್ರೊ. ಬಾಲು ಅವರ ಲೇಖನಗಳನ್ನು ಓದಿದಾಗ ಸ್ಪಷ್ಟವಾಗುವುದೇನೆಂದರೆ, ಅವರ ಪ್ರಶ್ನೆಗಳು ಮತ್ತು ತತ್ವಗಳು, ಜ್ಞಾನದ ಬಗ್ಗೆ ಯಾವುದೋ ಪೂರ್ವಸಿದ್ಧ ತತ್ವದಿಂದ ಹೊರಟಿದೆ ಮತ್ತು ನಾವು ಅದನ್ನು ತಿಳಿಯಬೇಕು ಎಂದು ಭಾವಿಸುವ ಅಗತ್ಯವಿಲ್ಲ ಎಂದು. ಬದಲಾಗಿ ಅವರು ಕೇಳುವ ಪ್ರಶ್ನೆಗಳು, ಅವುಗಳಿಗೆ ಉತ್ತರ ಸಿಗದಂತಹ ವಿಷಯ, ಉತ್ತರ ಸಿಗಲಾಗದಂತಹ ಸಂದರ್ಭ, ಇವೆಲ್ಲವನ್ನೂ ಗಮನಿಸಿದರೆ ಸಾಕು. ಉತ್ತರಗಳಿಲ್ಲದ ಸಂದರ್ಭಗಳ ಕುರಿತು ಸಂಶೋಧನೆ ನಡೆಸಿ ಆನಂತರ ಪ್ರೊ. ಬಾಲು ಅವರು ಜ್ಞಾನದ ಬಗ್ಗೆ ಒಂದಷ್ಟು ವಿಷಯಗಳನ್ನು ನಮಗೆ ಹೇಳುತ್ತಾರೆ. ಆದರೆ ಮನು ಅವರ ಪ್ರತಿಕ್ರಿಯೆಯಲ್ಲಿ ಈ ಎಲ್ಲದರ ಮೊದಲು-ಕೊನೆಗಳೆಲ್ಲವೂ ಗೊಂದಲಮಯ ಗೊಂಡಿವೆ. ಯಾವುದು ಪ್ರೊ. ಬಾಲು ಅವರ ನಿರ್ಣಯ, ಯಾವುದು ಅವರ ವಾದದ ಸರಣಿ ಎಂಬುದನ್ನು ಸರಿಯಾಗಿ ಅರಿಯದೆ, 'ರೆಫರೆನ್ಸ್' ಇತ್ಯಾದಿ ತಾತ್ವಿಕ ಸಮಸ್ಯೆಗಳ ಬಗ್ಗೆ ಮನು ಅವರು ಅವಸರದ ಮಾತುಗಳನ್ನಾಡಿದ್ದಾರೆ. ಪ್ರೊ. ಬಾಲು ಅವರು ಎತ್ತುತ್ತಿರುವ ಪ್ರಶ್ನೆಗಳು ಜ್ಞಾನದ ಬಗ್ಗೆ ಯಾವುದೇ ಕಲ್ಪನೆಗಳನ್ನು ಹೊಂದಿದ್ದವರೂ ಗಮನಿಸಬೇಕಾದಂತಹವು ಎಂದು ನನಗನಿಸುತ್ತದೆ.


ದಿ| ಕೆ.ವಿ. ಸುಬ್ಬಣ್ಣ ಅವರ
ಆಯ್ದ ಬರಹಗಳ ಇಂಗ್ಲಿಷ್ ಅನುವಾದಗಳನ್ನೊಳಗೊಂಡ
ನಾಲ್ಕುನೂರು ಪುಟಗಳಿಗೂ ಮಿಕ್ಕ ಪುಸ್ತಕ
ಸದ್ಯವೇ ಅಕ್ಷರ ಪ್ರಕಾಶನದಿಂದ ಪ್ರಕಟಗೊಳ್ಳಲಿದ್ದು ವಿವರಗಳು ಹೀಗಿವೆ:

**ಕಮ್ಯೂನಿಟಿ ಎಂಡ್ ಕಲ್ಚರ್**

ಆಯ್ದ ಲೇಖನಗಳು, ಸಂದರ್ಶನ ಮತ್ತು ಅನುಬಂಧಗಳೊಂದಿಗೆ
ಸಂಪಾದಕರು: ಎನ್. ಮನು ಚಕ್ರವರ್ತಿ


# ನಿರ್ವಸಾಹತೀಕರಣದ ಕಾರ್ಯಕ್ರಮ ಮತ್ತು ಜ್ಞಾನದ ಮಿತಿಗಳು

ಎನ್. ಮನು ಚಕ್ರವರ್ತಿ

ವಸಾಹತೀಕರಣಗೊಂಡ ಎಲ್ಲ ಸಮಾಜಗಳು ವಸಾಹತುಶಾಹಿಯಿಂದ ಎಸಗಲ್ಪಟ್ಟ ಮಾನಸಿಕ ಹಿಂಸೆ, ದೈಹಿಕ ಕ್ರೌರ್ಯ ಮತು ಸಾಂಸ್ಕೃತಿಕ ವಿನಾಶಗಳನ್ನು ಭೌತಿಕ ನೆಲೆಯಲ್ಲಿ ಮಾತ್ರ ಎದುರುಗೊಳ್ಳುವುದಿಲ್ಲ. ಅದಕ್ಕೂ ಮುಖ್ಯವಾಗಿ, ಆ ಎಲ್ಲ ತಲ್ಲಣಗಳನ್ನು ನೆನಪಾಗಿ, ಅಸ್ತಿತ್ವದ ಅನುಭವವಾಗಿ, ಇತಿಹಾಸವಾಗಿ ಮತ್ತು ಕಲ್ಪನೆಯಾಗಿ ಕೂಡ ಹೊತ್ತುಕೊಳ್ಳಬೇಕಾಗುತ್ತದೆ. ವಸಾಹತುಶಾಹಿಯ ಕಾಲದಿಂದ ವಸಾಹತುಶಾಹಿಯೋತ್ತರ ಎಂದು ಕರೆಯಲಾಗುವ ಕಾಲದವರೆಗೆ ಆ ಹೊರೆ ಜೀವಂತವಾಗಿ ಉಳಿಯುತ್ತದೆ. ಅಂದರೆ, ಒಂದು 'ಮುಕ್ತವಾದ, ಸ್ವತಂತ್ರವಾದ' ವಸಾಹತುಶಾಹಿಯೋತ್ತರ ಸಮಾಜ/ರಾಷ್ಟ್ರದಲ್ಲೂ ಸಹ ಆ ಅನುಭವ ಎಂದೆಂದಿಗೂ ಸ್ಮೃತಿಯಲ್ಲಿರುತ್ತದೆ. ಘಾಸಿಗೊಂಡವರು ಮತ್ತು ಪ್ರತ್ಯಕ್ಷವಾಗಿ ಹಿಂಸೆ/ಕ್ರೌರ್ಯವನ್ನು ಕಂಡವರಿಂದ ಅದು ಜೀವಂತವಾಗಿರುತ್ತದೆ. ಹಾಗೆ ನೋಡಿದರೆ ಮುಂದಿನ ಪೀಳಿಗೆಯವರಿಗೂ ಅನೇಕ ರೀತಿಯ ಕಥನಗಳಿಂದ ಮತ್ತು ಇತಿಹಾಸದ ಅರಿವಿನ ಮೂಲಕ ಐತಿಹಾಸಿಕ ಗತಕಾಲವು ಅನುಭವಕ್ಕೆ ಬರುತ್ತದೆ. ಹಾಗಾಗಿ ವಸಾಹತು ಶಾಹಿಯಿಂದ ಎರಡು ರೀತಿಯ ಹೊರೆಗಳು ಬರುತ್ತವೆ – ಬದುಕಿದ ಅನುಭವ, ಮತ್ತು ಅದರ ಮೂಲಕ ಕಲ್ಪಿಸಿದ, ರಚಿಸಿದ ಅನುಭವ. ಹೀಗೆ ಭೂತಕ್ಕೆ ಸೇರಿದ ಐತಿಹಾಸಿಕ ಸಂಗತಿಗಳು ಒಂದರೊಳಗೆ ಇನ್ನೊಂದು ಬೆಸೆದುಕೊಂಡು ವರ್ತಮಾನ ಮತ್ತು ಭವಿಷ್ಯದಲ್ಲಿ ಏನೇನೋ ರೀತಿಗಳಲ್ಲಿ ರೂಪಾಂತರಗೊಂಡು ಯಾವ ಯಾವ ರೀತಿಯಲ್ಲಿಯೋ ಪ್ರಕಟಗೊಳ್ಳುತ್ತಲೇ ಇರುತ್ತವೆ. ಒಮ್ಮೊಮ್ಮೆ ಇತಿಹಾಸ ಕೇವಲ ಭೂತದ ಸಂಗತಿಯಾಗಿ ಕಂಡರೂ ಭೂತವನ್ನು ವರ್ತಮಾನದಲ್ಲೇ ಮತ್ತೊಮ್ಮೆ ಅನುಭವಿಸಿದಾಗ ಇತಿಹಾಸ ಪುನಃ ಸೃಷ್ಟಿಯಾದ ಅನುಭವವಾಗುತ್ತದೆ. ಯಾವುದು ಭೂತ ಯಾವುದು ಇತಿಹಾಸ ಯಾವುದು ವರ್ತಮಾನ ಎಂಬ ತೊಳಲಾಟ

ನಮ್ಮದಾಗುತ್ತದೆ. ಈ ಅರ್ಥದಲ್ಲಿ, ಐತಿಹಾಸಿಕ ಗತಕಾಲವನ್ನು ಯಾವತ್ತಿಗೂ ಅಳಿಸಲು ಸಾಧ್ಯವಿಲ್ಲ. ಆದ್ದರಿಂದ, 'ಇತಿಹಾಸ' ಮತ್ತು 'ಗತಕಾಲ'ಗಳ ನಡುವೆ ಅನೇಕರು ಮಾಡುವ ವ್ಯತ್ಯಾಸ ಊರ್ಜಿತವಲ್ಲದ್ದು. 'ಇತಿಹಾಸ' ಮತ್ತು 'ಗತಕಾಲ'ಗಳ ಬಗ್ಗೆ ಅವೆರಡೂ ಭಿನ್ನವಾದವು, ಪರಸ್ಪರ ವರ್ಜಿಸುವಂತಹ (mutually exclusive) ಪ್ರಕಾರಗಳು/ಅನುಭವಗಳು, ಅವೆರಡೂ ದ್ವಿಮುಖ ವೈರುಧ್ಯ ಹೊಂದಿರುವಂತಹವು (binary opposites) ಮತ್ತು ಅವು ಎರಡು ಬೇರೆಯಾದ ವ್ಯವಸ್ಥೆಗಳು ಎಂದು ವಾದಿಸುವವರು ಏನನ್ನು ಹೇಳಲು ಹೊರಟಿದ್ದಾರೆಂದು ಅರ್ಥವಾಗುವುದಿಲ್ಲ. ಎರಡರ ಬಗ್ಗೆಯೂ ನಾವು ಏಕಕಾಲದಲ್ಲಿ ಮಾತನಾಡುವುದಿಲ್ಲವೆ? ನಂತರದ ಪೀಳಿಗೆಗಳು 'ಇತಿಹಾಸ' ಮತ್ತು 'ಗತಕಾಲ'ದ ನಡುವೆ ನಿಜವಾಗಲೂ ಒಂದನ್ನು ಆಯ್ಕೆ ಮಾಡಲು ಸಾಧ್ಯವೆ? ಅವೆರಡೂ ಭಿನ್ನವಾದ ವಿಷಯಗಳು, ಆದ್ದರಿಂದ ಅವುಗಳ ನಡುವೆ ಒಂದನ್ನು ಆರಿಸಬೇಕೆಂದು ಹೇಳಲು ಸಾಧ್ಯವೆ? ಅಥವಾ, ಅವು ಭಿನ್ನ ವಿಷಯಗಳಾದರೂ ಒಟ್ಟಿಗೆ ಪರಿಗಣಿಸಲ್ಪಡ ಬೇಕೆಂದು ಹೇಳಲು ಸಾಧ್ಯವೆ? ನಿಜವಾದ ಸಂಗತಿಯೇನೆಂದರೆ ಅವೆರಡೂ 'ಜ್ಞಾನ'ವಾಗಿ ಮತ್ತು 'ಅನುಭವ'ವಾಗಿ ಒಟ್ಟಿಗೆ ಬರುತ್ತವೆ ಮತ್ತು ಒಂದರಿಂದ ಮತ್ತೊಂದನ್ನು ಬೇರ್ಪಡಿಸಲಾಗುವುದಿಲ್ಲ, ಬಿಡಿಸಲಾಗುವುದಿಲ್ಲ. ಇಂದು ನಾವು ೩, ೪, ೫, ೧೫, ೧೮ನೇ ಶತಮಾನಗಳನ್ನು 'ಐತಿಹಾಸಿಕ' ಮತ್ತು 'ಭೂತಕಾಲ'ವೆಂದು ಬಿಡಿಸಿ ಬಿಡಿಸಿ ನೋಡುತ್ತೇವೆಂದು ಹೇಳಿದರೆ ಇತಿಹಾಸಕ್ಕೂ ಭೂತಕಾಲಕ್ಕೂ ಏನೇನು ವ್ಯತ್ಯಾಸಗಳಿವೆ ಎಂದು ಹೇಳಲು ಸಾಧ್ಯವೆ? ಯಾವುದು ಇತಿಹಾಸ, ಯಾವುದು ಭೂತಕಾಲ ಎಂದು ವರ್ಗೀಕರಿಸಲು ಸಾಧ್ಯವೆ? ಹಾಗೆ ಮಾಡಲು ಪ್ರಯತ್ನಪಟ್ಟರೆ ಅದು ಅಪೇಕ್ಷಣೀಯವೆ?

ಹಾಗೆ ನೋಡಿದರೆ ಎಲ್ಲ ವಸಾಹತುಶಾಹಿ / ವಸಾಹತುಶಾಹಿಗೊಳಗಾದ ಮತ್ತು ವಸಾಹತುಶಾಹಿಯೋತ್ತರ ಸಮಾಜಗಳ ಸೃಜನಶೀಲ ಕೃತಿಗಳಲ್ಲಿ ಈ ಸತ್ಯ ಮಹತ್ತರವಾಗಿ ಅಭಿವ್ಯಕ್ತಿಗೊಂಡಿದೆ. ಈ ಸತ್ಯವನ್ನು ಜ್ಞಾನಶಾಖೆಗಳು – ಇತಿಹಾಸ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಸಾಂಸ್ಕೃತಿಕ ಅಧ್ಯಯನಗಳು, ಪ್ರಾದೇಶಿಕ ಅಧ್ಯಯನಗಳು, ಸಮಾಜೋ-ಸಾಂಸ್ಕೃತಿಕ ಮನೋವಿಜ್ಞಾನ ಮುಂತಾದವು – ಅಭಿವ್ಯಕ್ತಿಸಲು ಸಾಧ್ಯವಿಲ್ಲದ ರೀತಿಯಲ್ಲಿ ಸೃಜನಶೀಲ ಕೃತಿಗಳು ಪ್ರಕಟಪಡಿಸಿವೆ. ಪ್ರಪಂಚದಾದ್ಯಂತ ಎಲ್ಲ ಕಲಾಕೃತಿಗಳೂ ಭಿನ್ನವಾದ, ಬಹುರೂಪಿಯಾದ, ವಿವಾದಿಯಾದ ರಚನೆಗಳನ್ನು, ಮುನ್ನೋಲವುಗಳನ್ನು, ಪ್ರಭಾವಗಳನ್ನು ಮತ್ತು ನೆಲೆಗಳನ್ನು ಯಾವಾಗಲೂ ಒಗ್ಗೂಡಿಸಿವೆ. ಸಮಾಜವಿಜ್ಞಾನಿಗಳಿಗೆ ಈ ಸತ್ಯವನ್ನು ಗ್ರಹಿಸಲು ಎಂದಿಗೂ ಸಾಧ್ಯವಾಗಿಲ್ಲ. ಆದ್ದರಿಂದ ಅವರ ಜ್ಞಾನಶಾಖೆಗಳು



ದೋಷಯುಕ್ತವಾದವು. ಮಾತನ್ನು ಮುಂದುವರೆಸಿ ಕನಿಷ್ಠವಾದದ್ದನ್ನು ಹೇಳುವುದಾದರೆ, ಸಮಾಜವಿಜ್ಞಾನಿಗಳ ಮೀಮಾಂಸೆಗಳು ಕಲೆಯನ್ನು ಅರ್ಥಮಾಡಿಕೊಳ್ಳುವ ಕ್ರಮ, ವಿಶೇಷವಾಗಿ ಸಾಹಿತ್ಯವನ್ನು ಓದುವ ರೀತಿ, ಆಳವಿಲ್ಲದ್ದು (superficial) ಮತ್ತು ಅಪ್ರಸ್ತುತವಾದದ್ದು. ಈ ಮೀಮಾಂಸೆಗಳಿಗೆ ಕಲಾಕೃತಿಗಳು, ಸಾಹಿತ್ಯ ಕೃತಿಗಳು ಅಭಿವ್ಯಕ್ತಿಸುವ ರೂಪಕಗಳು, ಪ್ರತಿಮೆಗಳು ದಕ್ಕುವುದೇ ಇಲ್ಲ. ವಚನಗಳಿರಬಹುದು, ನಮ್ಮ ಕಾಲದ ಕೃತಿಗಳಿರಬಹುದು ಈ ಮೀಮಾಂಸೆಗಳಿಗೆ ಒಳಪಡದೆ ಬೇರೊಂದು ಓದನ್ನು ಬಯಸಿದಾಗಲೂ ಅವುಗಳು ಕೇವಲ ನಿರ್ಜೀವ ಅವಶೇಷಗಳಾಗಿ ಈ ಮೀಮಾಂಸೆಗಳಿಗೆ ಕಾಣುತ್ತವೆ. ಕೃತಿಗಳು ಮೀಮಾಂಸಕರು ಬಳಸುವ ನಿರ್ಜೀವ ಸಲಕರಣೆಗಳಾಗಿಬಿಡುತ್ತವೆ (dead archival material to be used as instruments/ tools). ಇದೇ ಥಿಯರಿಗಳ ದೊಡ್ಡ ಸಮಸ್ಯೆ.

ಇದಲ್ಲದೆ ಈ ದೊಡ್ಡ ಸಮಸ್ಯೆಗೆ ಎರಡು ಅಂಶಗಳಿವೆ – ಒಂದು, ಪಶ್ಚಿಮದ ಜ್ಞಾನಶಾಸ್ತ್ರವನ್ನು (epistemology) ತಿರಸ್ಕರಿಸಿ ಇತಿಹಾಸ/ಗತಕಾಲವನ್ನು ಬೇರೆ ರೀತಿಯಲ್ಲಿ ವ್ಯಾಖ್ಯಾನಿಸಬೇಕೆಂದಿರುವವರಿಗೆ ವಸಾಹತುಶಾಹಿಪೂರ್ವ ಪಠ್ಯಗಳ ತಿಳುವಳಿಕೆ ಹೆಚ್ಚಾಗಿಲ್ಲ. ಅವರು ಕೆಲವು ಪಠ್ಯಗಳಿಂದ ಅಥವಾ ಒಂದು ನಿರ್ದಿಷ್ಟ ಕಾಲಘಟ್ಟದಿಂದ ಕೆಲವು ಮಾಹಿತಿಗಳನ್ನು ಎರವಲು ಪಡೆದುಕೊಂಡು, ತಮ್ಮ ಸೈದ್ಧಾಂತಿಕ ಆಯ್ಕೆಗಳಿಗೆ ಸರಿಹೊಂದುವಂತೆ ವಿರಳವಾಗಿ ಪಠ್ಯಗಳಿಂದ ಉಲ್ಲೇಖಿಸುತ್ತಾರೆ. ಅವರು ತಮ್ಮನ್ನು ಪಶ್ಚಿಮ-ವಿರೋಧಿಗಳು ಎಂದು ಘೋಷಿಸಿಕೊಂಡು ಪಶ್ಚಿಮದ ಸಂಕುಚಿತ ಜ್ಞಾನಶಾಸ್ತ್ರದ ಹೊರೆಯಿಲ್ಲದ ದೃಷ್ಟಿಕೋನದಿಂದ ಭೂತಕಾಲವನ್ನು ಮರುಸೃಷ್ಟಿಸುವ ಆಶಯವನ್ನು ವ್ಯಕ್ತಪಡಿಸಿದರೂ ಸಹ ಅವರಿಗೆ ವಸಾಹತುಶಾಹಿಪೂರ್ವ ಪಠ್ಯಗಳ ನೇರ ಜ್ಞಾನ, ಮೂಲ ಪಠ್ಯಗಳ ಆಳವಾದ ಅರಿವು, ಇಲ್ಲದ ಕಾರಣ ಅವರು ಹಾಗೆ ಮಾಡಲಾರರು. ಪಶ್ಚಿಮವನ್ನು ತಿರಸ್ಕರಿಸಬೇಕು ಎಂದು ಘೋಷಿಸುವುದರಿಂದ ಮಾತ್ರ ಏನೂ ಪ್ರಯೋಜನವಿಲ್ಲ. ಎರಡನೆಯದಾಗಿ, ಅಂತಹವರಿಗೆ ಪಾಶ್ಚಿಮಾತ್ಯ ಜ್ಞಾನ ಹಾಗೂ ಪಶ್ಚಿಮವೇ ಒಂದು ಏಕಶಿಲಾರೂಪದ ಪ್ರಕಾರವಲ್ಲ, ಅದು ವಿಜಾತೀಯವಾದದ್ದು ಎಂಬ ಅರಿವಿರುವುದಿಲ್ಲ. ಅವರು ಪಶ್ಚಿಮದ ಬಹುರೂಪತೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತಾರೆ. ನನ್ನ ಅಭಿಪ್ರಾಯದಲ್ಲಿ ಅತ್ಯಂತ ಮುಖ್ಯವಾದ ವಿಚಾರವೇನೆಂದರೆ, ಪಶ್ಚಿಮದ ಪಠ್ಯಗಳನ್ನು ಬೇರೆ ಮಾದರಿಯಲ್ಲಿ ಬಹಳ ಕಲ್ಪನಾಶಕ್ತಿಯುತವಾಗಿ 'ಓದಲು', 'ವ್ಯಾಖ್ಯಾನಿಸಲು' ಸಾಧ್ಯ ಮತ್ತು ಹೀಗೆ ಮಾಡಬೇಕಾದದ್ದು ಸಾಧುವಾದದ್ದೆ ಸರಿ. ಎಲ್ಲ ಸಂದರ್ಭಗಳಲ್ಲೂ ಪಶ್ಚಿಮದ ಪಠ್ಯಗಳನ್ನು ನಮ್ಮ ಕಾಳಜಿಗಳಿಗೆ, ಆಯ್ಕೆಗಳಿಗೆ ಪ್ರತಿಕೂಲವಾದವು ಮತ್ತು

ವೈಷಮ್ಯವುಳ್ಳವೆಂದು ನೋಡಬೇಕಾಗಿಲ್ಲ. ಆ ಪಠ್ಯಗಳನ್ನು ಸೃಜನಶೀಲ ಮಾದರಿಯಲ್ಲಿ ಬಳಸಬಹುದು. ಅಲ್ಲದೆ, ಇಂತಹ ಒಂದು ನೋಟ/ಓದುವಿಕೆ ಪಾಶ್ಚಿಮಾತ್ಯ ಜ್ಞಾನಶಾಸ್ತ್ರದಲ್ಲಿಯೇ ಇರುವ ಅನೇಕ ವೈರುಧ್ಯಗಳು, ದ್ವಂದ್ವಗಳನ್ನು ನಿರ್ಭಿಡೆಯಿಂದ ಎತ್ತಿ ತೋರಿಸುತ್ತದೆ. ಹೀಗೆ ಮಾಡಲು ಬೌದ್ಧಿಕ ಧೈರ್ಯ/ಧೀಮಂತಿಕೆ ಮತ್ತು ಮನಸ್ಸಿನ ಹಾಗೂ ಚೈತನ್ಯದ ಸ್ವಾಯತ್ತತೆ ಬೇಕಾಗುತ್ತದೆ. ಆದ್ದರಿಂದ, ಪಾಶ್ಚಿಮಾತ್ಯ ಜ್ಞಾನವನ್ನು ಉಪಯೋಗಿಸುವಾಗಲೂ ದೈನ್ಯತೆ, ಕೀಳರಿಮೆಗಳನ್ನು ಹೊಂದಿರಬೇಕಾಗಿಲ್ಲ. ಅಲ್ಲದೆ, ಅಸಾಧಾರಣವಾದ ಧೀಮಂತಿಕೆಯಿಂದ ಪಾಶ್ಚಿಮಾತ್ಯ ಜ್ಞಾನಶಾಸ್ತ್ರದ ಕೊರತೆಗಳನ್ನು ತೋರಿಸಿಕೊಡಬಹುದು. ಎಲ್ಲ ಜ್ಞಾನವೂ ತಾತ್ಕಾಲಿಕವಾದದ್ದು, ಸಾಂದರ್ಭಿಕವಾದದ್ದು ಎಂಬ ದೃಢನಂಬಿಕೆ ಮತ್ತು ಸ್ಪಷ್ಟತೆ ಇರಬೇಕೆಂದು ನಾನು ವಾದಿಸುತ್ತಿದ್ದೇನೆ. ನಾವು ಸೃಷ್ಟಿಸಲು/ಕಟ್ಟಲು ಯತ್ನಿಸುತ್ತಿದ್ದ ಮಾದರಿಯ ಜ್ಞಾನಕ್ಕೂ ಇದು ಅನ್ವಯಿಸುತ್ತದೆ (ಉದಾಹರಣೆಗೆ, ಮಾಧ್ಯಮಿಕ ಬೌದ್ಧರು ಇದನ್ನು ತೋರಿಸಿಕೊಟ್ಟರು ಹಾಗೂ ಪ್ರತಿಪಾದಿಸಿದರು). ಪ್ರತಿರೋಧಾತ್ಮಕ ಮಾದರಿಯ ಜ್ಞಾನವನ್ನು ಸೃಷ್ಟಿಸುತ್ತಿದ್ದೇವೆಂದು ನಂಬುವವರು ಜ್ಞಾನದ ತಾತ್ಕಾಲಿಕತೆಯನ್ನು ಪರಿಗಣಿಸುವುದೆ ಇಲ್ಲ. ಅವರುಗಳು ತಾವು 'ಸೃಷ್ಟಿಸುವ' ಜ್ಞಾನವು ಬೇರೆ ಎಲ್ಲ ಜ್ಞಾನ ಪದ್ಧತಿಗಳನ್ನು ಯಾವುದೇ ವೈರುಧ್ಯಗಳಿಲ್ಲದೆ ಸಮರ್ಪಕವಾದ, ದೋಷರಹಿತವಾದ, ನ್ಯೂನತೆಗಳಿಲ್ಲದ ಸ್ಥಿತಿಯಿಂದ ಪರೀಕ್ಷಿಸಿಬಿಡುತ್ತದೆ ಎಂದು ತಿಳಿದಿರುತ್ತಾರೆ. ಈ ದೋಷವನ್ನು ವಿರೋಧಿಸಬೇಕು. ಹಾಗೆ ನೋಡಿದರೆ, ಶ್ರೇಷ್ಠವಾದ ಸಂಸ್ಕೃತ ಪಠ್ಯಗಳು, ಬೌದ್ಧ ಪಠ್ಯಗಳು ಮತ್ತು ಜೈನ ಪಠ್ಯಗಳನ್ನು ಅಧ್ಯಯನಮಾಡಿದ ಸಂಸ್ಕೃತದ, ಪಾಲಿಯ, ಪ್ರಾಕೃತದ ಅನೇಕ ಪ್ರಕಾಂಡ ಪಂಡಿತರಿದ್ದರು. ಅವರು ಪಾಶ್ಚಿಮಾತ್ಯ ಪಾಂಡಿತ್ಯದಲ್ಲೂ ಆಳವಾದ ಪರಿಶ್ರಮ ಹೊಂದಿದ್ದರು. ಅವರು ಎರಡೂ ಮೂಲಗಳಿಂದ ವಿಚಾರಗಳನ್ನು ಪಡೆಯುತ್ತಿದ್ದರು. ಆದರೆ, ಹೀಗೆ ಮಾಡುವುದರಿಂದ ಒದಗುವ ಮಹತ್ತರವಾದ ಸಮಸ್ಯೆಗಳ ಅರಿವೂ ಅವರಿಗಿತ್ತು. ನಮ್ಮ ಅನೇಕ ಘನ ಪಂಡಿತರಿಗೆ ಯಾವ ಕೀಳರಿಮೆಯೂ ಇರಲಿಲ್ಲ ಅಥವಾ ಸರಳೀಕೃತ ಒಡಂಬಡಿಕೆಯಿರಲಿಲ್ಲ. ಅಂತಹ ಶ್ರೇಷ್ಠ ಪಂಡಿತರು ಜ್ಞಾನದ ವಿಷಯದಲ್ಲಿ ಮತ್ತು ಐತಿಹಾಸಿಕ ಗತಕಾಲವನ್ನು ಅಧ್ಯಯನ ಮಾಡುವ ಕ್ರಮಗಳಿಗೆ ಸಂಬಂಧಪಟ್ಟಂತೆ ಯಾವತ್ತಿಗೂ ಸುಲಭವಾದ ಪರಿಹಾರಗಳು ಮತ್ತು ತೀರ್ಮಾನಗಳನ್ನು ಹುಡುಕುತ್ತಿರಲಿಲ್ಲ ಹಾಗೂ ಅವರು ತಮ್ಮಲ್ಲಿಯೆ ಕಂಡುಬಂದ ವೈರುಧ್ಯಗಳನ್ನು ಎದುರುಗೊಳ್ಳಲು ಸಿದ್ಧರಾಗಿರುತ್ತಿದ್ದರು. ಅವರು ಎಂದಿಗೂ ಶುದ್ಧವಾದ, ಸಮರ್ಪಕವಾದ, ಸಂಪೂರ್ಣವಾದ, ಆತ್ಯಂತಿಕವಾದ ಜ್ಞಾನವನ್ನು ಬಯಸಲಿಲ್ಲ.



ಮತ್ತೊಂದು ವಿಷಯ. ಪಶ್ಚಿಮದ ಜ್ಞಾನಮಾರ್ಗದಿಂದ ಪ್ರಜ್ಞೆ ರೂಪಿಸಿಕೊಂಡ ಅನೇಕರು ಪಶ್ಚಿಮೇತರ ಸಮಾಜಗಳ ಬಗ್ಗೆ ಬೇರೆ ರೀತಿ ಯೋಚಿಸಲು ಬಹಳ ಶ್ರಮಪಟ್ಟಿರುವುದನ್ನೂ ನಾವು ಕಾಣಬಹುದು. ಉದಾಹರಣೆಗೆ ಮೆಕ್ಕಿಮ್ ಮ್ಯಾರಿಯೆಟ್ ಭಾರತದ ಜಾತಿಗಳ ಬಗ್ಗೆ ಪಾಶ್ಚಿಮಾತ್ಯ ಮಾದರಿ ಬಿಟ್ಟು ಜೈಮಿನಿಯ 'ಪೂರ್ವ ಮೀಮಾಂಸೆ'ಯ ಮೂಲಕ ಜಾತಿಯ ಸಂಕೀರ್ಣ ಸ್ವರೂಪವನ್ನು ವಿವರಿಸಲು ಪ್ರಯತ್ನಿಸಿದರು. ಪ್ರಕೃತಿಯ ನಾನಾ ದ್ರವ್ಯಗಳ ರೂಪಕಗಳ ಮೂಲಕ ಅದನ್ನು ಅರ್ಥೈಸಲು ಅಧ್ಯಯನವನ್ನು ಮಾಡಿದರು. ಅಂದರೆ ವಸಾಹತುಶಾಹಿಪೂರ್ವ ಸಾಂಸ್ಕೃತಿಕ ಪಠ್ಯಗಳ ಮೂಲಕ ಈ ರೀತಿಯ ಪ್ರಯತ್ನಗಳು ನಡೆದವು. ಭಾರತದ ಅನೇಕ ಶ್ರೇಷ್ಠ ಪಂಡಿತರು ಇದನ್ನು ಮಾಡಿದ್ದಾರೆ. ಇದು ಇಂದು ಪ್ರಾರಂಭವಾಗಿರುವ ಕ್ರಾಂತಿಕಾರಕ ಜ್ಞಾನಯಜ್ಞವೇನಲ್ಲ. ಕೆಲವರಿಗೆ ಇದು ಹೊಸ ವಿಷಯವಾಗಿ ಕಾಣಬಹುದು ಅಷ್ಟೆ. ಅದೂ ಕೂಡ ಅವರ ಪಾಶ್ಚಿಮಾತ್ಯ ಧೋರಣೆಯನ್ನೇ ಎತ್ತಿಹಿಡಿಯುತ್ತದೆ.

ಪಶ್ಚಿಮದ ಜ್ಞಾನಮಾರ್ಗವನ್ನು ವಿರೋಧಿಸಬೇಕೆಂಬ ಮಾತನಾಡುವವರ ಹಿನ್ನೆಲೆ ಏನು? ಇವರು ಆಧುನಿಕ ಜಗತ್ತಿನ, ಪಶ್ಚಿಮದ ಚಿಂತನಾಶಿಸ್ತನ್ನು, ಮಾದರಿಗಳನ್ನು ಇಂದು ಕೂಡ ಬಳಸಿಕೊಳ್ಳುತ್ತಲೇ ಇರುವವರು. ಯಾವ ಹಂತದಲ್ಲೂ ಯಾರೂ ತಮ್ಮ ಮೂಲಭೂತ ಶಿಸ್ತನ್ನು ಬಿಡಲಾಗುವುದಿಲ್ಲ – ಅದು ಪರೋಕ್ಷವಾಗಿ, ನೇರವಾಗಿ, ಪ್ರಜ್ಞಾಪೂರ್ವಕವಾಗಿ, ಅಪ್ರಜ್ಞಾಪೂರ್ವಕವಾಗಿ ನಮ್ಮನ್ನು ವ್ಯಾಪಿಸಿಬಿಟ್ಟಿದೆ. ಯಾರೂ ಅದನ್ನು ಬಿಟ್ಟು/ತೊಳೆದುಕೊಂಡು/ಅಳಿಸಿಹಾಕಿ, 'ಹೊಸ/ನವ/ಶುದ್ಧ' ಪ್ರಜ್ಞೆಯ ಮೂಲಕ (new/cleanced/pure consciousness ಮೂಲಕ) ನಿರ್ವಸಾಹತೀಕರಣದ ಅಧ್ಯಯನ ಮಾಡಲು ಸಾಧ್ಯವೇ ಇಲ್ಲ. ಮನುಷ್ಯಪ್ರಜ್ಞೆ ಹಾಗೆ ರೂಪುಗೊಳ್ಳುವುದು ಅಸಾಧ್ಯ. ವಸಾಹತುಶಾಹಿಪೂರ್ವದ ಜನರಿಗೂ, ಅಂದರೆ ಪಶ್ಚಿಮದ ಜ್ಞಾನದ ಅರಿವೇ ಇಲ್ಲದವರಿಗೂ (pure pre-colonial/uncolonised consciousness) ನಮಗೂ ಇರುವ ವ್ಯತ್ಯಾಸ ಇದು. ಮೊದಲೇ ಹೇಳಿದಂತೆ ಇದು ಅಧ್ಯಯನಕ್ಕೆ ಮಾತ್ರ ಸೀಮಿತವಾದ ವಿಷಯವಲ್ಲ. ಇದು ಮಾನವಪ್ರಜ್ಞೆಗೆ ಅನ್ವಯವಾಗುವ ಮಾತು. ಒಮ್ಮೆ ಆಧುನಿಕ/ ಪಾಶ್ಚಿಮಾತ್ಯ ಚಿಂತನಾಕ್ರಮ/ಶಿಸ್ತಿನ ಕ್ರಮಕ್ಕೆ (ಅಥವಾ ಯಾವುದೇ ಆ ರೀತಿಯ ಮಾರ್ಗಕ್ಕೆ) ಬಂದರೆ ಅದನ್ನು ಅಳಿಸಲಾಗುವುದಿಲ್ಲ – ಬದಲಾಗಿ ಅದನ್ನು ಹೊತ್ತುಕೊಂಡೇ, ಆ ಕ್ರಮದ ಮೂಲಕವೇ ಅದನ್ನು ಮೀರುವ ಪ್ರಯತ್ನ ಮಾಡಬೇಕು – ಅದು ಒಡ್ಡುವ ಎಲ್ಲ ವಿಪರ್ಯಾಸಾತ್ಮಕ/ವಿರೋಧಾತ್ಮಕ ನೆಲೆಗಳನ್ನು ಇಟ್ಟುಕೊಂಡೇ ಮೀರುವ ಪ್ರಯತ್ನ ಮಾಡಬೇಕು. ಇಂದು

ಪಶ್ಚಿಮಕ್ಕೆ ವಿರೋಧವನ್ನು ಅಭಿವ್ಯಕ್ತಿಸುವವರು ನೀಟ್ಸೆ, ಕಾಂಟ್, ಮಾರ್ಕ್ಸ್, ವಿಟ್‌ಗೆನ್‌ಸ್ಟೈನ್ ಇತ್ಯಾದಿ ಇತ್ಯಾದಿ ಚಿಂತಕರು ಹಾಗೂ ತತ್ತ್ವಜ್ಞಾನಿಗಳನ್ನು ಸಂಪೂರ್ಣವಾಗಿ ತ್ಯಜಿಸಿಬಿಡುವರೆ ? ತ್ಯಜಿಸಲು ಹೊರಟರೆ ಅದು ಸಾಧ್ಯವೆ ?

ಯಾವುದೇ ರೀತಿಯ ಜ್ಞಾನದ ಬಗ್ಗೆ ಮಾತನಾಡುವಾಗ ಒಂದು ಸತ್ಯ ನಮಗೆ ಮನವರಿಕೆಯಾಗುವುದು ಅತ್ಯವಶ್ಯಕ. ನಾವು ನಮ್ಮ ವ್ಯಕ್ತಿತ್ವವನ್ನು (personality) 'ಸ್ವ-ಜ್ಞಾನ'ವನ್ನು (self knowledge) ಮೀರಿ ಜಗತ್ತಿನ ಜ್ಞಾನವನ್ನು ಪಡೆಯಲು ಸಾಧ್ಯವಿಲ್ಲ. ಅಂದರೆ ಯಾವ ಕ್ಷಣದಲ್ಲಿ ಯಾವ ರೀತಿ ನಮ್ಮನ್ನು ಅರ್ಥೈಸಿಕೊಂಡಿರುತ್ತೇವೆಯೊ, ನಮ್ಮನ್ನು ಗುರುತಿಸಿಕೊಂಡಿರುತ್ತೇವೆಯೊ, ಆ 'ಸ್ವ-ಜ್ಞಾನ'ದ ಮೂಲಕವೇ ಜಗತ್ತಿನ ಬಗ್ಗೆ ಅರಿವನ್ನು, ಜ್ಞಾನವನ್ನು ಪಡೆದುಕೊಳ್ಳುತ್ತೇವೆ. ಈ 'ಸ್ವ-ಅರಿವು' (self awareness), 'ಸ್ವ-ಜ್ಞಾನ' ಬದಲಾಗುತ್ತಲೇ ಇರುತ್ತದೆ. ಶಾಶ್ವತವಾದ, ಕೊನೆಯವರೆಗೂ ಹಾಗೆಯೇ ಅಖಂಡವಾಗಿ, ಇಡಿಯಾಗಿ ಉಳಿಯುವ 'ಸ್ವ-ಜ್ಞಾನ' ಇಲ್ಲವೇ ಇಲ್ಲ. ಒಂದೊಂದು ಕ್ಷಣವೂ ಈ 'ಸ್ವ-ಜ್ಞಾನ' ಬದಲಾಗುತ್ತಲೇ ಇರುತ್ತದೆ. ಆದ್ದರಿಂದಲೇ ಇದು ಕ್ಷಣಿಕ. ಈ ಕ್ಷಣಿಕತೆಯಿಂದಾಗಿಯೇ ಎಲ್ಲ ಜ್ಞಾನವೂ ನಿರಂತರವಾಗಿ ಶೂನ್ಯಕ್ಕೆ ಹೋಗುತ್ತಿರುತ್ತದೆ. ಆದ್ದರಿಂದಲೇ ಮಾಧ್ಯಮಿಕ ಬೌದ್ಧರು 'ಸರ್ವಂ ಸ್ವಲಕ್ಷಣಂ ಸ್ವಲಕ್ಷಣಂ, ಸರ್ವಂ ಕ್ಷಣಿಕಂ ಕ್ಷಣಿಕಂ, ಸರ್ವಂ ಶೂನ್ಯಂ ಶೂನ್ಯಂ' ಎಂದು ಹೇಳಿದ್ದು. ನಿರಂತರವಾಗಿ ಬದಲಾಗುವ 'ಸ್ವ' ಕ್ಷಣಿಕವಾದ್ದರಿಂದ ಅದು 'ಶೂನ್ಯಕ್ಕೆ' ಹೋಗುತ್ತಲೇ ಇರುತ್ತದೆ. ಅದರಿಂದ ಲಭ್ಯವಾಗುವ ಜ್ಞಾನವೂ ಕ್ಷಣಿಕವಾದ್ದರಿಂದ ಅದೂ ಶೂನ್ಯಕ್ಕೆ ಹೋಗುತ್ತಲೇ ಇರುತ್ತದೆ. ಅಖಂಡವಾದ ಜ್ಞಾನವೇ ಇಲ್ಲ. ಈ ವಾದ ಅಮೂರ್ತವಾದದ್ದೇನೂ ಅಲ್ಲ, ಬದಲಾಗಿ ಇದು ನಮ್ಮ ನಿತ್ಯ ಕ್ಷಣಗಳ, ನಿತ್ಯ ಬದುಕಿನ ಸತ್ಯವನ್ನು ಎತ್ತಿಹಿಡಿಯುತ್ತದೆ. ಈ ಕಾರಣಕ್ಕಾಗಿಯೇ ಶ್ರೇಷ್ಠ ವಿಜ್ಞಾನಿ, ತತ್ವಜ್ಞಾನಿ ಮೈಕೆಲ್ ಪೊಲಾನ್ಯಿ ಹೇಳುವುದೇನೆಂದರೆ ಒಂದೇ ಪ್ರಯೋಗಾಲಯದಲ್ಲಿ, ಏಕಕಾಲದಲ್ಲಿ, ಎಲ್ಲ ಸನ್ನಿವೇಶಗಳು ಒಂದೇ ಇದ್ದಾಗಲೂ ಇಬ್ಬರು ವಿಜ್ಞಾನಿಗಳು ಒಂದೇ ಭೌತಿಕ ವಸ್ತುವನ್ನು ಗಮನಿಸಿದಾಗ, ಪರೀಕ್ಷಿಸಿದಾಗ ಅವರ ಮಾಹಿತಿಗಳು ಬೇರೆ ಬೇರೆಯೇ ಆಗಿರುತ್ತವೆ. ಇಬ್ಬರ 'ಸ್ವ' (self) ಒಂದೇ ಆಗದೇ ಇರುವುದರಿಂದ ಅವರ ಗ್ರಹಿಕೆಗಳು ಭಿನ್ನತೆಗಳಿಂದ ತುಂಬಿಕೊಂಡಿರುತ್ತವೆ. ಭೌತಿಕ ಜಗತ್ತಿನ (Empirical Reality) ವಿಷಯದಲ್ಲೇ ಇದು ನಿಜವಾದರೆ, ವಿಜ್ಞಾನ ಕ್ಷೇತ್ರದಲ್ಲೇ subjectivity ಇಷ್ಟು ಕೆಲಸ ಮಾಡಿದರೆ, ಇನ್ನು ಅನಂತವಾದ ಸಾಪೇಕ್ಷತೆಯನ್ನು ಹೊಂದಿರುವ ಸಾಮಾಜಿಕ, ಸಾಂಸ್ಕೃತಿಕ ವಿಷಯಗಳ ಬಗ್ಗೆ ಅಧ್ಯಯನ ಮಾಡುವಾಗ ನಾವು ಇನ್ನೆಷ್ಟು ಜಾಗೃತರಾಗಿರಬೇಕು!! ಅನೇಕ ಪೂರ್ವಾಗ್ರಹಗಳನ್ನು



ಹೊತ್ತುಕೊಂಡೇ ಇರುವ ನಾವು ಯಾವುದಾದರೂ ಒಂದು ಅಧ್ಯಯನ/ಸಂಶೋಧನೆಯ ಮಾರ್ಗವನ್ನು ಮಾತ್ರ ಎತ್ತಿಹಿಡಿಯಲು ಸಾಧ್ಯವೆ ? ಈ ಅರಿವು ನಮ್ಮಲ್ಲಿರಲೇಬೇಕಾದ ಅಗತ್ಯವನ್ನು ಕಂಡುಕೊಳ್ಳಲೇಬೇಕಲ್ಲವೆ ?

ಇನ್ನೊಂದು ವಿಷಯವನ್ನು ಇಲ್ಲಿ ಪ್ರಸ್ತಾಪಿಸಲೇಬೇಕು. ಜಾತಿ, ಸಂಸ್ಕೃತಿಗಳ ವಿಷಯವನ್ನು ಅಧ್ಯಯನಮಾಡುವಾಗ ಅವುಗಳನ್ನು ಸಂಪೂರ್ಣವಾಗಿ, ಸಮಗ್ರವಾಗಿ 'ಜ್ಞಾನ'ದ ಮೂಲಕ, ಪಠ್ಯಗಳ ಮುಖಾಂತರ ಅರಿಯುವುದು ಸಾಧ್ಯವೆ ? ಪಠ್ಯಗಳು/ಜ್ಞಾನ ಪದ್ಧತಿಗಳು ಎಲ್ಲವನ್ನೂ ಹಿಡಿಯಲು ಸಾಧ್ಯವೆ ? ಸಂಸ್ಕೃತಿಗಳು ಸಮುದಾಯಗಳು 'ಪಠ್ಯ'/'ಜ್ಞಾನ'ವನ್ನು ಮೀರಿಯೇ ಇರುವುದನ್ನು ಮರೆಯಲು ಸಾಧ್ಯವೆ ? ಅಂದರೆ ಇನ್ನೂ ಐವತ್ತು ವರ್ಷಗಳ ಅಧ್ಯಯನಗಳು (textual and empirical methods ಬಳಸಿದ ನಂತರವೂ) ಈ ವಿಷಯಗಳ ಬಗ್ಗೆ ದ್ವಂದ್ವಗಳನ್ನು/ ವೈರುಧ್ಯಗಳನ್ನು ಹೆಚ್ಚಿಸುತ್ತವೆಯಷ್ಟೆ ಎಂದು ಇಂದಿನ ಸಂಶೋಧಕರಿಗೆ ತಿಳಿಯಬೇಡವೆ ? ತಮ್ಮ ವಾದ/ಸಿದ್ಧಾಂತ/ತಾತ್ವಿಕತೆಯಲ್ಲೇ ಅದರ ವಿರೋಧಿ ನೆಲೆ ಹುಟ್ಟುತ್ತದೆ ಎಂಬ ಪರಿಜ್ಞಾನವು ನಿಜವಾದ ಸಂಶೋಧಕನಿಗೆ ಇರಲೇಬೇಕಾದದ್ದು ಪ್ರಾಥಮಿಕ ಲಕ್ಷಣವಲ್ಲವೆ ? (ಕ್ಲಾಡ್ ಲೆವಿ ಸ್ಟ್ರಾಸ್ ಅಂತಿಮವಾಗಿ ತನ್ನ 'ರೇಸ್ ಅಂಡ್ ಹಿಸ್ಟ್ರಿ' ಎಂಬ ಪಠ್ಯದಲ್ಲಿ ಈ ಅರಿವನ್ನು ಪಡೆದುಕೊಳ್ಳುವುದನ್ನು ನಾವು ಗಮನಿಸಬಹುದು).

ಜನಸಮುದಾಯಗಳು, ಆ ಸಮುದಾಯಗಳ ಬಹುಮುಖಿ ಬದುಕಿನ ಕ್ರಮಗಳನ್ನು, ರೀತಿಗಳನ್ನು, ದ್ವಂದ್ವಗಳನ್ನು, ವಿರೋಧಾಭಾಸಗಳನ್ನು 'ಪಠ್ಯ'ಗಳ/'ಜ್ಞಾನಶಾಖೆ'ಗಳ ಮೂಲಕ ಅಧ್ಯಯನ ಮಾಡಿ, ಅರಿವನ್ನು ಹೆಚ್ಚಿಸಿಕೊಳ್ಳಬಹುದೇ ಹೊರತು ಬೇರೆಲ್ಲ ಅಧ್ಯಯನಗಳ ಮಿತಿಗಳನ್ನು ತೊಡೆದುಹಾಕಬಹುದೆಂಬ ನಿಲುವು ಅಹಂಕಾರವಾಗುತ್ತದೆಯಷ್ಟೆ. ಆ ಅಹಂಕಾರವು ತನ್ನೊಳಗೇ ಇರುವ ಮಿತಿಯನ್ನು, ದ್ವಂದ್ವವನ್ನು ಅರಿಯಲಾರದಷ್ಟು ದೊಡ್ಡದಾಗಿರುತ್ತದೆ.

ನೀನಾಸಮ್ ಸಂಸ್ಥೆಯ
ಸ್ಥಾಪಕ ಸದಸ್ಯರಾಗಿದ್ದು ಅದರ ಆರಂಭಕಾಲದಲ್ಲಿ
ನಟರಾಗಿಯೂ ಸಂಘಟಕರಾಗಿಯೂ ತುಂಬ ಕ್ರಿಯಾಶೀಲರಾಗಿ ಕೆಲಸ ಮಾಡಿದ್ದ

**ಕೆರೆಕೈ ಲಕ್ಷ್ಮೀನಾರಾಯಣರಾವ್**

ಅವರು ಈಚೆಗೆ ನಮ್ಮನ್ನಗಲಿದರು.
ಅವರಿಗೆ ನೀನಾಸಮ್ ಶ್ರದ್ಧಾಂಜಲಿ

# ಹಬೀಬ್ ತನ್ವೀರ್ - ಒಂದು ನೆನಪು

ಬಿ.ಆರ್.ವಿ. ಐತಾಳ

ಸಮಕಾಲೀನ ಭಾರತೀಯ ರಂಗಭೂಮಿಯಲ್ಲಿ ಹಬೀಬ್ ತನ್ವೀರ್ ಒಬ್ಬ ಹಿರಿಯಣ್ಣ, ಪುರಾಣಸದೃಶ ವ್ಯಕ್ತಿತ್ವ ಹೊಂದಿರುವ ಐತಿಹ್ಯಪುರುಷ. ೧೯೨೩ರಲ್ಲಿ ಮಧ್ಯಪ್ರದೇಶದ ರಾಯಪುರದಲ್ಲಿ, ಪೇಷಾವರದ ಒಬ್ಬ ಪಠಾಣನ ಮಗನಾಗಿ ಹುಟ್ಟಿದ ಹಬೀಬ್ ನಾಗಪುರದ ಮೋರಿಸ್ ಕಾಲೇಜಿನಲ್ಲಿ ಪದವಿಶಿಕ್ಷಣ ಮುಗಿಸಿ, ಮುಂಬಯಿ, ದೆಹಲಿಗಳಲ್ಲಿ ನಾಟಕ, ಸಿನೆಮಾ ಎಂದುಕೊಂಡು ಅಲೆದಾಡಿ, ಸ್ವಲ್ಪಕಾಲ ಆಲಿಘಡ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ ಓದಿ, ೧೯೫೬ರಲ್ಲಿ ವಿಶೇಷ ಶಿಷ್ಯವೇತನ ಪಡೆದು ಇಂಗ್ಲೆಂಡಿನ ರಾಡಾ ಮತ್ತು ಬ್ರಿಸ್ಟಲ್ ಓಲ್ಡ್‌ವಿಕ್‌ಗಳಲ್ಲಿ ರಂಗಶಿಕ್ಷಣ ಪಡೆದು, ಹಿಂದಿರುಗಿ ಸಿದ್ಧಾಂತಬದ್ಧವಾದ ಜನಪರ ರಂಗಭೂಮಿಗಾಗಿ ಜೀವ ತೇದವರು.

ಮೊದಲು ದೆಹಲಿಯಲ್ಲಿ ಖುದ್‌ಶಿಯಾ ಜೈದಿಯವರ 'ಹಿಂದೂಸ್ತಾನಿ ಥಿಯೇಟರ್'ನಲ್ಲಿ ದುಡಿದು, ಇಪ್ಟಾ ಮತ್ತು ಪ್ರೊಗ್ರೆಸ್ಸಿವ್ ರೈಟರ್ಸ್ ಅಸೋಸಿಯೇಶನ್ ಜತೆಗಿನ ಸಂಪರ್ಕದಲ್ಲಿ ಎಡಪಂಥೀಯ ಅರಿವಿನ ನಿಲವುಗಳನ್ನು ಗಟ್ಟಿಗೊಳಿಸಿಕೊಂಡು, ೧೯೫೯ರಲ್ಲಿ ಪತ್ನಿ ಮೋನಿಕಾ ಶರ್ಮಾ ಅವರ ಜೊತೆಗೆ ತಮ್ಮದೇ 'ನಯಾ ಥಿಯೇಟರ್' ಸಂಸ್ಥೆಯನ್ನು ಕಟ್ಟಿದರು. ಸಮಕಾಲೀನ ರಂಗಭೂಮಿಯಲ್ಲಿ 'ಜಾನಪದ'ವು ಮುನ್ನೆಲೆಗೆ ಬರುವ ಮೊದಲೇ ಜಾನಪದ ಮತ್ತು ಸಾಂಪ್ರದಾಯಿಕ ರಂಗಪ್ರಕಾರಗಳಿಂದ ಆಕರ್ಷಿತರಾಗಿ ಅಲ್ಲಿನ ಮಣ್ಣಿನಲ್ಲಿ ತಮ್ಮ ರಂಗಸೌಧವನ್ನು ಕಟ್ಟಲು ಪ್ರಯತ್ನಿಸಿ ದವರು. ಹಳ್ಳಿಗರೊಂದಿಗೆ, ಬಡ ಜನತೆಯೊಂದಿಗೆ ಬೆರೆತು ದುಡಿಯುವ ಸಾಂಸ್ಕೃತಿಕ ಪ್ರಜ್ಞೆ ಅವರದು. ಹುಟ್ಟೂರಿನ ಹಾಡುಗಳು, ಮುಂಬೈ ಬದುಕಿನಲ್ಲಿ ಕಲಿತ ಜನಪ್ರಿಯ ಹಾಗೂ ಶ್ರಮಜೀವಿ ವರ್ಗದವರ ಸಾಂಸ್ಕೃತಿಕ ಸಂಪ್ರದಾಯಗಳು, ಆದಿವಾಸಿ ಬದುಕು ಮತ್ತು ಸಂಗೀತ ಇವೆಲ್ಲ ಅವರ ಕಲೆಯನ್ನು ರೂಪಿಸಿದವು. ಛತ್ತೀಸಗಡಿ ಹಾಡುಗಳನ್ನು ಕಲೆಹಾಕಲು ಹೊರಟಾಗ ಅಲ್ಲಿನ ಆದಿವಾಸಿಗಳ ಸಾಂಸ್ಕೃತಿಕ ಸಮೃದ್ಧಿಯನ್ನು ಕಂಡು ಬೆರಗಾಗಿ ಮೋಹಿತರಾಗಿ ಅಲ್ಲಿ ತಮ್ಮ ರಂಗಭೂಮಿಯ ಬೇರುಗಳನ್ನು ಕಂಡು ಕೊಂಡರು. ಅಲ್ಲಿನ ಅನಕ್ಷರಸ್ಥ ಜಾನಪದ ನಟರನ್ನೇ ತಮ್ಮ ತಂಡದ ಮುಖ್ಯ



ನಟರನ್ನಾಗಿಸಿಕೊಂಡರು. ಅವರ ಹಬ್ಬ ಹಾಡು ಆಚರಣೆಗಳ ಜಾಡಿನಲ್ಲಿಯೇ ಅನನ್ಯವಾದ ತಮ್ಮ ರಂಗ-ಸಿದ್ಧಾಂತಗಳಿಗೆ ರೂಪಕೊಟ್ಟರು. ಜನಸಾಮಾನ್ಯರ ದೈನಂದಿನ ಬದುಕಿನ ದುಃಖ ದುಮ್ಮಾನಗಳ ನಡುವೆಯೆ ಅರಳಿಕೊಳ್ಳುವ ಗೆಲವು ನಲವುಗಳ ಸಹಜ ಸರಳ ಸೌಂದರ್ಯವು ಅವರ ರಂಗಭೂಮಿಯ ಜೀವಜೀವಾಳ.

ಸಾಮಾಜಿಕ ಹಾಗೂ ರಾಜಕೀಯ ಕ್ರಾಂತಿಯ ಬಗೆಗಿನ ಕವಿತೆಗಳನ್ನು ಬರೆಯುವ ಮೂಲಕ ತಮ್ಮ ಬರವಣಿಗೆಯನ್ನು ಪ್ರಾರಂಭಿಸಿದ ಹಬೀಬ್ ಮುಂದೆ ಮಹತ್ವದ ನಾಟಕಕಾರರಾಗಿ ಬೆಳೆದರು. ೧೯೫೪ರಲ್ಲಿ ೧೮ನೇ ಶತಮಾನದ ಉರ್ದು ಕವಿ ನಜೀರ್ ಅಕ್ಬರಾಬಾದಿಯವರ ಕವಿತೆಯನ್ನು ಆಧರಿಸಿ ರಚಿಸಿದ 'ಆಗ್ರಾ ಬಜಾರ್' ಬಡಜನತೆಯ ದಿನವಹಿ ಹೋರಾಟವನ್ನು ಕಾವ್ಯಮಯವಾಗಿ ಚಿತ್ರಿಸುತ್ತದೆ. ಇದು ಅವರು ನಿರ್ದೇಶಿಸಿದ ಮೊದಲ ಪ್ರಮುಖ ನಾಟಕ. ಹೆಚ್ಚುಕಡಿಮೆ ಓದುಬರಹವಿಲ್ಲದ ಹಳ್ಳಿಯ ಬೀದಿಯ ಕಲಾವಿದರನ್ನೇ ಒಗ್ಗೂಡಿಸಿಕೊಂಡು ಕಟ್ಟಿದ ಈ ನಾಟಕವು ಆ ಕಾಲ ದಲ್ಲೊಂದು ಕ್ರಾಂತಿಕಾರಕ ಕಲಾಮೀಮಾಂಸೆಯನ್ನು ಹುಟ್ಟುಹಾಕಿದ ಪ್ರಯೋಗ ವಾಗಿದೆ. ಹಾಡು ಸಂಗೀತ ಜನಪ್ರಿಯ ಸಂಗತಿಗಳು ವಸ್ತುವಿನ ಅಂತರ್ಯದ ಭಾಗವಾಗಿ ಸಮ್ಮಿಳಿತವಾಗಿ ಅತ್ಯುಚ್ಚ ಮಟ್ಟದ ಕಲಾಭಿವ್ಯಕ್ತಿ ಸಾಧಿಸಿದ ಪ್ರಯೋಗವದು.

ಪಾಶ್ಚಾತ್ಯ ಮಾದರಿಯ ರಂಗಶಿಕ್ಷಣ ಪಡೆದರೂ, ಹಬೀಬ್, ಆ ಕಾಲದ ರಂಗಭೂಮಿಯಲ್ಲಿ ನೆಲೆನಿಂತಿದ್ದ ವಸಾಹತುಪ್ರಜ್ಞೆಯಿಂದ ಹೊರಬಂದು, ದೇಶೀಯ ಅಭಿವ್ಯಕ್ತಿ ವಿಧಾನ, ಅಭಿನಯ ಪ್ರಸ್ಥಾನಗಳ ಹುಡುಕಾಟದಲ್ಲಿ ತಮ್ಮ ನೆಲೆ ಕಂಡುಕೊಂಡರು. ಛತ್ತೀಸಗಡಿ ಜಾನಪದ ನಟರೊಂದಿಗೆ ಕೆಲಸಮಾಡುತ್ತ ಅವರ ಭಾಷೆ ಮತ್ತು ಶೈಲಿಯಲ್ಲಿಯೆ 'ಮಿಟ್ಟೀ ಕೀ ಗಾಡಿ' (ಶೂದ್ರಕನ ಮೃಚ್ಛಕಟಿಕ)ಯನ್ನು ರಚಿಸಿದರು. ಅಲ್ಲಿನ ಪಾಂಡವಾನಿ ಮತ್ತು ನಾಚಾ ಶೈಲಿಗಳಲ್ಲಿ ಜಾನಪದ ಕತೆಗಳನ್ನಾಧರಿಸಿದ ನಾಟಕಗಳನ್ನು ಆಡಿದರು. ೧೯೭೪-೭೫ರಲ್ಲಿ ಬರೆದು ಆಡಿಸಿದ 'ಚರಣದಾಸ್ ಚೋರ್'ದಲ್ಲಿ ಹಬೀಬ್‌ರ ರಂಗಕಲೆ ತನ್ನ ಅತ್ಯುತ್ತಮ ಮಟ್ಟದ ಅಭಿವ್ಯಕ್ತಿಯನ್ನು ಪಡೆಯಿತೆಂದು ರಂಗಸಂವೇದಿಗಳ ಒಕ್ಕೊರಲ ಅಭಿಪ್ರಾಯ. ಗುರುವಿಗೆ ಕೊಟ್ಟ ಮಾತಿಗಾಗಿ, ಸತ್ಯಕ್ಕಾಗಿ ಜೀವ ತೆತ್ತ ಒಬ್ಬ ಕಳ್ಳನ ಕತೆ ಇದರ ಮೂಲಧಾತು. ಹಲವು ಪ್ರದರ್ಶನಗಳಲ್ಲಿ ಹಲವು ಅವತಾರಗಳನ್ನು ತಾಳಿದ ಈ ನಾಟಕವು ಬರೆದ ನಾಟಕದಿಂದ ಹೊರಳಿ ಮತ್ತೆ ಜಾನಪದಕ್ಕೆ ಸೇರಿಕೊಂಡಿದೆ.

ಭಾರತೀಯ ರಂಗಭೂಮಿಯ ಜೀವನಾಡಿಯಾಗಿ ದುಡಿದ ಪದ್ಮಶ್ರೀ ಹಬೀಬ್ ತನ್ವೀರ್ ಇದೇ ಜೂನ್ ೮ರ ಬೆಳಿಗ್ಗೆ ಅಸ್ತಂಗತರಾದರು. ಈ ಕಿರುಬರಹ ಅವರ ನೆನಪಿಗೆ ಸಲ್ಲಿಸುವ ನುಡಿನಮನ.

# ಕಲಿ - ಕಲಿಸು
# ಕಲಾ ಸಂವೇದನಾ ಶಿಬಿರ:
# ಒಂದು ವರದಿ

೨೦೦೮ - ೦೯ನೇ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯು ಪ್ರೌಢಶಾಲೆಗಳಲ್ಲಿ ಪಠ್ಯೇತರ ಕಲಿಕೆಯ ಸೌಲಭ್ಯಗಳಲ್ಲಿ ನಾಟಕ ಶಿಕ್ಷಣವನ್ನೂ ಅಳವಡಿಸಿದ್ದು, ಅದಕ್ಕಾಗಿ ೪೦ಕ್ಕೂ ಹೆಚ್ಚುಮಂದಿ ನಾಟಕ ಕಲೆಯ ಶಿಕ್ಷಕರನ್ನು ನೇಮಕ ಮಾಡಿಕೊಂಡಿದೆ. ಸರ್ಕಾರದ ಮನ್ನಣೆ ಪಡೆದ ರಂಗಶಿಕ್ಷಣ ಸಂಸ್ಥೆಗಳಲ್ಲಿ ರಂಗಶಿಕ್ಷಣ ಡಿಪ್ಲೋಮಾ ಪಡೆದ ಅಭ್ಯರ್ಥಿಗಳು ನಾಟಕ ಶಿಕ್ಷಕರಾಗಿ ಆಯ್ಕೆಯಾಗಿದ್ದಾರೆ. ಅವರಿಗೆ -- ಶಿಕ್ಷಣದಲ್ಲಿ ರಂಗಶಿಕ್ಷಣ, ಶಿಕ್ಷಣದಲ್ಲಿ ರಂಗಭೂಮಿಯ ಅಳವಡಿಕೆ, ಶಿಕ್ಷಣಕ್ಕಾಗಿ ರಂಗಭೂಮಿ, ರಂಗಭೂಮಿಯ ಮೂಲಕ ಶಿಕ್ಷಣ, ರಂಗಭೂಮಿಯ ಮೂಲಕ ವ್ಯಕ್ತಿತ್ವ ವಿಕಸನ ಮುಂತಾದ ವಿಷಯಗಳ ಕುರಿತು ಹೆಚ್ಚಿನ ಅರಿವು ಬರುವಂತಾಗಲು — ನೀನಾಸಮ್‌ನಲ್ಲಿ, ಇದೇ ಮೇ ೧೧ರಿಂದ ೨೫ರವರೆಗೆ ಹದಿನೈದು ದಿನಗಳ ಅವಧಿಯ ಒಂದು ಪುನರ್ಮನನ ಶಿಬಿರವನ್ನು ನಡೆಸಲಾಯಿತು. ಬೆಂಗಳೂರಿನ ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐಎಫ್‌ಎ) ಸಂಸ್ಥೆಯವರು ಈ ಶಿಬಿರವನ್ನು ಆಯೋಜಿಸಿದರು. ತಂತಮ್ಮ ಕಲೆಯ ಕೈಂಕರ್ಯಕ್ಕಾಗಿ ಐಎಫ್‌ಎ ಅವರಿಂದ ಅನುದಾನಗಳನ್ನು ಪಡೆಯುವ — ನೀನಾಸಮ್, ಬೊಂಬೆಮನೆ - ಧಾರವಾಡ, ಅನನ್ಯ - ಬೆಂಗಳೂರು ಮತ್ತು ಭಾರತೀಯ ಜನ ವಿಜ್ಞಾನ ಸಮಿತಿ - ಕೋಲಾರ — ಈ ಸಂಸ್ಥೆಗಳ ಸಹಯೋಗದಲ್ಲಿ ಈ ಶಿಬಿರವನ್ನು ನಡೆಸಲಾಗಿತ್ತು. ಈ ನಾಲ್ಕೂ ಸಂಸ್ಥೆಗಳ ಕಾರ್ಯಕರ್ತರು ಶಿಬಿರದ ಸಂಪನ್ಮೂಲ ವ್ಯಕ್ತಿಗಳಾಗಿ ಬಂದು ವಿವಿಧ ಬಗೆಯ ತರಗತಿಗಳನ್ನು ನಡೆಸಿಕೊಟ್ಟರು: 'ಅನನ್ಯ'ದ ಶ್ರೀ ರಾಘವೇಂದ್ರ ಹಾಗೂ ಡಾ. ಸತ್ಯವತಿ, ಪರಮಶಿವಯ್ಯ ಇವರು ಕರ್ನಾಟಕಿ ಶಾಸ್ತ್ರೀಯ ಸಂಗೀತ ಮತ್ತು ರಂಗಸಂಗೀತದ ಕುರಿತು, 'ಬೊಂಬೆಮನೆ'ಯ ಪ್ರಕಾಶ ಗರೂಡ, ರಜನಿ ಗರೂಡ ಮತ್ತು ಸಂಗಡಿಗರು ಮಕ್ಕಳಿಗಾಗಿ ಮಾಡಬಹುದಾದ ವಿವಿಧ ಬಗೆಯ ಗೊಂಬೆಯಾಟಗಳ



ಕುರಿತು, ಬಿಜೆವಿಎಸ್‌ನವರು ಚಿತ್ರಕಲೆಯ ಮೂಲಕ ಪಠ್ಯಬೋಧನೆಯ ವಿಧಾನಗಳ ಕುರಿತು, ಕೆ.ಜಿ. ಕೃಷ್ಣಮೂರ್ತಿಯವರು ಶಿಕ್ಷಣದಲ್ಲಿ ರಂಗಭೂಮಿಯ ಪಠ್ಯಯೋಜನೆಗಳ ಕುರಿತು ಹಾಗೂ ಅಕ್ಷರ, ಐತಾಳ, ಮಂಜು, ಗಣೇಶ, ಚನ್ನಕೇಶವ ಮುಂತಾದವರು ಸಾಹಿತ್ಯ ಮತ್ತು ರಂಗಕಲೆಗಳ ಕುರಿತು ತರಗತಿಗಳನ್ನು ನಡೆಸಿಕೊಟ್ಟರು. ಐಎಫ್‌ಎ ಸಂಸ್ಥೆಯ ಶ್ರೀಮತಿ ಅನುಪಮಾ ಪ್ರಕಾಶ್ ಮತ್ತು ಶ್ರೀ ಸಂಜಯ ಅಯ್ಯರ್ ಅವರು ಶಿಬಿರದ ಮೇಲ್ವಿಚಾರಣೆಯನ್ನು ನೋಡಿಕೊಂಡರು. ಶ್ರೀಮತಿ ಉಷಾ ಮತ್ತು ಶ್ರೀ ಗೌತಮ್ ಅವರು ಒಟ್ಟೂ ಚಟುವಟಿಕೆಗಳ ದಾಖಲಾತಿ ಮಾಡಿಕೊಂಡರು. ಶಿಬಿರದ ಕೊನೆಯಲ್ಲಿ ಕರ್ನಾಟಕ ಸರ್ಕಾರದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಬಂದು ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಪ್ರಮಾಣ ಪತ್ರಗಳನ್ನು ನೀಡಿದರು.

**ನೀನಾಸಮ್ ರಂಗಶಿಕ್ಷಣ ಕೇಂದ್ರದ ಚಟುವಟಿಕೆಗಳು:**

ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು ಮಾರ್ಚ್ ೧೪ ಮತ್ತು ೧೫ರಂದು ತಮ್ಮ ಅಭ್ಯಾಸಮಾಲಿಕೆಯ 'ಮ್ಯಾಕ್ಬೆತ್' (ಶೇಕ್ಸ್‌ಪಿಯರ್ ಅನುವಾದ: ರಾಮಚಂದ್ರ ದೇವ; ನಿ: ಚನ್ನಕೇಶವ) ಹಾಗೂ ಎಪ್ರಿಲ್ ೧೪ ಮತ್ತು ೧೫ರಂದು 'ವೆನಿಸ್ಸಿನ ನೋಟಗಳು' (ಅನುವಾದ ಮತ್ತು ನಿರ್ದೇಶನ: ಅಕ್ಷರ ಕೆ.ವಿ.) ನಾಟಕಗಳನ್ನು ಪ್ರದರ್ಶಿಸಿದರು. ಎಪ್ರಿಲ್ ಮೊದಲವಾರ ರಘುನಂದನ ಅವರು 'ರಂಗಪ್ರಯೋಗ ಮತ್ತು ಬದ್ಧತೆ' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸಗಳನ್ನು ನೀಡಿದರು. ಮೇ ೯ರಿಂದ ೧೫ರವರೆಗೆ ಈ ಸಾಲಿನ ಐದು ಪ್ರಯೋಗಗಳು ಹಾಗೂ ಹಳೆಯ ವಿದ್ಯಾರ್ಥಿಗಳ ಎರಡು ಪ್ರಯೋಗಗಳನ್ನೊಳಗೊಂಡ ನಾಟಕೋತ್ಸವವನ್ನು ನಡೆಸಲಾಯಿತು: ಮಳ್ಳ ಗಿಂಪೆಲ್, ಸೂರ್ಯನ ಕುದುರೆ, ಕತೆಕತೆ ಕಾರಣ, ಮ್ಯಾಕ್ಬೆತ್ ಮತ್ತು ವೆನಿಸ್ಸಿನ ನೋಟಗಳು ಹಾಗೂ ಬ್ಯಾಂಗ್ಲೂರ್ ಡಾನ್ಸ್ ಕಲೆಕ್ಟಿವ್ ತಂಡದವರ ಸಮಕಾಲೀನ ನೃತ್ಯಾಭಿನಯ 'ನ್ಯೂ ಟ್ರಾಷ್' (ನಿ: ಅಭಿಲಾಷ್ ನಿಂಗಪ್ಪ) ಮತ್ತು ವರ್ಕ್‌ಶಾಪ್ ಪ್ರೊಡಕ್ಷನ್- ಬೆಂಗಳೂರು ತಂಡದವರ 'ಲೀಲಾಂತ' (ನಿ: ಹರೀಶ್ ಶೇಷಾದ್ರಿ). ಮೇ ೨೧ರಿಂದ ೨೯ರವರೆಗೆ ಈ ಸಾಲಿನ ವಾರ್ಷಿಕ ಪರೀಕ್ಷೆಗಳು ನಡೆಯಲಿದ್ದು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ಇವರು ಪರೀಕ್ಷೆಗಳನ್ನು ನಡೆಸಿಕೊಡಲಿದ್ದಾರೆ.

## ಮಾತುಕತೆ ೯೦

ನೀನಾಸಮ್ ಹೆಗ್ಗೋಡು (ಸಾಗರ) ಕರ್ನಾಟಕ ೫೭೭ ೪೧೭

ದೂರವಾಣಿ: ೦೮೧೮೩-೨೬೫೬೪೬

ಖಾಸಗಿ ಪ್ರಸಾರದ ತ್ರೈಮಾಸಿಕ ಸಂಪರ್ಕಪತ್ರ

(ಫೆಬ್ರವರಿ-ಮೇ-ಆಗಸ್ಟ್-ನವೆಂಬರ್)

ಸಂಪಾದಕ: ಜಸವಂತ ಜಾಧವ್

ಸಹ ಸಂಪಾದಕ: ವೆಂಕಟರಮಣ ಐತಾಳ ಬಿ. ಆರ್.

ವಾರ್ಷಿಕ ವರ್ಗಣಿ: ಐವತ್ತು ರೂಪಾಯಿ

ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು, ಮುದ್ರಣ: ಸ್ವಾನ್ ಪ್ರಿಂಟರ್ಸ್, ಬೆಂಗಳೂರು

---

**ಮೇ ೨೦೦೯ ವರ್ಷ ಇಪ್ಪತ್ತಮೂರು ಸಂಚಿಕೆ ಎರಡು**


---


೧. **ಪಳಗಿಸಲಾಗದ ವಿಶ್ವಪ್ರಜ್ಞೆಯ ಗೆಲುವು**
ಅಶೀಶ್ ನಂದಿ (ಕನ್ನಡಕ್ಕೆ: ಅಕ್ಷರ ಕೆ.ವಿ.) ಪುಟ ೨

೧. **ಜನಮರುಳೋ ಜಾತ್ರೆ ಮರುಳೋ ಎಂಬ ಪ್ರತಿಕ್ರಿಯೆ ಕುರಿತು**
ಸದಸ್ಯರು, ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರ ಪುಟ ೧೫

೨. **ಪುಟ್ಟದೊಂದು ಪ್ರತ್ಯುತ್ತರ** (ಬಿ.ಎಸ್. ಸೋಮಶೇಖರ ) ಪುಟ ೨೨

೩. **ಜ್ಞಾನದ ಪ್ರಶ್ನೆಗಳು** (ಸುಷುಮ್ನಾ ಕಣ್ಣನ್) ಪುಟ ೨೬

೪. **ನಿರ್ವಸಾಹತೀಕರಣದ ಕಾರ್ಯಕ್ರಮಗಳು ಮತ್ತು ಜ್ಞಾನದ ಮಿತಿಗಳು**
ಎನ್. ಮನು ಚಕ್ರವರ್ತಿ ಪುಟ ೩೦

೫. **ಹಬೀಬ್ ತನ್ವೀರ್: ಒಂದು ನೆನಪು** (ಬಿ.ಆರ್.ವಿ. ಐತಾಳ) ಪುಟ ೩೭

೬. **ಕಲಿ ಕಲಿಸು ಸಂವೇದನಾ ಶಿಬಿರ : ಒಂದು ವರದಿ** ಪುಟ ೩೯


---


**MAATHUKATHE** MAY 2009 (YEAR 23 ISSUE 2)
NINASAM QUARTERLY NEWS LETTER
PUBLISHED EVERY FEB;MAY;AUG;NOV.
ANNUAL SUBSCRIPTION: Rs.50 (FIFTY ONLY)
FOR PRIVATE CIRCULATION
**NINASAM HEGGODU (SAGAR) KARNATAKA 577 417**


← second cover

Third cover →


## ಅಕ್ಷರ ಪ್ರಕಾಶನ

ಹೆಗ್ಗೋಡು (ಸಾಗರ) ಕರ್ನಾಟಕ - ೫೭೭ ೪೧೭

**ಈಚಿನ ಪ್ರಕಟಣೆಗಳು**

---

**ಕೆ.ವಿ.ಸುಬ್ಬಣ್ಣ ನೆನಪಿನ ಮೊದಲ ಓದು ಮಾಲಿಕೆ**
(ಹತ್ತು ಪುಸ್ತಕಗಳ ೨ನೆಯ ಕಂತು: ಅಕ್ಟೋಬರ್ ೨೦೦೭) ರೂ. ೭೫೦
ಬಿಡಿ ಪುಸ್ತಕಗಳು:
**ಶಿವಕೋಟ್ಯಾಚಾರ್ಯನ ವಡ್ಡಾರಾಧನೆ ಪ್ರವೇಶ** ರೂ. ೭೫
**ರನ್ನನ ಗದಾಯುದ್ಧ ಪ್ರವೇಶ** ರೂ. ೭೫
**ಲಕ್ಷ್ಮೀಶನ ಜೈಮಿನಿ ಭಾರತ ಪ್ರವೇಶ** ರೂ. ೭೫
**ಮಹಾತ್ಮ ಗಾಂಧಿ ಅವರ ಆಯ್ದ ಬರಹಗಳು** ರೂ. ೭೫
**ರಾಮಮನೋಹರ ಲೋಹಿಯಾ ಅವರ ಆಯ್ದ ಬರಹಗಳು** ರೂ. ೭೫
**ರಾಘವೇಂದ್ರ ಖಾಸನೀಸ ಅವರ ಆಯ್ದ ಕಥೆಗಳು** ರೂ. ೭೫
**ಪು.ತಿ.ನ. ಅವರ ಆಯ್ದ ಬರಹಗಳು** ರೂ. ೭೫
**ಎಚ್.ಎಸ್. ಶಿವಪ್ರಕಾಶ್ ಅವರ ಆಯ್ದ ಕವಿತೆಗಳು** ರೂ. ೭೫
**ವೈದೇಹಿ ಅವರ ಆಯ್ದ ಕವಿತೆಗಳು** ರೂ. ೭೫
**ಪ್ರತಿಭಾ ನಂದಕುಮಾರ್ ಅವರ ಆಯ್ದ ಕವಿತೆಗಳು** ರೂ. ೭೫
**ಒಂದು ಬದಿ ಕಡಲು** (ಕಾದಂಬರಿ - ವಿವೇಕ ಶಾನಭಾಗ) ರೂ.೧೩೫
**ವೆನಿಸ್ಸಿನ ವ್ಯಾಪಾರ ಮತ್ತು ಕ್ರಮವಿಕ್ರಮ**
(ಶೇಕ್ಸ್ಪಿಯರ್ ನಾಟಕಗಳ ಅನುವಾದ - ಅಕ್ಷರ ಕೆ.ವಿ.) ರೂ.೧೦೦
**ಸ್ವಯಂವರಲೋಕ** (ನಾಟಕ - ಅಕ್ಷರ ಕೆ.ವಿ.) ರೂ.೬೫
**ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು** (ಸಂ: ವಿನಯ ಲಾಲ್ ಮತ್ತು ಅಶೀಶ್ ನಂದಿ; ಕನ್ನಡಕ್ಕೆ: ವಿವಿಧ ಲೇಖಕರು) ರೂ. ೧೬೦
**ಮುಂತಾದ ಕೆಲಪುಟಗಳು** (ಸರಸ್ವತಿಬಾಯಿ ರಾಜವಾಡೆಯವರ ಬದುಕು ಮತ್ತು ಬರಹ -ನಿರೂಪಣೆ ಮತ್ತು ಸಂಪಾದನೆ - ವೈದೇಹಿ) ರೂ. ೬೫
**ಮಗಳು ಸೃಜಿಸಿದ ಸಮುದ್ರ** (ಕವನಗಳು - ಎಸ್. ಮಂಜುನಾಥ) ರೂ. ೬೫
**ಬಹುಮುಖಿ** (ನಾಟಕ - ವಿವೇಕ ಶಾನಭಾಗ) ರೂ. ೪೫
**ಭಾರತೀಯ ತತ್ತ್ವಶಾಸ್ತ್ರಪ್ರವೇಶ** (ಎಂ. ಪ್ರಭಾಕರ ಜೋಷಿ, ಎಂ.ಎ. ಹೆಗಡೆ) ರೂ. ೨೦೦
**ಸಾಹಿತ್ಯ ಸಂಬಂಧ** (ವಿಮರ್ಶಾ ಲೇಖನಗಳು - ಟಿ.ಪಿ. ಅಶೋಕ) ರೂ. ೨೧೦
**ಪೃಥ್ವಿಯಲ್ಲೊದಗಿದ ಘಟವು: ಕರ್ನಾಟಕದ ನಿನ್ನೆಗಳು**
(ಇತಿಹಾಸ - ಮನು ದೇವದೇವನ್) ರೂ. ೧೧೫
**ಆರು ಟಾಲ್ಸ್ಟಾಯ್ ಕತೆಗಳು** (ಅನು: ಮಾಧವ ಚಿಪ್ಪಳಿ) ರೂ. ೮೦
**ರಂಗಭೂಮಿಯ ಮುಖಾಂತರ** (ಲೇಖನ ಸಂಕಲನ - ಅಕ್ಷರ ಕೆ.ವಿ.) ರೂ. ೧೫೦